ಗೌರಿ ಲಂಕೇಶರ

ಲಂಕೇಶ್

ಆಗಸ್ಟ್ 8, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ರೌಡಿ, ಕೌನ್ಸಿಲರ್, ಕ್ರಿಮಿನಲ್‌ಗಳಿಗೆ ಬಗರ್‌ಹುಕುಂ ಭೂಮಿ


ಮಂತ್ರಿ ಅಶೋಕನ ಭೂ ಸುಧಾರಣೆ ಸ್ಟೈಲ್

ಸ್ಕೂಪ್

4500 ಎಕರೆ ದರೋಡೆ

ಅಧಿಕಾರ ಹಸ್ತಾಂತರ

ಗಾಳಿ ಪಟ




ತಿರುಮಲೇಶ್ ಎಂಬ ಚಿಂತಾಜನಕರು!

ಆಳವಿಲ್ಲದ ಜ್ಞಾನ- ಆತ್ಮಸಾಕ್ಷಿಯಿಲ್ಲದ ನಿರಾಳ!

ಚಾರ್ವಾಕ


ಶಿವಸುಂದರ್



ಬುದ್ಧಿಜೀವಿಗಳಾದ ಕೆ.ವಿ. ತಿರುಮಲೇಶ್‌ರು ಕೇರಳದ ಕಾಸರಗೋಡಿನವರು. ಈಗ ಹೈದರಾಬಾದಿನಲ್ಲಿ ನೆಲೆಸಿದ್ದರೂ ಕನ್ನಡದ ವಿಮರ್ಶೆ ಮತ್ತು ಇತರ ಸಾಹಿತ್ಯ ಪ್ರಕಾರಗಳಲ್ಲಿ ಹೆಸರಾಂತ ಚಿಂತಕರು. ಇದುವರೆಗೆ ಸಾಹಿತ್ಯ ಇತ್ಯಾದಿಗಳ ಬಗ್ಗೆ ಮಾತ್ರ ತಲೆಕೆಡಿಸಿಕೊಳ್ಳುತ್ತಿದ್ದ ಮಾನ್ಯರು ಇತ್ತೀಚೆಗೆ ಕರ್ನಾಟಕದ ಜನಜೀವನವನ್ನು ಪ್ರಭಾವಿಸುತ್ತಿರುವ ಹಲವಾರು ಸಮಕಾಲೀನ ಅಂಶಗಳ ಬಗ್ಗೆ ಹೈದರಾಬಾದಿನಿಂದಲೇ ಪರಿಣಿತ ವ್ಯಾಖ್ಯಾನಗಳನ್ನು ಕೊಡಲು ಪ್ರಾರಂಭಿಸಿದ್ದಾರೆ. ಅದಕ್ಕಾಗಿಯೇ ಪ್ರಗತಿಪರ ಸಾಹಿತಿಗಳಾದ ತಿರುಮಲೇಶ್‌ರು ಈ ನಾಡು ಕಂಡ ಅತ್ಯಂತ ಪ್ರತಿಗಾಮಿ ಮತ್ತು ಚೆಡ್ಡಿ ಪತ್ರಿಕೆಯಾದ ವಿಜಯ ಕರ್ನಾಟಕಕ್ಕೆ ಪ್ರತಿ ಶುಕ್ರವಾರ ಒಂದು ಕಾಲಮ್ಮನ್ನು ಬರೆಯಲು ಪ್ರಾರಂಭಿಸಿದ್ದಾರೆ. ಇರಲಿ, ಅದು ಅವರ ಅಭಿವ್ಯಕ್ತಿ ಸ್ವಾತಂತ್ರ್ಯ!

ಇತ್ತೀಚೆಗೆ ಅವರು ಸುದ್ದಿಯಾದದ್ದು ಕಾವೇರಿ ಗಲಾಟೆಯಲ್ಲಿ ಗಿರೀಶ್ ಕಾರ್ನಾಡರು ಕೊಟ್ಟ ಬೇಜವಾಬ್ದಾರಿ ಹೇಳಿಕೆಯನ್ನು ಖಂಡಿಸಿ ಪ್ರಜಾವಾಣಿಯಲ್ಲಿ ಬರೆದ ಲೇಖನದಿಂದ. ಅದರಲ್ಲಿ ಅವರು ಕಾವೇರಿ ವಿವಾದದ ಬಗ್ಗೆ ತಮ್ಮ ಚಿಂತಾಜನಕ ಜ್ಞಾನವನ್ನು ಮತ್ತು ಕಾರ್ನಾಡರ ಬಗ್ಗೆ ವ್ಯಕ್ತಿಗತ ನೆಲೆಯಲ್ಲಿನ ಚಿಂತಕ ವಿಷಾದವನ್ನು ವ್ಯಕ್ತಪಡಿಸಿದ್ದರು. ಅದರಲ್ಲಿ ಕಾರ್ನಾಡರ ಹೇಳಿಕೆಯ ಬಗ್ಗೆ ಅವರೆತ್ತಿದ ಮೂಲಭೂತವಾದ ಆಕ್ಷೇಪಣೆಯೆಂದರೆ ಎಂದಿಗೂ ಹೊಲ ಉಳದ ಅಥವಾ ದುಡಿಮೆ ಮಾಡದ ಬುದ್ಧಿಜೀವಿಗಳಿಗೆ ರೈತರ ಬದುಕಿಗೆ ಯಾವುದು ಒಳ್ಳೆಯದು ಅಥವಾ ಅಲ್ಲ ಎಂಬ ಬಗ್ಗೆ ಅಭಿಪ್ರಾಯ ಇರುವುದು ತರವಲ್ಲ, ಅದು ಬುದ್ಧಿಜೀವಿಗಳಿಗೆ ಇರುವ ದುರಹಂಕಾರವನ್ನೇ ಸೂಚಿಸುತ್ತದೆ, ಇತ್ಯಾದಿ, ಇತ್ಯಾದಿ. ಅದು ಕಾರ್ನಾಡರಿಗೆ ಎಷ್ಟು ಅನ್ವಯಿಸುತ್ತದೋ ಅಷ್ಟೇ ಮಟ್ಟಿಗೆ ಎಲ್ಲಾ ಬುದ್ಧಿಜೀವಿಗಳಿಗೂ ಅನ್ವಯಿಸಬೇಕಲ್ಲವೇ? ಹಾಗೂ ತಿರುಮಲೇಶ್‌ರಿಗೂ ಕೂಡಾ ಅನ್ವಯಿಸಲೇಬೇಕಲ್ಲವೇ?

ಆದರೂ ಕಳೆದ ಎರಡು ವಾರಗಳಿಂದ ಕರ್ನಾಟಕದ ಆಗುಹೋಗುಗಳ ಬಗ್ಗೆ ಅತೀವ ಆತಂಕದಿಂದ ಬರೆಯುತ್ತಿರುವ ತಿರುಮಲೇಶ್‌ರು ತುಳಿತಕ್ಕೊಳಗಾದ ಜನತೆ ಸಂಸದೀಯ ಪ್ರಜಾತಂತ್ರವನ್ನು ಬಿಟ್ಟು ಬೇರೆ ಯಾವುದನ್ನು ಆಯ್ಕೆ ಮಾಡಿಕೊಂಡರೂ ಅದು ಅವರ ಮುಗ್ಧತನದ ದುರುಪಯೋಗ ಮಾತ್ರ ಎಂದು ಆದೇಶ ಹೊರಡಿಸಿದ್ದಾರೆ. ಆದರೆ ಆದೇರೀತಿ ಮಾವೋವಾದದ ಬಗ್ಗೆ ಮತ್ತು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ನಕ್ಸಲ್ ಚಳವಳಿ ಆಚರಣೆಯಲ್ಲಿ ಇರುವ ರೀತಿಯ ಬಗ್ಗೆ ಬಹಳಷ್ಟು ಪೂರ್ವಾಗ್ರಹಗಳಿಂದ ಮತ್ತು ಒಂದಷ್ಟು ಸಕಾರಣದಿಂದ ತಾತ್ವಿಕ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಮೆಣಸಿನಹಾಡ್ಯದಲ್ಲಿ ಈ ಪ್ರಜಾತಂತ್ರೀಯ ಪ್ರಭುತ್ವದ ರಾಕ್ಷಸೀಯ ಹಿಂಸೆ ನಾಲ್ವರು ಮುಗ್ಧ ಆದಿವಾಸಿಗಳನ್ನು ಬಲಿ ತೆಗೆದುಕೊಂಡರೂ ಆ ಹಿಂಸೆಯ ಬಗ್ಗೆ ಒಂದಕ್ಷರವನ್ನೂ ಬರೆಯದೆ ನಕ್ಸಲ್ ಹಿಂಸೆ ಮತ್ತು ಕಮ್ಯುನಿಸ್ಟ್ ತತ್ವದಲ್ಲಿನ ಹಿಂಸೆಯ ಬಗ್ಗೆ ಮಾತ್ರ ಖಂಡನೆಯ ಧಾರೆಯನ್ನು ಹರಿಸಿದ್ದಾರೆ.



ಅವರ ವಾದದಲ್ಲಿ ಇಂಗಿತವಾಗಿರುವಂತೆ ಕಮ್ಯುನಿಸ್ಟ್ ತತ್ವದ ಆಚರಣೆಯಲ್ಲಿ ಬಂದ ಅತಿರೇಕಗಳನ್ನು ಮತ್ತು ನಕ್ಸಲ್ ಆಚರಣೆಯಲ್ಲಿ ಇರುವ ತಪ್ಪುಗಳನ್ನು ಸಾರ್ವಜನಿಕ ಚರ್ಚೆಗೆ ಒಳಪಡಿಸುವುದರಲ್ಲಿ ಯಾವುದೇ ತಕರಾರಿರಬೇಕಿಲ್ಲ. ವಾಸ್ತವವಾಗಿ ಅದರ ಪ್ರತಿಪಾದಕರೇ ಸ್ವವಿಮರ್ಶಾತ್ಮಕವಾಗಿ ಅಂಥ ಚರ್ಚೆಗೆ ಮುಂದಾಗುವುದು ಇನ್ನೂ ಆರೋಗ್ಯಕರ.

ಆದರೆ ತಿರುಮಲೇಶ್‌ರು ತಾವು ನಂಬುವ, ಈಗ ಅಸ್ತಿತ್ವದಲ್ಲಿರುವ ಪ್ರಜಾತಂತ್ರದ ಬಗ್ಗೆ ಧಾರ್ಮಿಕ ಮೂಲಭೂತವಾದಿಯಷ್ಟೇ ಕುರುಡುತನದಿಂದ ವಾದಿಸುವುದು ಕನಿಕರ ಹುಟ್ಟಿಸುತ್ತದೆ. ಈ ಕುರುಡೇ ಅವರನ್ನು ಮೆಣಸಿನಹಾಡ್ಯದ ಪ್ರಭುತ್ವ ಹಿಂಸೆಯ ಬಗ್ಗೆ ಒಂದು ಸಾಲನ್ನೂ ಬರೆಯದಷ್ಟು ಕ್ರೂರಿಯನ್ನಾಗಿಸಿದೆ.

ಯಾವ ರೀತಿ ಪಾವಗಡ, ಕೆಸಮುಡಿ ಇತ್ಯಾದಿ ಕಡೆಗಳಲ್ಲಿ ನಕ್ಸಲರ ಹಿಂಸಾಚಾರವನ್ನು ಖಂಡಿಸದ ಪ್ರಗತಿಪರರಿಗೆ ಪ್ರಭುತ್ವ ಹಿಂಸೆಯನ್ನು ಮಾತ್ರ ಖಂಡಿಸುವ ಅರ್ಹತೆ ಬರಲಾರದೋ ಅದೇ ರೀತಿ ಈಗ ಹಿಂಸಾರೂಪಿಯಾಗಿರುವ ಪ್ರಜಾತಂತ್ರದ ಸ್ವರೂಪವನ್ನು ಗುರುತಿಸಲಾಗದ ಮತ್ತು ಕಣ್ಣೆದುರಿಗೇ ನಡೆಯುತ್ತಿರುವ ಪ್ರಭುತ್ವ ಹಿಂಸೆಯನ್ನು ಖಂಡಿಸದ ಮೂಲಭೂತವಾದಿ ಪ್ರಜಾತಂತ್ರವಾದಿಗಳಿಗೂ ನಕ್ಸಲ್ ಹಿಂಸೆಯನ್ನು ಖಂಡಿಸುವ ನೈತಿಕ ಅರ್ಹತೆ ಹೇಗೆ ಬರುತ್ತದೆ? ಇಂಥ ಪ್ರಜಾತಂತ್ರವಾದಿಗಳನ್ನು ನೋಡಿಯೇ ಜಗತ್ತು ಕಂಡ ಅತಿ ಶ್ರೇಷ್ಠ ಪ್ರಜಾತಂತ್ರವಾದಿಯಾದ ಜೀನ್ ಪಾಲ್ ಸಾರ್ತ್ರ್ ಒಂದು ಮಾತು ಹೇಳಿದ್ದರು. ಆ ಕಾಲದಲ್ಲೂ ಬ್ರಿಟನ್, ಫ್ರಾನ್ಸ್‌ನಂತಹ ಪ್ರಜಾತಂತ್ರವಾದಿ ದೇಶಗಳು ವಸಾಹತುಗಳಲ್ಲಿ ಭೀಕರ ಮತ್ತು ಬರ್ಬರ ಶೋಷಣೆಯನ್ನು ನಡೆಸುತ್ತಿದ್ದವು. ಆ ಶೋಷಣೆಯ ಫಲದಿಂದಲೇ ಆ ದೇಶಗಳು ತಮ್ಮ ದೇಶದ ಜನರನ್ನು ಮತ್ತು ಈ ಪ್ರಜಾತಂತ್ರವಾದಿ ಪುತ್ರರನ್ನು ಚೆನ್ನಾಗಿ ಸಾಕಿಕೊಂಡಿತ್ತು. ಆದ್ದರಿಂದಲೇ ಅವರು ವಸಾಹತು ದೇಶಗಳಲ್ಲಿ ತಮ್ಮ ಪ್ರಜಾತಂತ್ರ ನಡೆಸುತ್ತಿರುವ ದಮನವನ್ನು ನೋಡಲೂ ನಿರಾಕರಿಸುತ್ತಿದ್ದರು ಮತ್ತು ಆ ದೇಶಗಳಲ್ಲಿ ನಾಗರಿಕತೆ ಕಲಿಸಲು ಈ ಬರ್ಬರತೆ ಅಗತ್ಯ ಎನ್ನುವ ತಮ್ಮ ದೇಶಗಳ ಪ್ರಜಾತಂತ್ರದ ಮುಸುಕಿನ ವಸಾಹತುವಾದಿಗಳ ವಾದವನ್ನು ಪ್ರಶ್ನಿಸದೇ ಒಪ್ಪಿಕೊಳ್ಳುತ್ತಿದ್ದರು. ಫ್ರಾನ್ಸ್‌ನ ವಸಾಹತುವಾದ ಅಲ್ಜೀರಿಯಾದ ವಿಮೋಚನಾ ಹೋರಾಟಗಾರ ಫ್ರಾನ್ಜ್ ಫೆನಾನ್, ಪ್ರಜಾತಂತ್ರವಾದಿ ಫ್ರಾನ್ಸ್ ಅಲ್ಜೀರಿಯಾದಲ್ಲಿ ನಡೆಸಿದ ಬರ್ಬರ ಶೋಷಣೆಯಿಂದ ಆಗಿರುವ ಪರಿಣಾಮಗಳ ಬಗ್ಗೆ ಬರೆದ 'ರೆಚಿಡ್ ಆಫ್ ದಿ ಅರ್ತ್' ಎಂಬ ಪುಸ್ತಕದ ಮುನ್ನುಡಿಯಲ್ಲಿ ಇಂಥ ಸೋಗಲಾಡಿ ಪ್ರಜಾತಂತ್ರವಾದಿಗಳ ಬಗ್ಗೆ ಸಾರ್ತ್ರ್ ಹೀಗೆ ಬರೆಯುತ್ತಾರೆ: "ಈ ಪ್ರಜಾತಂತ್ರವಾದಿ ದೇಶಗಳು ತಮ್ಮ ವಸಾಹತುಗಳಲ್ಲಿ ಅತಿ ನಗ್ನವಾದ ಶೋಷಣೆಯನ್ನು ನಡೆಸುತ್ತಿದ್ದಾರೆ. ಈ ವಸಾಹತುವಾದಿಗಳ ಶೋಷಣೆ ಅತಿ ನಗ್ನವಾಗಿಯೇ ನಡೆಯುತ್ತಿದ್ದರೂ ನಮ್ಮ ಬುದ್ಧಿಜೀವಿಗಳು ಮಾತ್ರ ಅದಕ್ಕೆ ಬಟ್ಟೆ ತೊಡಿಸಿಯೇ ನೋಡಬಯಸುತ್ತಾರೆ"! ಅಂದರೆ ಕಣ್ಣೆದುರಿಗೆ ಶೋಷಣೆ ಕಾಣುತ್ತಿದ್ದರೂ ಅವರು ಅದನ್ನು ನಿರಾಕರಿಸುತ್ತಾರೆ ಅಥವಾ ಅದನ್ನು ನೋಡಲು ನಿರಾಕರಿಸುತ್ತಾರೆ.

ತಿರುಮಲೇಶ್‌ರು ಕಟ್ಟರ್ ಕಮ್ಯುನಿಸ್ಟ್ ಸಿದ್ಧಾಂತವನ್ನು ಮತ್ತು ಶಸ್ತ್ರಧಾರಿ ನಕ್ಸಲ್ ಆಚರಣೆಯನ್ನು ನಿರಾಕರಿಸುವ ಭರದಲ್ಲಿ, ಈ "ಶಸ್ತ್ರಧಾರಿ ಪ್ರಜಾತಂತ್ರವು" ಕಳೆದ 60 ವರ್ಷಗಳಲ್ಲಿ ಈ ದೇಶದ ಆದಿವಾಸಿಗಳ, ಮೇಲೆ ಭೂರಹಿತರ ಮೇಲೆ ಮತ್ತು ಕಾರ್ಮಿಕರ ಮೇಲೆ ನಡೆಸಿರುವ ಅತ್ಯಾಚಾರದ ಬಗ್ಗೆ ವಸಾಹತುವಾದಿ ದೇಶಗಳ ಪ್ರಜಾತಂತ್ರವಾದಿಗಳಂತೆ ಕುರುಡಾಗಿದ್ದಾರೆ ಮತ್ತು ನಡೆಯುತ್ತಿರುವ ನಗ್ನ ಅನ್ಯಾಯಗಳಿಗೆ ಬಟ್ಟೆ ತೊಡಿಸಿಯೇ ನೋಡುತ್ತಿದ್ದಾರೆ.

ಆದರಲ್ಲೂ ಕಳೆದ ವಾರ ಅವರು ಬರೆದಿರುವ ಅಂಕಣದಲ್ಲಿ ಆದಿವಾಸಿಗಳನ್ನು ಕಾಡಿನಲ್ಲೇ ಬದುಕಲು ಬಿಡಬೇಕು ಎಂದು ವಾದಿಸುವುದರಲ್ಲಿ ನಕ್ಸಲರ ಪಟ್ಟಭದ್ರ ಹಿತಾಸಕ್ತಿ ಇದೆ ಮತ್ತು ಅವರೆಲ್ಲ ನಗರಕ್ಕೆ ಬಂದರೆ ಎಲ್ಲರಿಗೂ ಉತ್ತಮ ಬದುಕಿನ ಅವಕಾಶ ಸಿಗುತ್ತದೆ ಎಂದು ಹೇಳಿರುವುದರಲ್ಲಿ ಅವರ ರಾಜಕೀಯ ಮುಗ್ಧತನ ಮಾತ್ರವಲ್ಲ ತಮ್ಮ ನಂಬಿಕೆಯ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚದ ಮೂಲಭೂತವಾದವು ಎದ್ದು ಕಾಣುತ್ತದೆ. ಅಷ್ಟೆ ಅಲ್ಲ ಒಂದು ವೇಳೆ ಆದಿವಾಸಿಗಳೇ ಸ್ವ ಇಚ್ಛೆಯಿಂದ ಕಾಡಿನಲ್ಲಿ ಇರಬೇಕೆಂದು ಬಯಸಿದರೂ ಅದು ಅವರ ದಡ್ಡತನವೆಂಬಂತೆ ಬರೆದಿರುವುದು ಕಾರ್ನಾಡರಷ್ಟೇ ತಿರುಮಲೇಶ್‌ರಿಗೂ ಬುದ್ಧಿಜೀವಿ ದುರಹಂಕಾರವಿದೆಯೆಂದು ದೃಢಪಡಿಸುತ್ತದೆ.

ಮೊದಲನೆಯದಾಗಿ ಆದಿವಾಸಿಗಳನ್ನು ಕಾಡಿನಲ್ಲೇ ಇರಬೇಕೆನ್ನುವುದರಲ್ಲಿ ಪಟ್ಟಭದ್ರ ಹಿತಾಸಕ್ತಿ ಇದೆಯೆನ್ನುವ ತಿರುಮಲೇಶ್‌ರಿಗೆ ಆದಿವಾಸಿಗಳನ್ನು ಕಾಡಿನಿಂದ ಹೊರಗಟ್ಟುವುದರ ಹಿಂದಿರುವ ಅಂತಾರಾಷ್ಟ್ರೀಯ ಸಾಮ್ರಾಜ್ಯಶಾಹಿಗಳ ಪಟ್ಟಭದ್ರ ಹಿತಾಸಕ್ತಿ ಏಕೆ ಕಾಣಿಸುತ್ತಿಲ್ಲ? ಕಳೆದ ತಿಂಗಳೊಂದರಲ್ಲಿ ಮಹಾರಾಷ್ಟ್ರ, ರಾಜಾಸ್ಥಾನ ಮತ್ತು ಆಂಧ್ರ ಪ್ರದೇಶದ ಗುಡ್ಡಗಾಡು ಪ್ರದೇಶಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆದಿವಾಸಿ ಮಕ್ಕಳು ಮತ್ತು ಹೆಂಗಸರು ಹಸಿವಿನಿಂದ ಸತ್ತರೆಂದು ವರದಿಯಾಗಿದೆ. ಕಾರಣ- ಪಾರಂಪರಿಕ ಉದ್ಯೋಗವಾದ ಕಾಡುತ್ಪನ್ನಗಳನ್ನು ಸಂಗ್ರಹಿಸಿ ಮಾರಲು ಅರಣ್ಯ ಇಲಾಖೆ ಅಡ್ಡಿಪಡಿಸಿದ್ದರಿಂದ ಅವರ ಆದಾಯದ ಪ್ರಮುಖ ಮೂಲವೊಂದಕ್ಕೆ ಬಲವಾದ ಕತ್ತರಿ ಬಿದ್ದಿರುವುದು. ಆದರೆ ಅದೇ ಸಮಯದಲ್ಲಿ ಪ್ರಪಂಚದ ಅತಿ ಶ್ರೀಮಂತರ ಪಟ್ಟಿಯನ್ನು ಪ್ರಕಟಿಸುವ ಫೋರ್ಬ್ಸ್ ಸಂಸ್ಥೆ ಈ ಕುಬೇರರ ಪಟ್ಟಿಯಲ್ಲಿ ಇತ್ತೀಚೆಗೆ ಜೀವ ವೈವಿಧ್ಯವನ್ನು ಆಧರಿಸಿಯೇ ಬಯೋ-ಟೆಕ್ ಉದ್ಯಮದ ಸಂಸ್ಥಾನಗಳನ್ನು ಕಟ್ಟಿರುವ ಹತ್ತಕ್ಕೂ ಹೆಚ್ಚು ಸಂಸ್ಥೆಗಳನ್ನು ಪಟ್ಟಿ ಮಾಡಿದೆ. ಅಂದರೆ ಇವರೂ ಸಹ ಕಾಡುತ್ಪನ್ನವನ್ನು ಆಧರಿಸಿರುವವರೇ! ಆದರೆ ಆದಿವಾಸಿಗಳಿಗೆ ಕಾಡು ಪ್ರವೇಶವನ್ನೇ ನಿರಾಕರಿಸಿ ಬಹುರಾಷ್ಟ್ರೀಯ ಬಯೋಟೆಕ್ ಸಂಸ್ಥೆಗಳಿಗೆ ಅರಣ್ಯವನ್ನೇ ಬರೆದುಕೊಟ್ಟುಬಿಟ್ಟಿದೆ. ಹೀಗಾಗಿ ಆದಿವಾಸಿಗಳ ಹಸಿವಿನ ಸಾವುಗಳು ಹಾಗೂ ಬಯೊ-ಟೆಕ್ ಉದ್ಯಮಗಳ ಸಂಪನ್ನತೆ ಎರಡೂ ಒಂದೇ ಪ್ರಕ್ರಿಯೆಯ ಆದರೆ ತದ್ವಿರುದ್ಧ ಮುಖಗಳಾಗಿವೆ.

ಆದೇರೀತಿ ನಗರಕ್ಕೆ ಬಂದು ಬಿಟ್ಟರೆ ಅವಕಾಶದ ಹೆಬ್ಬಾಗಿಲು ತೆರೆದುಕೊಳ್ಳುತ್ತದೆ ಎಂದು ತಿಳಿದುಕೊಂಡಿರುವ ನಮ್ಮ ಬುದ್ಧಿಜೀವಿ ತಿರುಮಲೇಶ್‌ರಿಗೆ ಅವರು ವಾಸಿಸುತ್ತಿರುವ ಹೈದರಾಬಾದಿನಲ್ಲೇ ತಮ್ಮ ಹಾಡಿ ಮತ್ತು ಹಳ್ಳಿಗಳಿಂದ ದೂಡಲ್ಪಟ್ಟು ಸ್ಲಂಗಳಲ್ಲಿ ಉತ್ತಮ ಬದುಕುವ ಅವಕಾಶಗಳಿರಲಿ, ಬದುಕುವ ಅವಕಾಶವೂ ಇಲ್ಲದೆ ಸಾಯುತ್ತಿರುವ ಸ್ಲಂವಾಸಿಗಳೇಕೆ ಕಣ್ಣಿಗೆ ಕಾಣುವುದಿಲ್ಲ? ಸ್ಲಂನಂಥ ನರಕಗಳಿದ್ದರೂ ತಾವಿರುವ ನಗರಕ್ಕೆ ಸ್ವರ್ಗದ ಬಟ್ಟೆ ಹಾಕಿಯೇ ನೋಡುವ ತಿರುಮಲೇಶ್‌ರು ವಸಾಹತುವಾದಿ ಬುದ್ಧಿಜೀವಿಗಳಿಗಿಂತ ಯಾವ ರೀತಿ ಭಿನ್ನವಾಗುತ್ತಾರೆ?

ಕಾಡಿನಲ್ಲಿದ್ದರೂ ನ್ಯಾಷನಲ್ ಪಾರ್ಕ್‌ಗಳಿಗಾಗಿ, ಬಯಲಿನಲ್ಲಿದ್ದರೆ ವಿದೇಶಿ ಬಂಡವಾಳದ ಎಸ್‌ಇಜೆಡ್‌ಗಳಿಗಾಗಿ, ಸ್ಲಂನಲ್ಲಿದ್ದರೆ ನಗರದ ಸುಂದರೀಕರಣಕ್ಕಾಗಿ ಮತ್ತು ವಿದೇಶಿ ಮಾಲ್ ಮತ್ತು ಹೈವೇಗಳಿಗಾಗಿ ಎತ್ತಂಗಡಿಯಾಗುತ್ತಾ ಈ ಪ್ರಜಾತಂತ್ರ ಮತ್ತು ಸ್ವತಂತ್ರ ದೇಶದಲ್ಲೇ ನಿರಾಶ್ರಿತ ವಸಾಹತುಗಳಾಗಿರುವ ಬಹುಸಂಖ್ಯಾತ ಭಾರತೀಯರು ತಿರುಮಲೇಶ್‌ರ ಕಣ್ಣಿಗೆ ಏಕೆ ಬೀಳುವುದಿಲ್ಲ? ■

ವಾರದ ವಿವೇಕ

"ಗ್ಲಾಸ್ಗೋ ಕಾರು ನಿಜಕ್ಕೂ ಆತ್ಮಾಹುತಿ ದಾಳಿಯೋ ಅಥವಾ ಅಪಘಾತವೋ ಎನ್ನುವುದು ಇನ್ನಷ್ಟೇ ನಿರ್ಧಾರವಾಗಬೇಕಾಗಿದೆ. ಆದರೆ ಪತ್ರಿಕೆಗಳು ತಮ್ಮ ಆತ್ಮಸಾಕ್ಷಿಯನ್ನು ಬಲಿಗೊಟ್ಟು ಹನೀಫರ ಮನೆಯೊಳಗೆ ನುಗ್ಗಿ ಆತ್ಮಾಹುತಿ ದಾಳಿ ನಡೆಸಿರುವುದು ಬಟಾಬಯಲಾಗಿದೆ.... ಈಗ ಹನೀಫರು ತಾವು ಭಯೋತ್ಪಾದಕನಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇದೀಗ ಈ ದೇಶದ ಮಾಧ್ಯಮಗಳು ತಾವು ಕೂಡ ಭಯೋತ್ಪಾದಕರಲ್ಲ ಎಂಬುದನ್ನು ಸಾಬೀತುಪಡಿಸಬೇಕಾಗಿದೆ."

-'ವಾರ್ತಾಭಾರತಿ' ಸಂಪಾದಕೀಯದ ಕೆಲವು ಸಾಲುಗಳು



No Comments




"ಗ್ರಾಮ ಸಭೆಗಳು ಧೃತರಾಷ್ಟ್ರಸಭೆಗಳಾಗಿವೆ."

- ಸ್ಪೀಕರ್ ಕೃಷ್ಣ

"ಇತಿಹಾಸದಲ್ಲಿ ಅಕ್ಟೋಬರ್ ತಿಂಗಳಿಗೆ ದೊಡ್ಡ ಮಹತ್ವವಿದೆ. ಬರುವ ಅಕ್ಟೋಬರ್‌ನಲ್ಲಿ ಕರ್ನಾಟಕದಲ್ಲೂ ಒಂದು ಕ್ರಾಂತಿ ಸಂಭವಿಸಲಿದೆ."

- ವೈ.ಎಸ್.ವಿ.ದತ್ತ, ಜೆಡಿಎಸ್



"ಒಂದು ವೇಳೆ ನಮ್ಮ ಮನೆಯಲ್ಲಿ ದನಕರುಗಳಿವೆ ಎಂದು ಹೇಳಿದರೆ ಲೋಕಾಯುಕ್ತರು ಅದು ಸಗಣಿ ಎಷ್ಟು ಹಾಕುತ್ತದೆ ಎಂದು ಕೇಳುತ್ತಿದ್ದರು ಅಂತಾ ಕಾಣುತ್ತೆ."

- ರಮೇಶ್ ಕುಮಾರ್



"ಮಹಿಳಾ ಆಯೋಗ ಇರುವುದು ಮಹಿಳೆಯರಿಗೆ ನ್ಯಾಯ ಕೊಡಿಸಲಿಕ್ಕೆ. ಆದರೆ ಇಲ್ಲಿ ನೇಸರ್ಗಿಯವರು ಗಂಡಸರಿಗೆ ನ್ಯಾಯ ಕೊಡಿಸಲು ಓಡಾಡುತ್ತಿದ್ದಾರೆ."

- ನರ್ಸ್ ಜಯಲಕ್ಷ್ಮಿ

"ನನ್ನ ಅಜ್ಜ ಕೀನ್ಯದಲ್ಲಿ ಬ್ರಿಟಿಷನೊಬ್ಬನ ಬಾಣಸಿಗನಾಗಿದ್ದ. ನಾಗರಿಕ ಹಕ್ಕು ಚಳವಳಿಯ ಭಾಗವಾಗಿದ್ದರೆ ನನ್ನ ಬಿಳಿಯ ಅಮ್ಮ ಮತ್ತು ಕರಿಯ ಅಪ್ಪನ ಮದುವೆಯೂ ಆಗುತ್ತಿರಲಿಲ್ಲ, ನನ್ನ ಅಸ್ತಿತ್ವವೂ ಸಾಧ್ಯವಾಗುತ್ತಿರಲಿಲ್ಲ."

- ಒಬಾಮಾ

ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಶೇ.77ರಷ್ಟು ಭಾರತೀಯರು ತಮ್ಮ ಸರ್ಕಾರಗಳ ಬಗ್ಗೆ ಸಂತೃಪ್ತಿ ಹೊಂದಿದ್ದಾರೆ."

- ಒಂದು ವಿದೇಶಿ ಸರ್ವೆ



"ಕರ್ನಾಟಕದಲ್ಲಿ ಇರುವ 6 ಕೋಟಿ ಜನಗಳು ಪ್ರಗತಿಪರರೇ. ಇಲ್ಲಿ ಕೋಮುವಾದಿ ಪಕ್ಷವೆಂಬುದೇ ಇಲ್ಲ."

- ಶಂಕರ್ ಬಿದರಿ, ಹೆಚ್ಚುವರಿ ಪೊಲೀಸ್ ನಿರ್ದೇಶಕ

"ಈ ದೇಶದ 110 ಕೋಟಿ ಜನರ ಆಶೋತ್ತರಗಳ ಬೃಹತ್ ಹೊರೆ ನನ್ನ ಹೆಗಲ ಮೇಲಿದೆ."

- ಪ್ರತಿಭಾ ಪಾಟೀಲ್



"ಒಂದು ವರ್ಷದೊಳಗೆ ಹತ್ತು ಸಿನಿಮಾ ತಯಾರಿಸಲಿದ್ದೇನೆ. ಅದರಲ್ಲಿ ಆರು ಚಿತ್ರದ ನಿರ್ದೇಶನದ ಹೊಣೆ ಇಂದ್ರಜಿತ್ ಲಂಕೇಶ್‌ರದು"

- ಅಶೋಕ್ ಖೇಣಿ

"ಅನುದೇವಾ ಮುಟ್ಟುಗೋಲಿನ ವಿರುದ್ಧ ಗೋಕಾಕ್ ಮಾದರಿ ಹೋರಾಟ ರೂಪಿಸಲಾಗುವುದು."

- ಚಂಪಾ

ವಾರದ ಅಚ್ಚರಿ

"ಬಿಜೆಪಿ ಹಣೆಗೆ ಕುಂಕುಮ ಇಟ್ಟುಕೊಳ್ಳುತ್ತದೆ ಉಳಿದವರು ಇಲ್ಲ. ರಾಜಕೀಯ ಪಕ್ಷಗಳ ನಡುವೆ ಇರುವ ವ್ಯತ್ಯಾಸ ಅಷ್ಟೆ."

- ಪ್ರತಾಪ್ ಸಿಂಹ, ವಿಕದ 'ಬೆತ್ತಲೆ..' ಅಂಕಣಕಾರ

ಈ ಪರಿ ಹತಾಶೆ!

"ಅಧಿಕಾರ ಹಸ್ತಾಂತರಕ್ಕಾಗಿ ಅಕ್ಟೋಬರ್ 3 ರ ಸಂಜೆ 6.30ರ ತನಕ ಕಾಯುತ್ತೇವೆ."

- ಸದಾನಂದ ಗೌಡ

ಇದಕ್ಕೆ ಅರ್ಥವೇನು?

"ರಾಜ್ಯದಲ್ಲಿ ಜೆಡಿಎಸ್‌ನಿಂದ ಅಧಿಕಾರ ಹಸ್ತಾಂತರ ಆದಾಗ ಯಡಿಯೂರಪ್ಪ ಅವರೇ ಮುಖ್ಯಮಂತ್ರಿ ಆಗುತ್ತಾರೆ."

- ಅನಂತಕುಮಾರ್

ಮೊರೆ!

"ಓ ದೇವರೇ ಈ ವ್ಯಕ್ತಿಯನ್ನು ಕ್ಷಮಿಸು! ಈತನಿಗೆ ತಾನೇನು ಮಾಡುತ್ತಿದ್ದೇನೆ ಎಂಬ ಅರಿವಿಲ್ಲ."

- ಗಲ್ಲುಶಿಕ್ಷೆ ಪಡೆದ ಯಾಕೂಬ್ ಮುಂಬೈ ಟಾಡಾ ಕೋರ್ಟಿನಲ್ಲಿ ತೆಗೆದ ಉದ್ಗಾರ

ಪ್ರಬುದ್ಧರ ಚಾಲಿಶತೆ



"ಅಬ್ದುಲ್ ಕಲಾಂ ಪ್ರತಿನಿಧಿಸಿದ್ದು ಈ ಮಹಾನ್ ರಾಷ್ಟ್ರದ ಬದುಕಿನ ಜೀವಾಳವಾದ ಸೆಕ್ಯುಲರಿಸಮ್ಮನ್ನು."

- ರವೀಂದ್ರ ರೇಷ್ಮೆ, ಹಿರಿಯ ಪತ್ರಕರ್ತರು

ಸಂಪುಟ:3 ಸಂಚಿಕೆ :18

ಪೊಲೀಸರ ದೌರ್ಜನ್ಯ ಮತ್ತು ಪ್ರಗತಿಪರರ ಅನೈಕ್ಯತೆ

'ಭಯೋತ್ಪಾದಕ' ಎಂಬ ಆರೋಪವನ್ನು ಹೊತ್ತು ಬಂಧನಕ್ಕೊಳಗಾಗಿದ್ದ ಹನೀಫ್ ಈಗ ಬಿಡುಗಡೆಗೊಂಡಿದ್ದಾನೆ. ಆದರೆ ಆತನನ್ನು ಆಸ್ಟ್ರೇಲಿಯಾದ ಕರಾಳ ಶಾಸನವಾದ 'ಭಯೋತ್ಪಾದನೆ ನಿಗ್ರಹ ಕಾನೂನು' ಅಡಿ ಸಿಲುಕಿಸಲು ಅಲ್ಲಿನ ಸರ್ಕಾರ ಮತ್ತು ಪೊಲೀಸರು ಹರಸಾಹಸ ಮಾಡಿದರು ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ.

ಆಸ್ಟ್ರೇಲಿಯಾ ದೇಶವು ಇಂತಹ ಒಂದು ಕಾನೂನನ್ನು ರೂಪಿಸಲು 2001 ರ ಸೆಪ್ಟೆಂಬರ್ 11 ರಂದು ಅಮೆರಿಕದ ಮೇಲೆ ಆದ ದಾಳಿಯೇ ಪ್ರಮುಖ ಕಾರಣ. ಆ ಘಟನೆ ನಡೆದ ನಂತರ ವಿಶ್ವಸಂಸ್ಥೆಯು ಎಲ್ಲ ಸದಸ್ಯ ದೇಶಗಳೂ ಭಯೋತ್ಪಾದನೆ ನಿಗ್ರಹಿಸುವ ಕಾನೂನುಗಳನ್ನು ಜಾರಿಗೆ ತರುವಂತೆ ಶಿಫಾರಸ್ಸು ಮಾಡಿತ್ತು. ಆದರೆ ಅಮೆರಿಕ ಸೇರಿದಂತೆ ಹಲವಾರು ದೇಶಗಳು ವಿಶ್ವಸಂಸ್ಥೆಯು ಸೂಚಿಸಿದ್ದ ಮಾನದಂಡಗಳನ್ನೂ ಮೀರುವಂತಹ ಕಾನೂನುಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದವು. ಈ ಕಾನೂನುಗಳಲ್ಲಿನ ಸಾಮ್ಯತೆ ಯಾವುದೆಂದರೆ ಅಲ್ಲಿನ ಪೊಲೀಸರು ಯಾರನ್ನು ಬೇಕಾದರೂ, ಎಷ್ಟು ದಿನ ಬೇಕಾದರೂ ಬಂಧಿಸಬಹುದು. ಅಷ್ಟೇ ಅಲ್ಲ, ಹೀಗೆ ಬಂಧನಕ್ಕೊಳಗಾದ ಜನರಿಗೆ ಯಾವ .ಮೂಲಭೂತ ಹಕ್ಕುಗಳಾಗಲಿ, ಇತರರೊಂದಿಗೆ ಸಂಪರ್ಕವಾಗಲಿ, ವಕೀಲರ ನೆರವಾಗಲಿ ನೀಡಲಾಗುವುದಿಲ್ಲ. ಅಂದರೆ ಯಾವ ವಿಚಾರಣೆಯೂ ಇಲ್ಲದೆ ಪೊಲೀಸರ ಸಂಶಯಕ್ಕೆ ಒಳಗಾದವರನ್ನು ಬಂಧಿಸಿದ್ದರೆ ಅದನ್ನು ಯಾರೂ ಪ್ರಶ್ನಿಸುವಂತಿಲ್ಲ; ಪ್ರಶ್ನಿಸಿದವರೇ ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ.

ಅಮೆರಿಕ ಸೇರಿದಂತೆ ಈ ಎಲ್ಲ ದೇಶಗಳ ಸರ್ವಾಧಿಕಾರಿ ಧೋರಣೆಗೆ ಕ್ಯೂಬಾ ದೇಶದ ಪ್ರದೇಶವೊಂದರಲ್ಲಿ ಸ್ಥಾಪಿಸಲಾಗಿರುವ ಗ್ವಾಂಟಾನಾಮೋ ಬೇ ಎಂಬ ಜೈಲೇ ಸಾಕ್ಷಿ. ಇದು ಅಮೆರಿಕದ ಅಕ್ರಮ ಜೈಲಾಗಿದೆಯಲ್ಲದೆ ಇಲ್ಲಿ ದಿನನಿತ್ಯ ಸಂಭವಿಸುತ್ತಿರುವ ಚಿತ್ರಹಿಂಸೆಯ ಪ್ರಕರಣಗಳು, ಕೊಲೆಗಳು, ಆತ್ಮಹತ್ಯೆಗಳು ಎಲ್ಲ ನಾಗರಿಕ ಸಮುದಾಯಗಳನ್ನು ನಾಚಿಸುವಂತಹದ್ದು. ಅಮೆರಿಕದ ಸೈನ್ಯದ ಟ್ರಿಬ್ಯೂನಲ್ ವಿಚಾರಣೆ ನಡೆಸುವವರೆಗೂ ಯಾರನ್ನು ಬೇಕಾದರೂ ಇಲ್ಲಿ ಬಂಧಿಸಿಟ್ಟಿರಬಹುದು ಎಂಬುದರ ವಿರುದ್ಧ ಮಾನವ ಹಕ್ಕುಗಳ ಸಂಘಟನೆಗಳು ಮತ್ತು ನ್ಯಾಯವಾದಿಗಳು ಪ್ರತಿಭಟಿಸುತ್ತಾ ಬಂದಿದ್ದಾರೆ. ಹೋದ ವರ್ಷ ಸಾಹಿತ್ಯಕ್ಕಾಗಿ ನೋಬೆಲ್ ಪ್ರಶಸ್ತಿ ಪಡೆದ ಹಾರೋಲ್ಡ್ ಪಿಂಟರ್‌ರವರೂ ತಮ್ಮ ಪ್ರಶಸ್ತಿ ಸ್ವೀಕೃತ ಭಾಷಣದಲ್ಲಿ ಗ್ವಾಂಟಾನಾಮೋ ಬೇಯನ್ನು ತೀವ್ರವಾಗಿ ಖಂಡಿಸಿದ್ದರು.

ಆದರೆ ಇದ್ಯಾವುದೂ ಫಲ ನೀಡಿಲ್ಲ. ಬದಲಾಗಿ ಬ್ರಿಟನ್ ಮತ್ತು ಆಸ್ಟ್ರೇಲಿಯಾದೊಂದಿಗೆ ಅಮೆರಿಕ ಮಾಡಿಕೊಂಡಿರುವ ಒಪ್ಪಂದದಿಂದಾಗಿ ತಮಗೆ ಬೇಕಾದವರನ್ನು ಮಾತ್ರ ಇಲ್ಲಿಯ ತನಕ ಬಿಡುಗಡೆಗೊಳಿಸಲಾಗಿದೆ ಅಷ್ಟೇ. ಅಂದಹಾಗೆ ಕಳೆದ ಫೆಬ್ರವರಿಯಲ್ಲಿ ವಿಶ್ವಸಂಸ್ಥೆಯ ವರದಿಯೊಂದು ಗ್ವಾಂಟಾನಾಮೋ ಬೇ ಜೈಲನ್ನು ಕೂಡಲೇ ಮುಚ್ಚಬೇಕೆಂದೂ, ಅಲ್ಲಿರುವ ಎಲ್ಲರ ವಿಚಾರಣೆಯನ್ನು ಕೂಡಲೇ ಮಾಡಿ ಮುಗಿಸಬೇಕೆಂದೂ ಸೂಚಿಸಿತ್ತು. ಆದರೆ ವಿಶ್ವಸಂಸ್ಥೆಗೆ ಕೇರ್ ಮಾಡದ ಅಮೆರಿಕ ತಾನು ಮಾಡಿದ್ದೇ ಸರಿ ಎಂಬಂತೆ ಸುಮ್ಮನಿದೆ.

ಅಮೆರಿಕದ 'ಭಯೋತ್ಪಾದನೆ ವಿರುದ್ಧದ ಯುದ್ಧ'ದಲ್ಲಿ ಮೊದಲಿಂದಲೂ ಕೈ ಜೋಡಿಸಿದ ಆಸ್ಟ್ರೇಲಿಯಾ ಕೂಡ 2003 ರಲ್ಲೇ ತನ್ನ ಕಾನೂನುಗಳನ್ನು ಕಠಿಣಗೊಳಿಸಿತು. ಈಗ ಅವುಗಳನ್ನು ಮತ್ತಷ್ಟು ಭದ್ರಗೊಳಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಅವು ಮಾನವ ಹಕ್ಕುಗಳ ಉಲ್ಲಂಘನೆಗೆ ದಾರಿ ಮಾಡಿಕೊಡುತ್ತವೆ ಎಂಬ ವಿರೋಧ ಕೇಳಿಬರುತ್ತಿದೆ. ಪೊಲೀಸರಿಗೆ, ಸರ್ಕಾರಗಳಿಗೆ ಸಂಪೂರ್ಣ ಅಧಿಕಾರ ನೀಡಿದರೆ ಏನಾಗುತ್ತದೆ ಎಂಬುದಕ್ಕೆ ಹನೀಫ್ ಇತ್ತೀಚಿನ ಉದಾಹರಣೆ.....

* * * * * *


ಇತ್ತೀಚೆಗೆ ಎರಡು ಟಿವಿ ಚಾನೆಲ್‌ಗಳಲ್ಲಿನ ಚರ್ಚೆಗಳಲ್ಲಿ ಭಾಗವಹಿಸಿದ ಹಿರಿಯ ಪೊಲೀಸ್ ಅಧಿಕಾರಿ ಶಂಕರ್ ಬಿದರಿಯವರು "ಯಾವುದಾದರೂ ಸಮಸ್ಯೆ ಇದ್ದರೆ ಪೊಲೀಸ್ ಠಾಣೆಗೆ ಬನ್ನಿ, ಎಲ್ಲವನ್ನೂ ಬಗೆಹರಿಸುತ್ತೇವೆ" ಅಂದರು. ಪೊಲೀಸ್ ಇಲಾಖೆ ಮತ್ತು ಪೊಲೀಸ್ ಠಾಣೆಗಳು ಇರುವುದು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲೇ ಹೊರತು ಸಮಸ್ಯೆಗಳನ್ನು ಬಗೆಹರಿಸುವುದುಕ್ಕಲ್ಲ. ಅಂದಹಾಗೆ ಇವತ್ತು ಬಿದರಿ ಮತ್ತು ಅವರ ಕೈಕೆಳಗಿನ ಅಧಿಕಾರಿಗಳೇ ನಕಲಿ ಎನ್‌ಕೌಂಟರ್‌ಗಳಲ್ಲಿ, ಕೇಸುಗಳನ್ನು ದಾಖಲಿಸುವುದರಲ್ಲಿ ತೊಡಗಿರುವಾಗ, ಅವರೇ ಸಮಸ್ಯೆಗಳಿಗೆ ಕಾರಣರಾಗುತ್ತಿರುವಾಗ ಅವರೇ ಹೇಗೆ ಸಮಸ್ಯೆಗಳನ್ನು ಬಗೆಹರಿಸುತ್ತಾರೆ? ಸರ್ಕಾರಿ ನೌಕರರಾದ ಅಧಿಕಾರಿಗಳು ರಾಜಕಾರಣಿಗಳಂತೆ ಮಾತನಾಡಲು ಹೊರಟರೆ ಇಂತಹ ಅಸಂಬದ್ಧ ಮಾತುಗಳು ಹೊರಡುತ್ತವೆ.....

ಅದೇ ಚರ್ಚೆಯಲ್ಲಿ ಬಿದರಿಯವರು ಮತ್ತೊಂದು ಮಾತನ್ನು ಹೇಳಿದರು: "ಕುದುರೆಮುಖ ಉದ್ಯಾನವನ ಮತ್ತು ಅದರ ಹತ್ತಿರವಿರುವ ಸುಮಾರು ಮೂರು ಸಾವಿರ ಆದಿವಾಸಿಗಳ ಅಭಿವೃದ್ಧಿಗೆ ಹಣ ಖರ್ಚು ಮಾಡುವುದು ಸರ್ಕಾರಕ್ಕೆ ದೊಡ್ಡ ಮಾತಲ್ಲ, ಅವರಿಗೆ ಹಣ ಕೊಡಿಸೋಣವಂತೆ ಬಿಡಿ." ಈ ಮಾತಿನ ಧಾಟಿ ಎಂತಹದ್ದೆಂದರೆ ಇದಕ್ಕೂ, ಕುಮಾರಸ್ವಾಮಿ "ರಾಜ್ಯಸಭಾದ ಸದಸ್ಯರಾಗಬೇಕಿದ್ದರೆ ನನ್ನನ್ನು ಕೇಳಿ" ಎನ್ನುವುದಕ್ಕೂ, ಯಡಿಯೂರಪ್ಪ "ಸರ್ಕಾರದ ತಿಜೋರಿಯಲ್ಲಿ ಕೋಟ್ಯಂತರ ರೂಪಾಯಿಗಳಿರುವಾಗ ಅದನ್ನು ಮಠಗಳಿಗೆ ಕೊಡಲು ನಾನು ಯಾರನ್ನಾದರೂ ಯಾಕ್ರೀ ಕೇಳಬೇಕು" ಎಂದು ಹೇಳುವುದಕ್ಕೂ ವ್ಯತ್ಯಾಸವೇ ಇಲ್ಲ. ಇವರೆಲ್ಲರ ಧೋರಣೆ ಹೇಗಿದೆ ಎಂದರೆ, ಸರ್ಕಾರದ ಹಣ ಮತ್ತು ಅಧಿಕಾರ ಇವರಪ್ಪನ ಮನೆಯದ್ದು ಎಂಬಂತಿದೆ. ಸರ್ಕಾರದ ಹಣ ಜನರ ಬೆವರಿನ ಹಣ ಎಂದೂ, ಅವರಿಗೆ ಅಧಿಕಾರ ನೀಡಿರುವವರೂ ಜನರೇ ಎಂದೂ ಅವರಿಗೆ ಅರ್ಥ ಮಾಡಿಕೊಡುವುದು ಹೇಗೆ?

ಇದೆಲ್ಲಕ್ಕೆ ತಕ್ಕಂತೆ ಹಲವು ಭಟ್ಟಂಗಿ ಪತ್ರಿಕೆಗಳು ರಾಜಕೀಯ ನಾಯಕರನ್ನು, ಅಣ್ಣ, ದೊರೆ ಎಂದೆಲ್ಲ ಬಣ್ಣಿಸುವುದು ಹೇಸಿಗೆ ಹುಟ್ಟಿಸುತ್ತಿದೆ.

* * * * * *

ಈ ಸಂಚಿಕೆ ಮುದ್ರಣಕ್ಕೆ ಹೋಗಲು ತಯಾರಾಗುತ್ತಿರುವಾಗಲೇ ಚಿಕ್ಕಮಗಳೂರಿನಿಂದ ಆತಂಕ ಹುಟ್ಟಿಸುವ ಸುದ್ದಿಯೊಂದು ಬಂದಿದೆ. 'ಪ್ರಜಾವಾಣಿ' ದಿನಪತ್ರಿಕೆಯನ್ನು ಓದುವ ಜನರಿಗೆ 'ವಾಚಕರ ವಾಣಿ'ಗೆ ಆಗಾಗ್ಗೆ ಪತ್ರ ಬರೆಯುವ ಭಾಗ್ಯ ಹಾಗಲಗಂಚಿಯವರ ಹೆಸರು ಪರಿಚಿತ. ಪ್ರಸ್ತುತ ಚಿಕ್ಕಮಗಳೂರಿನಲ್ಲಿ ಹೆಚ್ಚುತ್ತಿರುವ ಕೋಮುವಾದ, ಆದಿವಾಸಿಗಳ ಅತಂತ್ರ ಬದುಕು, ಅಲ್ಲಿನ ಚಿಕ್ಕ ಹಿಡುವಳಿದಾರ ರೈತರ ಸಂಕಷ್ಟ, ಇವೆಲ್ಲದರ ಬಗ್ಗೆ ಸೃಜನಶೀಲವಾಗಿ ಬರೆಯಬಲ್ಲವರು ಭಾಗ್ಯ. ಇವರು ವಿದ್ಯಾಭ್ಯಾಸ ಪಡೆದಿದ್ದರೂ ನಗರದಲ್ಲಿ ಸಣ್ಣ ನೌಕರಿ ಮಾಡಿಕೊಂಡು ಬದುಕುವುದಕ್ಕಿಂತ, ತಮ್ಮ ಪತಿಗೆ ಪಿತ್ರಾರ್ಜಿತವಾಗಿ ಬಂದ ಭೂಮಿಯಲ್ಲಿ ವ್ಯವಸಾಯ ಮಾಡುತ್ತಾ ನೆಮ್ಮದಿಯಿಂದ ಬದುಕಬೇಕೆಂಬ ಹಂಬಲ. ಆದ್ದರಿಂದಲೇ ಭಾಗ್ಯ ಅವರ ಪತಿ ಮತ್ತು ಮೈದುನ ಹಾಗಲಗಂಚಿಗೆ ಹಿಂದಿರುಗಿ ಅಲ್ಲೇ ವಾಸಿಸುತ್ತಿದ್ದಾರೆ. ತಮಗಿರುವ ಚಿಕ್ಕ ಭೂಮಿಯಲ್ಲಿ ಬೆಳೆದದ್ದನ್ನು ಕೋತಿ, ಹಂದಿ, ಇತ್ಯಾದಿಗಳಿಂದ ರಕ್ಷಿಸಿಕೊಳ್ಳುತ್ತಾ ಕೈಗೆ ಬಂದಿದ್ದರಲ್ಲಿ ಜೀವನ ಸಾಗಿಸುತ್ತಿದ್ದಾರೆ.



ಇಂತಹ ಭಾಗ್ಯ ಹಾಗಲಗಂಚಿ ಮತ್ತು ಅವರ ಮನೆಯವರು ನಕ್ಸಲ್ ಬೆಂಬಲಿಗರು ಎಂದು ಇವತ್ತು ಅವರ ಮನೆಯ ಮೇಲೆ ಪೊಲೀಸರು ದಾಳಿ ಮಾಡಿದ್ದಾರೆ.



ಕಂಡಹಾಗೆ

ಹಿಂದೊಮ್ಮೆ ಇದೇ ಭಾಗ್ಯರವರ ಮೈದುನ ರವಿಯವರನ್ನು ಪೊಲೀಸರು ಅಕ್ರಮವಾಗಿ ಬಂಧಿಸಿದ್ದರು. ಬೇರೆಯವರ ಮನೆಯಲ್ಲಿ ಅಡಿಕೆ ಕೊಯ್ಯಲು ಹೋಗುತ್ತಿದ್ದ ಓದು, ವಿದ್ಯೆ ಬಲ್ಲ ರವಿ ತನ್ನೊಂದಿಗೆ ಪೆನ್ನು, ಕಾಗದ, ಪುಸ್ತಕ ಮತ್ತು ಟಾರ್ಚ್ ಅನ್ನು ತೆಗೆದುಕೊಂಡು ಹೋಗುತ್ತಿದ್ದ. ಆದರೆ ಹೀಗೆ ಪೆನ್ನು, ಪೇಪರ್ ಹೊಂದಿರುವವರು ನಕ್ಸಲರ ಬೆಂಬಲಿಗರೇ ಇರಬೇಕೆಂದು ತಿಳಿದಿರುವ ಅಲ್ಲಿನ ಪೊಲೀಸರು ಆತನನ್ನು ಮೂರು ದಿನಗಳ ಕಾಲ ಕೂಡಿಟ್ಟಿದ್ದರು.

ಮಲೆನಾಡಿನ ಬದುಕನ್ನೇ ತಮ್ಮದಾಗಿಸಿಕೊಂಡಿರುವ, ಅಲ್ಲಿನ ಸಮಸ್ಯೆ, ಅನ್ಯಾಯಗಳ ಬಗ್ಗೆ ದನಿ ಎತ್ತಿ ಪ್ರತಿಭಟಿಸುವ ಭಾಗ್ಯ ಹಾಗಲಗಂಚಿ ಮನೆಯ ಮೇಲೆ ಇವತ್ತು ದಾಳಿ ಇಟ್ಟಿರುವ ಪೊಲೀಸರು ಬರುವ ದಿನಗಳಲ್ಲಿ ಎಲ್ಲರ ಮನೆಗಳಿಗೂ ನುಗ್ಗಿದರೆ ಅಚ್ಚರಿ ಇಲ್ಲ.

ಈ ಪುಟ್ಟ ರೈತ ಕುಟುಂಬಕ್ಕೆ ನಿಮ್ಮ ಬೆಂಬಲವಿರಲಿ. ಯಾರೇ ಆಗಲಿ ಪೊಲೀಸರ ದೌರ್ಜನ್ಯಕ್ಕೆ ಸಿಕ್ಕು ಅಸಹಾಯಕರಾಗಿ, ಏಕಾಂಗಿಗಳಾಗಿ ನೋವನ್ನುಭವಿಸಿದಂತೆ ರಕ್ಷಣೆ ನೀಡಬೇಕಲ್ಲವೆ. ಅಂದಹಾಗೆ; ಪೊಲೀಸರು ಹೀಗೆ ಮನೆಮನೆಗೆ ನುಗ್ಗಲಾರಂಭಿಸಿದರೆ ಅದನ್ನು 'ಪೊಲೀಸ್ ರಾಜ್ಯ'ವೆಂದು ಕರೆಯುತ್ತಾರೆ. ಅಂತಹ ರಾಜ್ಯದ ಬಗ್ಗೆ ನಮ್ಮ 'ಪ್ರಜಾತಂತ್ರವಾದಿ ಬುದ್ಧಿಜೀವಿಗಳು' ಏನನ್ನು ಹೇಳಬಹುದು? ಅದೆಷ್ಟು ತೀಕ್ಷ್ಣವಾದ ಲೇಖನಗಳನ್ನು ಕೆತ್ತಬಹುದು?!

* * * * * *

ಇಂದು ಹಿಂದುತ್ವವಾದಿಗಳ ಅಟ್ಟಹಾಸ ಅತಿರೇಕಕ್ಕೆ ಹೋಗುತ್ತಿರುವಾಗಲೇ ಅದರ ವಿರುದ್ಧ ಸೆಟೆದು ನಿಲ್ಲಬೇಕಿದ್ದ ಪ್ರಗತಿಪರ, ಜಾತ್ಯತೀತ ಶಕ್ತಿಗಳು ಛಿದ್ರಗೊಂಡು ಕ್ಷೀಣಿಸುತ್ತಿವೆ. ಇಲ್ಲವಾದರೆ ಎಸ್.ಎಲ್. ಭೈರಪ್ಪ ಬರೆದ ಪುರೋಹಿತಶಾಹಿ 'ಆವರಣ' ಎಂಬ ವಿಕೃತ ಕೃತಿ ರಾರಾಜಿಸುತ್ತಿರುವಾಗಲೇ, ಬಂಜಗೆರೆ ಜಯಪ್ರಕಾಶರು ಬರೆದ 'ಆನು ದೇವಾ ಹೊರಗಣವನು...' ಪುಸ್ತಕವನ್ನು ಸರ್ಕಾರ ಮುಟ್ಟುಗೋಲು ಹಾಕುವ ತೀರ್ಮಾನ ತೆಗೆದುಕೊಳ್ಳುತ್ತಿತ್ತೇ? ಇವತ್ತು ದಲಿತ ಶಕ್ತಿ ಬಲಿಷ್ಠವಾಗಿದ್ದರೆ 'ಆನುದೇವಾ......' ವಿರುದ್ಧ ಖಂಡ್ರೆ, ಮಾತೆ ಮಾದೇವಿ, ಲೀಲಾದೇವಿ ಆರ್. ಪ್ರಸಾದ್‌ರಂಥವರಿಗೆ 'ಕೀಳುಜಾತಿ' ಎಂದೆಲ್ಲ ಚೀರಾಡುವ ಧೈರ್ಯ ಇರುತ್ತಿತ್ತೇ? ಇವರೆಲ್ಲರಲ್ಲಿ ನಮ್ಮ ದಲಿತರ ಬಗ್ಗೆ ಎಷ್ಟು ಅಸಡ್ಡೆ ಭಾವನೆ ಇದೆ ಎಂದರೆ ಸಾರ್ವಜನಿಕವಾಗಿಯೇ "ಬಸವಣ್ಣ ಕೀಳು ಜಾತಿಯಲ್ಲಿ ಜನಿಸಿದ್ದ ಎಂದಿದ್ದು ಅಗೌರವ" ಎಂದು ಹೇಳಿ ಸಂವಿಧಾನ ವಿರೋಧಿಗಳಾಗಿದ್ದಾರೆ. ಇವತ್ತು ದಲಿತರಿಗೆ ತಕ್ಕದಾದ ನಾಯಕತ್ವ ಇದ್ದಿದ್ದರೆ, ಹೀಗೆ ಪರೋಕ್ಷವಾಗಿ ದಲಿತರ ಬಗ್ಗೆ ಹೀನಾಯವಾಗಿ ಮಾತನಾಡಿದವರೆಲ್ಲರ ವಿರುದ್ಧ ಪ್ರತಿಭಟಿಸಿ, ಜಾತಿ ನಿಂದನೆ ಕೇಸುಗಳನ್ನು ಜಡಿದು ಊರೂರು ಅಲೆಸುತ್ತಿದ್ದರು. ಆದರೆ ದುರದೃಷ್ಟವಶಾತ್ ಇವತ್ತಿನ ಬಹುತೇಕ ದ.ಸ.ಸಂ.ಗಳ ನಾಯಕರಿಗೆ ಪುಡಿಗಾಸು ತರುವ ಅಧಿಕಾರ, ಪುಢಾರಿಯ ಗತ್ತು ನೀಡುವ ಸ್ಥಾನಗಳೇ ಮುಖ್ಯವಾಗಿವೆ.

ದಲಿತ ಚಳವಳಿ ಹೀಗೆ ನಶಿಸಿ ಹೋಗುತ್ತಿರುವ ಸಂದರ್ಭದಲ್ಲೇ ಜಾತ್ಯತೀತ ಮತ್ತು ಪ್ರಗತಿಪರರ ನಡುವೆಯೇ ಹಲವಾರು ಕಾರಣಗಳಿಗೆ ತಿಕ್ಕಾಟಗಳು ಪ್ರಾರಂಭವಾಗಿವೆ. ಇದೆಲ್ಲದರ ನಡುವೆ ಅವರೆಲ್ಲರೂ ಮರೆಯುತ್ತಿರುವ ಮುಖ್ಯ ಅಂಶ ಯಾವುದೆಂದರೆ ಅವರೆಲ್ಲರ ಏಕೈಕ ಶತ್ರು ಹಿಂದುತ್ವವಾದಿಗಳು ಎಂಬುದು. ಹಾಗೆಯೇ ಹೆಚ್ಚಾಗುತ್ತಿರುವ ಹಿಂದುತ್ವವಾದದ ವಿರುದ್ಧ ಸಂಘಟಿತ ವಿರೋಧ ವ್ಯಕ್ತವಾಗದಿದ್ದರೆ ನಾಳೆ ಒಟ್ಟೊಟ್ಟಾಗಿ ಎಲ್ಲರನ್ನೂ ಮುಟ್ಟಿ ಹಾಕುತ್ತಾರೆಂಬುದು.....

-ಗೌರಿ ಲಂಕೇಶ್

ನಂದಗುಡಿ SEZ - ಸಿಪಿಎಂಗೆ ಮುಖಭಂಗ

ಕೆಲವರಿರುತ್ತಾರೆ,

ನೆಲದ ಮೇಲೆ ನಿಂತೇ ಮಾತಾಡುತ್ತಿರುತ್ತಾರಾದರೂ ಅವರ ಚಿಂತನೆಗಳಿಗೆ ಮಾತ್ರ ವಾಸ್ತವತೆ ಇರುವುದಿಲ್ಲ. ಜನ ಕೂಗಿ, ಗಲಾಟೆ ಮಾಡಿ ಎಚ್ಚರಿಸದ ಹೊರತು ಅಂತವರ ಓತಪ್ರೋತ ಭಾಷಣಗಳೂ ನಿಲ್ಲುವುದಿಲ್ಲ. ಸಿಪಿಎಂ ಪಾರ್ಟಿಯ ಕಾರ್ಯದರ್ಶಿ ಶ್ರೀಮಾನ್ ಜಿ.ಎನ್ ನಾಗರಾಜ್‌ಗೆ ಮೊನ್ನೆ ಇಂತಾದ್ದೊಂದು ಪೇಚಿನ ಪ್ರಸಂಗ ಎದುರಾಯಿತು.

ಬೆಂಗಳೂರಿನ ಹತ್ತಿರದ ನಂದಗುಡಿ ಬಳಿ ವಿಶೇಷ ಆರ್ಥಿಕ ವಲಯವೊಂದಕ್ಕೆ, ಕೇಂದ್ರ-ರಾಜ್ಯ ಸರ್ಕಾರಗಳೆರಡೂ ಒಪ್ಪಿಗೆ ನೀಡಿವೆ. ಇದನ್ನು ಮಾಡಲು ಹೊರಟಿರುವವನು ಮಾತ್ರ ಒಬ್ಬ ಮುಂಬೈನ ಭೂಗಳ್ಳ. ನಂದಗುಡಿಯ ರೈತರು ಈಗಾಗಲೇ ರೊಚ್ಚಿಗೆದ್ದು ಯಾವಾಗಲೂ ತಮ್ಮ ಭೂಮಿ ಬಿಟ್ಟುಕೊಡುವುದಿಲ್ಲವೆಂದು ಹೋರಾಟಕ್ಕಿಳಿದಿದ್ದಾರೆ. ಮೊನ್ನೆ ಮಹಾತ್ಮಾಗಾಂಧಿ ಪ್ರತಿಮೆ ಎದಿರು ಸಾವಿರಾರು ರೈತರು ಮೆರವಣಿಗೆಯಲ್ಲಿ ಬಂದು ಒಂದು ಪ್ರತಿಭಟನೆಯನ್ನು ಮಾಡಿದರು. ಅವತ್ತು ಬರಹೇಳಿರದಿದ್ದ ಭಾಷಣಕಾರರಾಗಿ ಅಲ್ಲಿ ಪ್ರತ್ಯಕ್ಷರಾದ ಜಿ.ಎನ್. ನಾಗರಾಜ್ ತಮ್ಮ ಪ್ರಖರ ಮಾರ್ಕ್ಸ್‌ವಾದಿ ಚಿಂತನೆಗಳ ಭಾಷಣ ಶುರು ಮಾಡಿದರು.

"ಕರ್ನಾಟಕ ಸರ್ಕಾರ ಬೇಕಿದ್ದರೆ SEZ ಮಾಡಿಕೊಳ್ಳಲಿ, ನಮ್ಮ ಆಕ್ಷೇಪ ಇಲ್ಲ, ಆದರೆ ರೈತರ ಜಮೀನಿನ ಬದಲು ಸರ್ಕಾರಿ ಭೂಮಿ ತೆಗೆದುಕೊಂಡು ಮಾಡಲಿ....."

-ಹೀಗೆ ಸ್ವತಂತ್ರ ಭಾರತದೊಳಗೇ SEZ ಗಳೆಂಬ ವಿದೇಶಿ ಕಾಲೋನಿಗಳಿಗೆ ಬೆಂಬಲಿಸುವ ನಾಗರಾಜರ ಮಾತು ಸಾಗುತ್ತಿದ್ದಂತೆ ಕೆರಳಿದ ರೈತನೊಬ್ಬ ನೇರ ನಾಗರಾಜ್ ಬಳಿ ಬಂದು ಮೈಕ್ ಕಿತ್ತುಕೊಂಡು ಉಪದೇಶ ನಿಲ್ಲಿಸುವಂತೆ ಹೇಳಿಬಿಟ್ಟ. ಅದಕ್ಕೂ ಮುನ್ನ ಸಿಪಿಐನ ಸಿದ್ಧನಗೌಡ ಪಾಟೀಲರ ವಿವೇಕಯುತ ಹೋರಾಟದ ಮಾತುಗಳನ್ನು ಕೇಳಿದ್ದ ರೈತರಿಗೆ ನಂತರದ ಸಿಪಿಎಂನವರ ಮಾತು ಸರ್ಕಾರಿ ದೂತರ ಮಾತಿನಂತೆ ಅರ್ಥಾತ್ ದಲ್ಲಾಳಿ ಬಂಡವಾಳಶಾಹಿ ಹಿತೈಷಿಗಳ ಸಲಹೆಗಳಂತೆ ಭಾಸವಾಗಿದ್ದರಲ್ಲಿ ಏನಾಶ್ಚರ್ಯವಿಲ್ಲ. ಕೇವಲ ತಮ್ಮ ಖಾಸಗಿ ಜಮೀನು ಮಾತ್ರವಲ್ಲ, ಸರ್ಕಾರದ ಜಾಗವನ್ನೇ ಆಗಲಿ ಯಾವನೋ ಭೂಗಳ್ಳನಿಗೆ ಯಾಕೆ ಕೊಡಬೇಕು ಎಂದು ಪ್ರಶ್ನಿಸುತ್ತಿರುವ ಆ ರೈತರ ರಾಜಕೀಯ ತಿಳುವಳಿಕೆ ಸಿಪಿಎಂನವರಿಗಿಲ್ಲ ಎನ್ನುವುದೇ ಇವತ್ತಿನ ದುರಂತ.

ಜನದ್ರೋಹಿ ದಳ, ಕಾಂಗ್ರೆಸ್, ಬಿಜೆಪಿಗಳಿಗಿಂತಾ ಸಿಪಿಎಂ ಭಿನ್ನ ಅಂದರೆ ಯಾರಾದರೂ ನಂಬುತ್ತಾರಾ ಅಂತ.

'ಭಯೋತ್ಪಾದಕ' ಎನಿಸಿಕೊಂಡ ಸಹೋದರನ ಕತೆ

ಆವತ್ತು ಮೊಹಮ್ಮದ್ ಹನೀಫ್ ಅಪಾರ ತಳಮಳಕ್ಕೊಳಗಾಗಿದ್ದ. ಒಂದೆಡೆ ತನ್ನ ಪ್ರೀತಿಯ ಮಡದಿ ಫಿರ್ದೋಸ್ ಮತ್ತು ತಮ್ಮಿಬ್ಬರಿಗೆ ಒಂದು ವಾರದ ಹಿಂದೆಯಷ್ಟೇ ಜನಿಸಿದ್ದ ಹನಿಯಾ ಎಂಬ ಹುಳೆ ಇಬ್ಬರೂ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾರೆಂಬ ಸುದ್ದಿ. ಇನ್ನೊಂದೆಡೆ ತನ್ನ ಸೋದರ ಸಂಬಂಧಿಯಾದ ಕಫೀಲ್ ಅಹಮದ್ ದೂರದ ಇಂಗ್ಲೆಂಡ್‌ನಲ್ಲಿ ಭಯೋತ್ಪಾದಕ ವಿಧ್ವಂಸ ಕೃತ್ಯ ಎಸಗುವ ಪ್ರಯತ್ನದಲ್ಲಿ ಬೆಂದುಹೋಗಿದ್ದಾನೆಂದೂ, ಆವನ ತಮ್ಮ ಸಬೀಲ್‌ನನ್ನೂ ಅಲ್ಲಿಯ ಪೊಲೀಸರು ಬಂಧಿಸಿದ್ದಾರೆಂದೂ ಸುದ್ದಿ.

ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್ ಎಂಬ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಹನೀಫ್ ಆವತ್ತು ಆತುರಾತುರವಾಗಿ ರಜೆ ಪಡೆದು ತನ್ನ ಹೊಂಡಾ ಕಾರ್ ಮತ್ತು ಮನೆಯಲ್ಲಿದ್ದ ಚಿನ್ನವನ್ನು ಸ್ನೇಹಿತರ ಮನೆಯಲ್ಲಿಟ್ಟು ಭಾರತಕ್ಕೆ- ಅದರಲ್ಲೂ ಬೆಂಗಳೂರಿಗೆ- ಹಿಂದಿರುಗಲು ಹಪಹಪಿಸುತ್ತಿದ್ದ. ಇನ್ನೇನು ಆತ ಬ್ರಿಸ್ಬೇನ್ ವಿಮಾನ ನಿಲ್ದಾಣದಲ್ಲಿ ಸಿಂಗಪೂರ್ ಏರ್‌ಲೈನ್ಸ್‌ನ ಫ್ಲೈಟ್ 246 ಹತ್ತಬೇಕು.... ಆಗ ಆಸ್ಟ್ರೇಲಿಯಾದ ಇಬ್ಬರು ಪೊಲೀಸ್ ಅಧಿಕಾರಿಗಳು ಪ್ರವೇಶಿಸಿದರು. ಅವರಲ್ಲಿ ಒಬ್ಬರಾದ ಡಿಟೆಕ್ಟಿವ್ ಸಾರ್ಜೆಂಟ್ ಆಡಮ್ ಸಿಮ್ಸ್ ಎಂಬುವವರು ಹನೀಫ್‌ನನ್ನು ಉದ್ದೇಶಿಸಿ "ಭಯೋತ್ಪಾದಕ ಸಂಘಟನೆಗೆ ನೆರವು ನೀಡಿದ್ದಕ್ಕೆ ನಿನ್ನನ್ನು ಬಂಧಿಸಿದ್ದೇವೆ" ಎಂದರು.


ಹನೀಫ್‌ನ ಪತ್ನಿ ಫಿರ್ದೋಸ್


ಹನೀಫ್‌ನನ್ನು ಅದೆಷ್ಟೇ ಆತಂಕಗಳು ಕಾಡುತ್ತಿದ್ದರೂ ಆತ ಧೃತಿಗೆಡಲಿಲ್ಲ. "ನಿನಗೆ ವಕೀಲರೊಬ್ಬರ ನೆರವು ಬೇಕಿದೆಯೇ?" ಎಂದು ಪೊಲೀಸರು ಕೇಳಿದರೂ "ಇಲ್ಲ, ನಾನು ಯಾವ ತಪ್ಪನ್ನೂ ಮಾಡಿಲ್ಲ. ನಿಮ್ಮೆಲ್ಲ ಪ್ರಶ್ನೆಗಳಿಗೆ ನಾನು ಪ್ರಾಮಾಣಿಕವಾಗಿ ಉತ್ತರಿಸುತ್ತೇನೆ. ಆದ್ದರಿಂದ ವಕೀಲರ ಅಗತ್ಯವಿಲ್ಲ" ಎಂದು ಹನೀಫ್ ಉತ್ತರಿಸಿದ. ಆತನ ಮನಸ್ಸು ಅಷ್ಟು ನಿಶ್ಚಲವಾಗಿತ್ತು.

ಹನೀಫ್‌ನನ್ನು ಬ್ರಿಸ್ಬೇನ್ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಾಗ ರಾತ್ರಿ ಮೂರು ಗಂಟೆಯಾಗಿತ್ತು. ದಾರಿಯಲ್ಲಿ ತಾನು ಸಬೀಲನಿಗೆ ನೀಡಿದ್ದ ಮೊಬೈಲ್ ಸಿಮ್‌ಕಾರ್ಡ್ ಬಗ್ಗೆ ಇಂಗ್ಲೆಂಡಿನ ಪೊಲೀಸರಿಗೆ ತಿಳಿಸಲು ಫೋನ್ ಮಾಡಿದ್ದಾಗಿಯೂ, ತನ್ನ ಕರೆಗಳಿಗೆ ಪ್ರತಿಕ್ರಿಯೆ ಸಿಕ್ಕಿರಲಿಲ್ಲವೆಂದೂ ಹನೀಫ್ ಆಸ್ಟ್ರೇಲಿಯಾದ ಪೊಲೀಸರಿಗೆ ವಿವರಿಸಿದ್ದ. ಆದರೆ ಆತನನ್ನು ನಂಬುವ ಸ್ಥಿತಿಯಲ್ಲಿ ಅವರ್‍ಯಾರೂ ಇರಲಿಲ್ಲ.

ಪೊಲೀಸರು ಕೊಟ್ಟ ಹಾಸಿಗೆಯೊಂದರ ಮೇಲೆ ಹನೀಫ್ ನಿದ್ರೆಗೆ ಜಾರಿದಾಗ ನಾಲ್ಕು ಗಂಟೆ. ಆತನನ್ನು ಎಚ್ಚರಿಸಿದಾಗ ಮಾರನೇ ದಿನ ಹತ್ತು ಗಂಟೆಗೆ. ಆ ಅವಧಿಯಲ್ಲಿ ಪೊಲೀಸರು ಆತನ ಮನೆಯನ್ನು ಜಾಲಾಡಿದ್ದರು. ಅಲ್ಲಿದ್ದ ಡೈರಿಗಳು, ಕಂಪ್ಯೂಟರ್, ಬ್ಯಾಂಕ್ ದಾಖಲೆಗಳು, ಕಾಗದಪತ್ರಗಳು ಎಲ್ಲವನ್ನೂ ವಶಪಡಿಸಿಕೊಂಡಿದ್ದರು. ಅಷ್ಟೇ ಅಲ್ಲ, ಆತನನ್ನು 50 ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಲು ನ್ಯಾಯಾಲಯದಿಂದಲೂ ಅನುಮತಿ ಪಡೆದಿದ್ದರು.

ಹನೀಫ್‌ನನ್ನು ಬಂಧಿಸಿದ್ದ ಸಾರ್ಜೆಂಟ್ ಸಿಮ್ಸ್ ಮತ್ತು ಇನ್ನೊಬ್ಬ ಅಧಿಕಾರಿ ಆತನಿಗೆ ಪ್ರಶ್ನೆ ಮೇಲೊಂದು ಪ್ರಶ್ನೆ, ಅದರ ಹಿಂದೊಂದು ಪ್ರಶ್ನೆ, ಗೊಂದಲವನ್ನು ಸೃಷ್ಟಿಸುವ ಪ್ರಶ್ನೆ, ಖೊಟ್ಟಿ ದಾಖಲೆಗಳನ್ನು ತೋರಿಸಿ ತಪ್ಪೊಪ್ಪಿಗೆಯನ್ನು ಪಡೆಯುವ ಉದ್ದೇಶದಿಂದ ಪ್ರಶ್ನೆ, ದಿಕ್ಕು ತಪ್ಪಿಸುವ ಪ್ರಶ್ನೆ... ಹೀಗೆ ಎಲ್ಲ ತರ್ಕಗಳನ್ನು ಬಳಸಿ ಸರಾಸರಿ 1616 ಪ್ರಶ್ನೆಗಳನ್ನು ಕೇಳಿದರು. ಆದರೆ ಕೊನೆಗೂ ಅವರಿಗೆ ಹನೀಫ್‌ನಲ್ಲಿ ಭಯೋತ್ಪಾದಕನೊಬ್ಬನ ಸುಳಿವೂ ಸಿಗಲಿಲ್ಲ. ಬದಲಾಗಿ ಅವರಿಗೆ ಸಿಕ್ಕಿದ್ದು 'ಭಾರತದ ಓರ್ವ ಸುಸಂಸ್ಕೃತ ಮಗ' (ಇದು ನಮ್ಮ ಪದಗಳಲ್ಲ, ಬದಲಾಗಿ ಆಸ್ಟ್ರೇಲಿಯಾದ ಹಿರಿಯ ಪತ್ರಕರ್ತರೊಬ್ಬರು ಬಳಸಿರುವ ವರ್ಣನೆ.)

ತನ್ನ ಜೀವನದುದ್ದಕ್ಕೂ ಕಷ್ಟಕಾರ್ಪಣ್ಯಗಳನ್ನೇ ಕಂಡ, ಶಾಲಾ ಶಿಕ್ಷಕನೊಬ್ಬನ ಮಗನಾಗಿ ಬಡತನದಲ್ಲಿ ಬೆಳೆದ, ಹದಿನೆಂಟನೇ ವಯಸ್ಸಿನಲ್ಲಿ ಅಪಘಾತವೊಂದರಲ್ಲಿ ತಂದೆಯನ್ನು ಕಳೆದುಕೊಂಡ, ಆನಂತರ ಹಿರಿಯ ಮಗನಾಗಿ ಸಂಸಾರದ ಹೊಣೆಯನ್ನು ಹೊತ್ತ, ಚಿಕ್ಕಮಗಳೂರಿನ ಸರ್ಕಾರಿ ಶಾಲೆಯಲ್ಲಿ ಓದಿದ್ದರೂ ಪರೀಕ್ಷೆಗಳಲ್ಲಿ ಉನ್ನತ ಅಂಕಗಳನ್ನು ಪಡೆದ, ಆ ಮೂಲಕವೇ ಸ್ಕಾಲರ್‌ಶಿಪ್ ಪಡೆದು ಬೆಂಗಳೂರಿನ ಬಿ.ಆರ್. ಅಂಬೇಡ್ಕರ್ ಕಾಲೇಜಿಗೆ ಪ್ರವೇಶ ಪಡೆದ, ಅಲ್ಲಿಂದಲೂ ಉನ್ನತ ದರ್ಜೆಯಲ್ಲಿ ಪಾಸ್ ಮಾಡಿದ, ವೈದ್ಯನಾದ, ತನ್ನ ವಿಧವೆ ತಾಯಿಗೆ ಆಧಾರಸ್ತಂಭವಾದ, ತನ್ನ ತಂಗಿಗೆ ಮದುವೆ ಮಾಡಿಸಿದ, ತಾನೂ ಮದುವೆಯಾಗಿ ಸಭ್ಯ ಸಂಸಾರಸ್ಥನ ಜೀವನ ನಡೆಸಿದ ಓರ್ವ ಆದರ್ಶಶೀಲ ಭಾರತದ ಸುಸಂಸ್ಕೃತ ಪುತ್ರನನ್ನು ಆಸ್ಟ್ರೇಲಿಯಾದ ಪೊಲೀಸರು ಕಂಡರೇ ಹೊರತು ಭಯೋತ್ಪಾದಕನ ಕಿಂಚಿತ್ತು ಅಂಶವೂ ಆತನಲ್ಲಿ ಅವರಿಗೆ ಕಂಡು ಬರಲಿಲ್ಲ.


ಆಸ್ಟ್ರೇಲಿಯಾದಲ್ಲಿ ಹನೀಫ್ ಮತ್ತು ಫಿರ್ದೋಸ್

ಆದರೂ ಆತ ನಿರ್ದೋಷಿ ಎಂದು, ಆತನನ್ನು ಬಂಧಿಸುವ ಮೂಲಕ ತಾವು ತಪ್ಪೊಂದನ್ನು ಎಸಗಿದ್ದೇವೆಂದು ಅಲ್ಲಿನ ಪೊಲೀಸರು ಒಪ್ಪಲು ತಯಾರಿರಲಿಲ್ಲ. ಹನೀಫ್‌ನನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಿದರು. ಆತನ ಬ್ಯಾಂಕ್ ದಾಖಲೆ ಮತ್ತು ಡೈರಿಗಳನ್ನು ಹಿಡಿದು ಪ್ರಶ್ನಿಸಿದರು.

ಬಡತನದಲ್ಲೇ ಬೆಳೆದಿದ್ದರೂ ಹನೀಫ್ ಎಂತಹ ಸ್ವಾಭಿಮಾನಿ ಎಂದರೆ ವೈದ್ಯನಾಗಿ ಪದವಿ ಪಡೆದ ನಂತರ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ಇಂಗ್ಲೆಂಡಿಗೆ ಹೋದಾಗ ಆತನಲ್ಲಿ ಹಣವಿರಲಿಲ್ಲ. ಆಗ ತನಗೆ ಜೀವನ ನಿರ್ವಹಿಸಲು ಕೈ ಸಾಲಗಳನ್ನು ನೀಡಿದ್ದವರ ಹೆಸರುಗಳನ್ನು ಮತ್ತು ಅವರು ಕೊಟ್ಟಿದ್ದ ಹಣದ ಲೆಕ್ಕವನ್ನೂ ತನ್ನ ಡೈರಿಯಲ್ಲಿ ದಾಖಲಿಸಿದ್ದ. ಮುಂದೊಂದು ದಿನ ಆ ಸಾಲಗಳನ್ನು ತೀರಿಸುವ ಉದ್ದೇಶದಿಂದ.

ಭಾರತದಿಂದ ವೈದ್ಯಕೀಯ ಪದವಿ ಪಡೆದ ಎಲ್ಲರೂ ಇಂಗ್ಲೆಂಡಿನಲ್ಲಿ ಒಂದು ಪ್ರಮುಖ ಪರೀಕ್ಷೆಯನ್ನು ಪಾಸ್ ಮಾಡಿದ ನಂತರವೇ ಅವರಿಗೆ ಅಲ್ಲಿ ಕೆಲಸ ಲಭ್ಯವಾಗುತ್ತದೆ. ಆ ಪರೀಕ್ಷೆಗೆ ಹನೀಫ್ ತಯಾರಿ ನಡೆಸುತ್ತಿದ್ದಾಗ ಮುಫೀದ್ ಎಂಬ ಸಂಘಟನೆ ಭಾರತೀಯ ಮೂಲದ ವೈದ್ಯರಿಗೆಂದೇ ನಡೆಸುತ್ತಿದ್ದ ಹಾಸ್ಟೆಲ್‌ನಲ್ಲಿದ್ದ. ಅದೇ ವೇಳೆಗೆ ಸ್ಥಳೀಯ ಆಸ್ಪತ್ರೆಯೊಂದರಲ್ಲಿ ಪುಕ್ಕಟೆಯಾಗಿ ಕಾರ್ಯನಿರ್ವಹಿಸುತ್ತಿದ್ದ. ಆಗ ಅಲ್ಲಿ ಅವನಿಗೆ ಹತ್ತಿರದ ಸಂಬಂಧಿ ಅಂತ ಇದ್ದವನೇ ಈಗ ಜೀವನ್ಮರಣದ ನಡುವೆ ಹೊಯ್ದಾಡುತ್ತಿರುವ ಆತನ ಸಹೋದರ ಸಂಬಂಧಿ ಕಫೀಲ್ ಅಹಮದ್. ಅಷ್ಟೊತ್ತಿಗಾಗಲೇ ಸಾಕಷ್ಟು ಕೈ ಸಾಲ ಮಾಡಿದ್ದ ಹನೀಫ್ ಬ್ರಿಟನ್ನಿನಲ್ಲಿ ವೈದ್ಯರಿಗೆಂದೇ ನಡೆಸುವ ಪರೀಕ್ಷೆಯನ್ನು ಕಟ್ಟಲು ಕಫೀಲ್‌ನಿಂದ 300 ಪೌಂಡ್‌ಗಳನ್ನು ಸಾಲದ ರೂಪದಲ್ಲಿ ಪಡೆದಿದ್ದ.

ಗೌರಿ ಲಂಕೇಶ್

ಒಂದು ವರ್ಷದ ಕಾಲ ಸಾಲಸೋಲ ಮಾಡುತ್ತಾ ಪರೀಕ್ಷೆಗಾಗಿ ಓದುತ್ತಾ, ಪುಕ್ಕಟೆ ಕೆಲಸ ಮಾಡುತ್ತಾ ಇಂಗ್ಲೆಂಡ್‌ನಲ್ಲಿ ಜೀವನ ಸಾಗಿಸಿದ್ದ ಹನೀಫ್ 2005ರ ಮೇ ತಿಂಗಳಲ್ಲಿ ಪರೀಕ್ಷೆಯನ್ನು ಪಾಸ್ ಮಾಡಿದ. ಆತನ ಜೀವನದಲ್ಲಿ ಅದೊಂದು ಸಂತೋಷದ ಘಟ್ಟವಾಗಿತ್ತು, ಇನ್ನು ಮುಂದೆ ಜೀವನ ಸಾಗಿಸುವುದು ಸುಲಭವೆಂದೂ, ಬಡತನದ ಸಂಕೋಲೆಗಳಿಂದ ಬಿಡುಗಡೆ ಸಿಕ್ಕಿತೆಂದೂ, ತಾನು ವೈದ್ಯನಾಗಿ ಯಶಸ್ಸು ಕಾಣಬಹುದೆಂದೂ ಹನೀಫ್ ಸಂಭ್ರಮಿಸಿದ. ಆಗ ರಜೆಗೆಂದು ಹನೀಫ್ ಬೆಂಗಳೂರಿಗೆ ಬಂದಾಗ ಆತನಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಡಲು ಹಲವಾರು ತಂದೆತಾಯಿಗಳು ಮುಂದಾದರು. ಹೇಗಿದ್ದರೂ ಇಂಗ್ಲೆಂಡಿನಲ್ಲಿ ಆತ ವೈದ್ಯನಾಗಿರುತ್ತಾನಲ್ಲ ಎಂದು.

ಹಾಗೆ ಬಂದ ಆಫರ್‌ಗಳಲ್ಲಿ ಫಿರ್ದೋಸ್ ಆರ್ಶಿಯಾಳ ತಂದೆತಾಯಂದಿರದ್ದೂ ಒಂದಾಗಿತ್ತು. ಆದರೆ ಹನೀಫ್ ತಂದೆ ಇಲ್ಲದ, ಮೂಡಿಗೆರೆಯ ಬಡ ಕುಟುಂಬದಿಂದ ಬಂದಾತ. ಆಕೆ ಬೆಂಗಳೂರಿನ ಶ್ರೀಮಂತ ಕುಟುಂಬದಲ್ಲಿ ಜನಿಸಿದವಳು; ಬಾಲ್ಡ್‌ವಿನ್ ಶಾಲೆಯಲ್ಲಿ, ಆನಂತರ ಬಸವನಗುಡಿಯ ಬಿಎಂಎಸ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆದವಳು. ಅಷ್ಟೇ ಅಲ್ಲ ಫಿರ್ದೋಸ್ ಚೆಲುವೆ. ಹನೀಫ್ ಚೆಲುವಾಂತ ಚೆನ್ನಿಗರಾಯನಲ್ಲ. ಆದರೆ ಫಿರ್ದೋಸ್ ಹೇಳುವಂತೆ "ಮೊದಲು ಹನೀಫ್ ನನಗೆ ಅಷ್ಟು ಆಕರ್ಷಿತನಾಗಿ ಕಂಡಿರಲಿಲ್ಲ. ಆದರೆ ನಂತರ ಆತನ ಸ್ನೇಹ ಸ್ವಭಾವ, ತ್ಯಾಗಮಯಿ ಪ್ರವೃತ್ತಿ ಗೊತ್ತಾದಾಗ ಆತ ನನಗೆ ಇಷ್ಟವಾದ."

ಅವರಿಬ್ಬರ ಮದುವೆ 2005ರಲ್ಲಿ ಜರುಗಿತು. ಸ್ವಾಭಿಮಾನಿಯಾದ ಹನೀಫ್ ತನ್ನ ಮದುವೆ ವೆಚ್ಚವನ್ನು ಮಾವನ ಮೇಲೆ ಹೊರಿಸಲಿಲ್ಲ. ಬದಲಾಗಿ ಫಿರ್ದೋಸ್‌ಳ ಸೋದರ ಸಂಬಂಧಿ ಡಾ. ಸಿದ್ದಿಕ ಅಹಮದ್ ಎಂಬುವವರಿಂದ 3000 ಪೌಂಡ್‌ಗಳನ್ನು ಸಾಲದ ರೂಪದಲ್ಲಿ ಪಡೆದ.

ಹೀಗೆ ಮದುವೆಯಾಗಿ ಇಂಗ್ಲೆಂಡಿಗೆ ಹೋದನಂತರ ತಾನು ದುಡಿದಿದ್ದ ಹಣದಲ್ಲಿ ಅರ್ಧದಷ್ಟನ್ನು ಉಳಿತಾಯ ಮಾಡಿ ತನ್ನ ಎಲ್ಲ ಸಾಲಗಳನ್ನು ಒಂದೊಂದಾಗಿ ತೀರಿಸಲಾರಂಭಿಸಿದ. ಹಾಗೆ ಸಂಗ್ರಹಿಸಿದ ಹಣದಲ್ಲಿ 550 ಪೌಂಡ್‌ಗಳನ್ನು ಫಿರ್ದೋಸ್‌ಳ ಸಹೋದರ ಸಿದ್ದಿಕಿಯವರ ಡಾ. ಎಸ್. ಅಹಮದ್ ಖಾತೆಗೆ ಜಮೆ ಮಾಡಿದ. ಆದರೆ ಆತನ ಸೋದರ ಸಂಬಂಧಿ ಸಬೀಲ್‌ನ ಖಾತೆಯೂ ಡಾ. ಎಸ್. ಅಹಮದ್ ಎಂದಿದ್ದರಿಂದ ಹನೀಫ್ ಭಯೋತ್ಪಾದಕ ಚಟುವಟಿಕೆಗಳಿಗೆ ಹಣ ನೀಡಿದ್ದಾನೆಂದು ಆಸ್ಟ್ರೇಲಿಯಾ ಪೊಲೀಸರು ತಪ್ಪಾಗಿ ತರ್ಕಿಸಿದರು.


ಹನೀಫ್

ಹಾಗೆಯೇ ಇನ್ನೊಂದು ಬಾರಿ ಹನೀಫನು ಕಫೀಲ್ ಅಹಮದ್‌ನ ಬ್ರಿಟನ್ ಬ್ಯಾಂಕಿನ ಖಾತೆಗೆ 960 ಡಾಲರ್‌ಗಳನ್ನು ಜಮಾಯಿಸಿದ್ದ. ವಾಸ್ತವವಾಗಿ ಏನಾಗಿತ್ತೆಂದರೆ ಆಗ ಬೆಂಗಳೂರಿನಲ್ಲಿದ್ದ ಕಫೀಲ್ "ನೀನು ಹಣವನ್ನು ನನ್ನ ಬ್ಯಾಂಕಿಗೆ ಹಾಕು. ಅದಕ್ಕೆ ಸಮಾನವಾದ ರೂಪಾಯಿಗಳನ್ನು ನಾನು ನಿನ್ನ ತಾಯಿಗೆ ಕೊಡುತ್ತೇನೆ" ಎಂದಿದ್ದ. ಹೀಗೆ ತನ್ನ ತಾಯಿಗೆಂದು ಕಳುಹಿಸಿದ ಹಣವನ್ನು ಭಯೋತ್ಪಾದಕ ಚಟುವಟಿಕೆಗೆ ಹನೀಫ್ ನೀಡಿದ ಹಣ ಎಂದೇ ಪೊಲೀಸರು ಅರ್ಥೈಸಿದರು.

ಇದೆಲ್ಲದರ ಮಧ್ಯೆ ಇಂಗ್ಲೆಂಡಿನಿಂದ ಆಸ್ಟ್ರೇಲಿಯಾಗೆ ಹೋಗುವ ಮುನ್ನ ತನ್ನ ಮೊಬೈಲ್‌ನ ಸಿಮ್‌ಕಾರ್ಡನ್ನು ಹನೀಫ್ ಸಬೀಲನಿಗೆ ನೀಡಿದ್ದ. ಆ ಕಾರ್ಡಿನ ಹಣವನ್ನು ಒಂದು ವರ್ಷದ ಕಾಲಕ್ಕೆ ನೀಡಿದ್ದರಿಂದ ಅದರ ವ್ಯಾಲಿಡಿಟಿಯ ಕಾಲ ಇನ್ನೂ ಒಂದು ತಿಂಗಳು ಇದ್ದಿದ್ದರಿಂದ ಸಬೀಲ್ ಅದನ್ನು ತಾನು ಬಳಸುವುದಾಗಿ ಹೇಳಿದ್ದ. ಇದೇ ಸಿಮ್‌ಕಾರ್ಡ್ ಗ್ಲಾಸ್ಗೋದಲ್ಲಿ ಸ್ಫೋಟಗೊಂಡ ಕಾರಿನಲ್ಲಿದ್ದ ಮೊಬೈಲ್‌ನಲ್ಲಿತ್ತು; ಆದ್ದರಿಂದ ಈ ಕೃತ್ಯಕ್ಕೂ ಹನೀಫ್‌ನಿಗೂ ನೇರಾನೇರ ಸಂಬಂಧವಿದೆ ಎಂದು ಪೊಲೀಸರು ತೀರ್ಮಾನಿಸಿದರು.


ಹನೀಫ್‌ನ ತಮ್ಮ ಮತ್ತು ತಾಯಿ

ಆದರೆ ಅದ್ಯಾವುದಕ್ಕೂ ಹನೀಫ್‌ನಿಗೂ ಸಂಬಂಧವಿರಲಿಲ್ಲ. ಸಣ್ಣ ಮನೆಯೊಂದರಲ್ಲಿ ತನ್ನ ಪತ್ನಿ ಫಿರ್ದೋಸ್‌ಳೊಂದಿಗೆ ವಾಸಿಸುತ್ತಿದ್ದ ಹನೀಫ್ ತನ್ನ ತಿಂಗಳ ಸಂಬಳವಾದ 5000 ಡಾಲರ್‌ಗಳಲ್ಲಿ ಸಾಧ್ಯವಾದಷ್ಟು ಕಡಿಮೆ ಹಣವನ್ನು ಖರ್ಚು ಮಾಡಿ ಪ್ರತಿ ತಿಂಗಳು ಸುಮಾರು ಮೂರು ಸಾವಿರ ಡಾಲರ್‌ಗಳನ್ನು ತನ್ನ ತಾಯಿಗೆ ಕಳುಹಿಸುತ್ತಿದ್ದ. ಈ ಹಣದಲ್ಲಿ ಹನೀಫ್‌ನ ವಿದ್ಯಾಭ್ಯಾಸಕ್ಕೆಂದು ಅಮಾನತ್ ಬ್ಯಾಂಕಿನಿಂದ ಪಡೆದಿದ್ದ ಸಾಲ, ತಂಗಿಯ ಮದುವೆಗೆಂದು ಮಾಡಿದ್ದ ಸಾಲ, ಇಂಜಿನಿಯರಿಂಗ್ ಓದುತ್ತಿರುವ ತಮ್ಮನ ವಿದ್ಯಾಭ್ಯಾಸಕ್ಕೆ ಬೇಕಾದ ಹಣ ಮತ್ತು ಮನೆ ಖರ್ಚಿಗೆಂದು ತಾಯಿಗೆ ಅವಶ್ಯವಿದ್ದ ಕಾಸು,ಎಲ್ಲವೂ ಪೂರೈಕೆಯಾಗಬೇಕಿತ್ತು. ಇದೆಲ್ಲದರ ಮಧ್ಯೆ ತನ್ನ ಮದುವೆಗೆಂದು ಪಡೆದಿದ್ದ ಸಾಲವನ್ನು ಸಾಧ್ಯವಾದಾಗಲೆಲ್ಲ ತೀರಿಸುವ ಹೊಣೆ ಹನೀಫ್‌ನ ಮೇಲಿತ್ತು.

ಈ ಮಧ್ಯೆ ಬಾಣಂತನಕ್ಕೆಂದು ಫಿರ್ದೋಸ್ ಬೆಂಗಳೂರಿನಲ್ಲಿರುವ ತವರುಮನೆಗೆ ಬಂದಿದ್ದಳು. ಆಕೆಗೆ ಹೆಣ್ಣು ಮಗು ಜನಿಸಿದಾಗ ಕಫೀಲ್ ಮತ್ತು ಸಬೀಲರ ತಾಯಿ ಡಾ. ಜಕಿಯಾ ಅಹಮದ್ ಭೇಟಿ ನೀಡಿದರು. ಅಂದೇ ಹನೀಫ್‌ನು ತಂದೆ ಆಗಿರುವ ಸುದ್ದಿಯನ್ನು ಮಗ ಸಬೀಲನಿಗೆ ತಿಳಿಸಿದರು. ಇದರ ಬಗ್ಗೆ ಇಂಟರ್‌ನೆಟ್ ಮೂಲಕ ಜೂನ್ 26ರಂದು ಹನೀಫ್‌ನಿಗೆ ಸಬೀಲ್ ಶುಭಾಶಯಗಳನ್ನು ಹೇಳಿದ. ಅದು ಅವರಿಬ್ಬರ ಕೊನೆ ಸಂಪರ್ಕ. ಇದಾದ ಮೂರು ದಿನಗಳ ನಂತರ ಗ್ಲಾಸ್ಗೋ ವಿಮಾನ ನಿಲ್ದಾಣದ ಗೋಡೆಗೆ ಬೆಂಕಿ ಹತ್ತಿಕೊಂಡಿದ್ದ ಚಿರೋಕಿ ಜೀಪೊಂದು ಡ್ಯಾಶ್ ಹೊಡೆಯಿತು.

ಇಂಗ್ಲೆಂಡಿನ ಪೊಲೀಸರು ಅಹ ಮದ್ ಸಹೋದರರ ತಾಯಿಗೆ ಫೋನ್ ಮಾಡಿ ಸಿಮ್‌ಕಾರ್ಡ್ ಬಗ್ಗೆ ತಿಳಿಸಿದಾಗ ಅವರು ಹನೀಫನಿಗೆ ಫೋನ್ ಮಾಡಿ ಇಂಗ್ಲೆಂಡಿನ ಪೊಲೀಸರೊಂದಿಗೆ ಮಾತನಾಡಲು ಸೂಚಿಸಿದರು. ಆತ ಎರಡು ದಿನ ಪ್ರಯತ್ನಿಸಿದರೂ ಅವರು ಸಿಗಲಿಲ್ಲ. ಇತ್ತ ತನ್ನ ಮಗಳು ಜನಿಸಿದ್ದ ದಿನದಿಂದ ಬೆಂಗಳೂರಿಗೆ ಬರಲು ಇಚ್ಛಿಸಿದ್ದ ಹನೀಫ್‌ಗೆ ರಜೆ ಸಿಕ್ಕಿರಲಿಲ್ಲ. ತನ್ನ ಜಾಗಕ್ಕೆ ಬೇರೆಯವರು ಬಂದು ತನಗೆ ರಜೆ ಸಿಗಲೆಂದು ಹನೀಫ್ ಕಾಯುತ್ತಿರುವಾಗಲೇ ಫಿರ್ದೋಸ್ ಮತ್ತು ಹಸುಗೂಸು ಹನಿಯಾಳನ್ನು ಮತ್ತೆ ಆಸ್ಪತ್ರೆಗೆ ಸೇರಿಸಲಾಯಿತು. ಅತ್ತ ಸಬೀಲ್‌ನನ್ನು ಬ್ರಿಟನ್ನಿನಲ್ಲಿ ಬಂಧಿಸಲಾಗಿತ್ತು. ಆದಾಗಲೇ ಹನೀಫ್ ತನ್ನ ತಿಂಗಳ ಸಂಬಳವನ್ನು ತಾಯಿಗೆ ಕಳುಹಿಸಿದ್ದರಿಂದ ಬರಿಗೈ ಆಗಿದ್ದ. ಆಗ ಫಿರ್ದೋಸ್‌ಳ ತಂದೆಯೇ ಆತನಿಗೆ ಬೆಂಗಳೂರಿಗೆ ಒನ್‌ವೇ ಟಿಕೆಟ್ ಖರೀದಿಸಿ ಇಂಟರ್‌ನೆಟ್ ಮೂಲಕ ಕಳುಹಿಸಿದ್ದರು. ಹನೀಫ್ ಹೀಗೆ ಒನ್‌ವೇ ಟಿಕೆಟ್ ಮಾತ್ರ ಪಡೆದಿದ್ದರಿಂದ ಆತ ವಾಪಸ್ಸು ಬರಲು ಇಚ್ಛಿಸದೇ ಪರಾರಿ ಆಗಲು ಯತ್ನಿಸುತ್ತಿದ್ದಾನೆಂದೂ ಪೊಲೀಸರು ಆರೋಪಿಸಿದರು. ಆದರೆ ಅವರು ನಡೆಸಿದ ವಿಚಾರಣೆಯ ಸಂದರ್ಭದಲ್ಲಿ ಹಣಕಾಸಿನ ವಹಿವಾಟು, ಫೋನ್ ಸಂಭಾಷಣೆ, ಇಂಟರ್‌ನೆಟ್ ಮೂಲಕ ಸಂಪರ್ಕ, ಪ್ರತಿಯೊಂದರ ಬಗ್ಗೆಯೂ ಹನೀಫ್ ಸ್ಪಷ್ಟವಾಗಿ ನೇರವಾಗಿ ಉತ್ತರಿಸಿದ್ದ. ತಾನು ಯಾವ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲವೆಂದೂ, ತನ್ನ ವ್ಯಕ್ತಿತ್ವಕ್ಕೆ ಮತ್ತು ವೃತ್ತಿಗೆ ಕಳಂಕ ಬರುವಂತೆ ತಾನು ಏನನ್ನೂ ಮಾಡಿಲ್ಲವೆಂದೂ ಹನೀಫ್ ಹೇಳಿದ.

ಭಯೋತ್ಪಾದನೆಯ 'ಗುಮ್ಮ'ನನ್ನು ತೋರಿಸಿ ಬರಲಿರುವ ಚುನಾವಣೆಯಲ್ಲಿ ಗೆಲ್ಲುವ ಅಗತ್ಯ ಕಂಡ ಅಧಿಕಾರಾರೂಢ ಸರಕಾರಕ್ಕೆ ಹನೀಫ್ ಹೇಳುತ್ತಿದ್ದ ಸತ್ಯ ಬೇಕಿರಲಿಲ್ಲ. ಆದ್ದರಿಂದ ತನ್ನ ಎಲ್ಲ ಅಧಿಕಾರವನ್ನೂ ಪ್ರಯೋಗಿಸಿ ಆತ ಭಯೋತ್ಪಾದಕ ಎಂದು ಬಣ್ಣಿಸಲು ಮುಂದಾಯಿತು. ಅಷ್ಟೊತ್ತಿಗಾಗಲೇ ಹನೀಫ್ ಪರವಾಗಿ ವಕಾಲತ್ತನ್ನು ವಹಿಸಿದ್ದ ಪೀಟರ್ ರುಸೊ ಎಂಬುವವರಿಗೂ ಯಾವ ಮಾಹಿತಿಯನ್ನು ನೀಡದೆ ಪೊಲೀಸರು ಸತಾಯಿಸಿದರು.

ನ್ಯಾಯಾಲಯದ ಮುಂದೆ "ಕಫೀಲ್ ಮತ್ತು ಸಬೀಲ್ ಸಹೋದರರಿಗೆ ಸಿಮ್ ಕಾರ್ಡ್ ಕೊಟ್ಟು ಭಯೋತ್ಪಾದಕ ಕೃತ್ಯಕ್ಕೆ ಸಹಕರಿಸಿದ" ಎಂದು ಪೊಲೀಸರು ಆರೋಪಿಸಿದರು. ಸರಕಾರದ ಈ ವಾದವನ್ನು ಕೇಳಿದ ನ್ಯಾಯಾಧೀಶರು "ತನ್ನ ಹೆಸರಿನಲ್ಲಿರುವ ಸಿಮ್‌ಕಾರ್ಡ್ ಕೊಟ್ಟು ಸಿಕ್ಕಿಹಾಕಿಕೊಳ್ಳುವಂತಹ ಪೆದ್ದುತನವನ್ನು ಯಾರು ಪ್ರದರ್ಶಿಸುತ್ತಾರೆ?" ಎಂದು ಕೇಳಿದರು. ಅದಕ್ಕೆ ಪೊಲೀಸರು "ಕಾರಿನಲ್ಲಿ ಭಸ್ಮವಾಗದೇ ಇದ್ದದ್ದಕ್ಕೆ ಸಿಕ್ಕಿತು" ಎಂದು ವಾದಿಸಿದರು. ವಾಸ್ತವವಾಗಿ ಆ ಸಿಮ್ ಕಾರ್ಡನ್ನು ಹೊಂದಿದ್ದ ಮೊಬೈಲ್ ಸ್ಫೋಟಗೊಂಡ ಕಾರಿನಲ್ಲಿ ಇರಲೇ ಇಲ್ಲ. ಬದಲಾಗಿ ಅದನ್ನು ಗ್ಲಾಸ್ಗೋದಿಂದ ಮುನ್ನೂರು ಮೈಲಿ ದೂರದಲ್ಲಿರುವ ಸಬೀಲ್‌ನ ಮನೆಯಿಂದ ವಶಪಡಿಸಿಕೊಳ್ಳಲಾಯಿತು ಎಂದು ಬ್ರಿಟಿಷ್ ಮಾಧ್ಯಮಗಳು ತನಿಖೆ ಮಾಡಿ ಅಂದೇ ವರದಿ ಮಾಡಿದವು. ಹೀಗೆ ಹನೀಫ್‌ನ ವಿರುದ್ಧ ಆಸ್ಟ್ರೇಲಿಯಾದ ಪೊಲೀಸರಿಗಿದ್ದ ಒಂದೇ ಒಂದು ಸಾಕ್ಷಿ ಕೂಡ ಬಿದ್ದು ಹೋಯಿತು.

ಪರಿಣಾಮವಾಗಿ ನ್ಯಾಯಾಲಯ ಹನೀಫನಿಗೆ ಬೇಲ್ ನೀಡಿತು. ಆದರೂ ತನ್ನ ತಪ್ಪನ್ನು ಒಪ್ಪಿಕೊಳ್ಳದ ಸರ್ಕಾರ ಕೂಡಲೇ ಆತನ ವೀಸಾವನ್ನು ರದ್ದು ಮಾಡಿ ಮತ್ತೆ ಬಂಧಿಸಿತು. ಅಧಿಕಾರದ ಈ ದುರ್ಬಳಕೆಯನ್ನು ಅಲ್ಲಿನ ನ್ಯಾಯವಾದಿಗಳು, ಮಾಧ್ಯಮಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಕಠಿಣವಾಗಿ ವಿರೋಧಿಸಿದವು. ಸರ್ಕಾರದ ಮೇಲೆ ಒತ್ತಡ ತಂದವು. ಕೊನೆಗೂ ಹನೀಫ್ ವಿರುದ್ಧ ಯಾವ ಸಾಕ್ಷಿಗಳೂ ಇಲ್ಲ ಎಂದು ಒಪ್ಪಿಕೊಂಡ ಸರ್ಕಾರ ಆತನನ್ನು ಬಿಡುಗಡೆಗೊಳಿಸಿತು.

ಹನೀಫ್ ಈಗ ಬೆಂಗಳೂರಿಗೆ ಹಿಂದಿರುಗುತ್ತಿದ್ದಾನೆ. ಮುಸಲ್ಮಾನ ಆಗಿದ್ದ ಎಂಬ ಏಕೈಕ ಕಾರಣಕ್ಕೆ ಮೂಡಿಗೆರೆಯ ಈ ಹುಡುಗ, ಬೆಂಗಳೂರಿನ ಈ ವೈದ್ಯ, ತಾಯಿಗೆ ಆಧಾರಸ್ತಂಭವಾಗಿದ್ದ ಮಗ, ಪ್ರೀತಿಯ ಗಂಡ ಆದ ಹನೀಫ್ ಇಷ್ಟೆಲ್ಲಾ ಅನ್ಯಾಯವನ್ನು ಎದುರಿಸಬೇಕಾಯಿತು....

ಸತ್ಯ-ಸುಳ್ಳು ಶೋಧಿಸುವ ಹೊಣೆ ಕುರಿತು.....

ಬೆಂಗಳೂರಿನ ವೈದ್ಯ ಮೊಹಮದ್ ಹನೀಫ್ ನ್ನು ಅನ್ಯಾಯವಾಗಿ ಸುಮಾರು ಒಂದು ತಿಂಗಳ ಲ ಬಂಧನದಲ್ಲಿಟ್ಟಿದ್ದರು ನಿಜ. ಆದರೆ ಭಯೋತ್ಪಾದನೆ ಗ್ಗೆ ಇವತ್ತು ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡಿರುವ ತಿ ಮತ್ತು ಸರಕಾರಗಳ ಸರ್ವಾಧಿಕಾರಿ ಧೋರಣೆ ಿಂದಾಗಿ ಹನೀಫ್‌ನಿಗಿಂತಲೂ ಕಠೋರವಾದ ಮತ್ತು ಷ್ಟೇ ಅನ್ಯಾಯಯುತವಾದ ಶಿಕ್ಷೆಗೆ ಗುರಿಯಾಗು ರುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

ಅಂಥವರಲ್ಲಿ ಪ್ರಮುಖರು ಮಹೆರ್ ಅರ್‍ರಾರ್ ಂಬುವವರು. ಸಿರಿಯಾ ದೇಶದಲ್ಲಿ ಜನಿಸಿದ್ದ ಅರ್‍ರಾರ್ ವರು ಆನಂತರ ಕೆನಡಾ ದೇಶದ ಪ್ರಜೆ ಆಗಿದ್ದರು. ವರು 2002ರಲ್ಲಿ ಅಮೆರಿಕೆಗೆ ಭೇಟಿ ನೀಡಿದಾಗ ಲ್ಲಿನ ಪೊಲೀಸರು ಸಂಶಯಪಟ್ಟು ವರನ್ನು ಬಂಧಿಸಿದರಲ್ಲದೆ, ಅವರನ್ನು ಾಪಸ್ಸು ನೆರೆಯ ಕೆನಡಾಗೆ ಕಳುಹಿ ುವ ಬದಲಾಗಿ, ದೂರದ ಸಿರಿಯಾ ೇಶಕ್ಕೆ ಕರೆದುಕೊಂಡು ಹೋಗಿ ಮಾಧಿಯಂತಿದ್ದ ಜೈಲಿನ ಕೊಠಡಿ ುಲ್ಲಿ 10 ತಿಂಗಳು 10 ದಿನಗಳ ಾಲ ಬಂಧನದಲ್ಲಿಟ್ಟಿದ್ದರು. ತಮಗೂ ಲ್‌ಖೈದಾಗೂ ಸಂಬಂಧ ಇದೆ ಂದು ಒಪ್ಪಿಕೊಳ್ಳುವಂತೆ ಅರ್‍ರಾರ್‌ರವ ನ್ನು ಬಡಿಯಲಾಯಿತು, ಹಿಂಸಿಸಲಾ ಯಿತು, ಸುಳ್ಳು ಪ್ರಮಾಣ ಪತ್ರಗಳ ಮೇಲೆ ಸಹಿ ಪಡೆಯಲಾಯಿತು.



ಗಿಲಾನಿ

ಕೊನೆಗೆ ಅರ್‍ರಾರಿಗೂ, ಭಯೋ ತ್ಪಾದಕ ಅಲ್‌ಖೈದಾ ಸಂಘಟನೆಗೂ ಯಾವುದೇ ಸಂಬಂಧವಿಲ್ಲ ಎಂದು ಅರಿವಾಗಿ ಅವರನ್ನು ಬಿಡುಗಡೆಗೊಳಿಸ ಲಾಯಿತು. ಕಳೆದ ಜನವರಿ ತಿಂಗಳು (ಸುಮಾರು ನಾಲ್ಕು ವರ್ಷಗಳ ನಂತರ) ಕೆನಡಾದ ಪ್ರಧಾನಿ ಅರ್‍ರಾರ್‌ರವರ ಕ್ಷಮೆ ಕೇಳಿದರಲ್ಲದೆ, 12.5 ಮಿಲಿಯನ್ ಡಾಲರ್‌ಗಳನ್ನು ಪರಿಹಾರಧನವಾಗಿ ನೀಡಿದರು.

"ಅಕ್ರಮವಾಗಿ ಬಂಧನಕ್ಕೊಳಪಟ್ಟು ಚಿತ್ರಹಿಂಸೆಗೆ ಒಳಗಾಗುವುದನ್ನು ವಿವರಿಸಲಾಗುವುದಿಲ್ಲ" ಎಂದು ಹೇಳಿರುವ ಅರ್‍ರಾರ್‌ರವರು "ಕೆನಡಾದ ಪತ್ರಕರ್ತರು ಕೂಡ ಸರಿಯಾದ ತನಿಖೆ ನಡೆಸದೆ ಸರ್ಕಾರ ಮತ್ತು ಪೊಲೀಸರು ಹೇಳಿದ್ದನ್ನೆಲ್ಲ ನಂಬಿ, ನನ್ನ ವಿರುದ್ಧ ಕಪೋಲಕಲ್ಪಿತ ಲೇಖನಗಳನ್ನು ಬರೆದು ನನಗೂ ಮತ್ತು ತಮ್ಮ ಪತ್ರಿಕಾ ಧರ್ಮದ ನೀತಿಸಂಹಿತೆಗೂ ಅಪಚಾರ ಮಾಡಿದರು" ಎಂದೇ ವಿಷಾದ ವ್ಯಕ್ತಪಡಿಸಿದ್ದಾರೆ. ಅಂದಹಾಗೆ ಅಮೆರಿಕಾ ಮಾಡಿದ್ದು ತಪ್ಪು ಎಂದು ಗೊತ್ತಾಗಿದ್ದರೂ ಇವತ್ತಿಗೂ ಅರ್‍ರಾರ್‌ರವರಲ್ಲಿ ಕ್ಷಮೆ ಯಾಚುವುದಿರಲಿ, ಅವರು ಇನ್ನೆಂದಿಗೂ ಅಮೆರಿಕಕ್ಕೆ ಕಾಲಿಡದಂತೆ ನಿಷೇಧ ಹೇರಲಾಗಿದೆ!

ಅರ್‍ರಾರ್‌ರವರಂತೆ ಅಮೆರಿಕದ ಕೆಂಗಣ್ಣಿಗೆ ತುತ್ತಾದವರಲ್ಲಿ ಖಾಲೆದ್ ಎಲ್ ಮಸ್ರಿ ಮತ್ತೊಬ್ಬರು. ಲೆಬನಾನ್ ಮೂಲದವರಾದ ಇವರು ಜರ್ಮನಿ ದೇಶದ ಪ್ರಜೆ. 2003ರ ಡಿಸೆಂಬರ್‌ನಲ್ಲಿ ಮಸೆಡೊನಿಯಾಕ್ಕೆ ರಜೆ ಮೇಲೆ ಹೋಗಿದ್ದಾಗ, ಮಸ್ರಿ ಅಲ್ ಖೈದಾದ ಸದಸ್ಯ ಎಂದು ತಪ್ಪಾಗಿ ಭಾವಿಸಿದ ಅಮೆರಿಕದ CIA ನವರು ಅವರನ್ನು ಬಂಧಿಸಿದರು. ಅಫಘಾನಿಸ್ತಾನದಲ್ಲಿ ಅಮೆರಿಕಾ ನಡೆಸುತ್ತಿರುವ ಜೈಲಿನಲ್ಲಿ ಮಸ್ರಿಯವರನ್ನು ಐದು ತಿಂಗಳ ಕಾಲ ಬಂಧಿಸಿ ಡಲಾಯಿತಲ್ಲದೆ, ಅವರ ಮೇಲೆ ಚಿತ್ರ ಹಿಂಸೆ ಮತ್ತು ಲೈಂಗಿಕ ದೌರ್ಜನ್ಯಗಳನ್ನು ನಡೆಸಲಾಯಿತು.

ಕೊನೆಗೆ ಮಸ್ರಿಯವರು ತಮಗೆ ಬೇಕಾಗಿದ್ದ ವ್ಯಕ್ತಿ ಅಲ್ಲ ಎಂದು ಗೊತ್ತಾಗಿ ಅವರನ್ನು ಮಸೆಡೋನಿಯಾ ಮತ್ತು ಅಲ್ಬೇನಿಯಾ ದೇಶಗಳ ನಡುವಿನ ಗಡಿ ಭಾಗದಲ್ಲಿ ಅಮೆರಿಕಾ ಸೈನಿಕರು ಬಿಸಾಡಿ ಹೋಗಿದ್ದರು. ಹಾಗೆ ಹೋಗುವ ಮುನ್ನ "ನಿನಗೇನಾಯಿತು ಎಂದು ಯಾರಿಗೂ ಹೇಳಬೇಡ. ಅವರ್‍ಯಾರೂ ನಿನ್ನನ್ನು ನಂಬುವುದಿಲ್ಲ" ಎಂಬ ಎಚ್ಚರಿಕೆಯನ್ನು ನೀಡಿದ್ದರು.

ಅಂದಿನ ಜರ್ಮನಿಯ ಅಧ್ಯಕ್ಷ ಜೆರಾರ್ಡ್ ಶ್ರೋಢರ್‌ಗೆ ಮಸ್ರಿಯವರ ಮೇಲಾಗಿದ್ದ ಅತ್ಯಾಚಾರ, ಅಕ್ರಮ ಬಂಧನದ ಬಗ್ಗೆ ಎಷ್ಟು ಗೊತ್ತಿತ್ತು ಎಂಬುದನ್ನು ಕುರಿತು ತನಿಖೆ ಮಾಡಲು ಇಂದು ಒಂದು ಸಂಸದೀಯ ಸಮಿತಿಯನ್ನು ನೇಮಿಸಲಾಗಿದೆ.

ಭಾರತದಲ್ಲೂ ಇಂತಹ ಹಲವಾರು ಪ್ರಕರಣಗಳು ನಡೆದಿದೆ. ಡಿಸೆಂಬರ್ 2001ರಲ್ಲಿ ಮೊಹಮ್ಮದ್ ಅಫ್ರೋಜ್ ಎಂಬಾತನನ್ನು ಬಂಧಿಸಲಾಗಿತ್ತು, ಆತ ಅಲ್ ಖೈದಾದ ಸದಸ್ಯನೆಂದೂ, ದೆಹಲಿಯಲ್ಲಿರುವ ಭಾರತದ ಪಾರ್ಲಿಮೆಂಟಿನ ಮೇಲೆ, ಲಂಡನ್‌ನಲ್ಲಿರುವ ಹೌಸ್ ಆಫ್ ಕಾಮನ್ಸ್ ಮೇಲೆ ಮತ್ತು ಸಿಡ್ನಿಯಲ್ಲಿರುವ ರಿಯಾಲ್ಟೊ ಟವರ್ಸ್ ಮೇಲೆ ದಾಳಿ ಮಾಡಲು ಸಂಚು ರೂಪಿಸಿರುವ ತಂಡದ ಸದಸ್ಯನೆಂದೂ ಆರೋಪಿಸಲಾಗಿತ್ತು, ಆದರೆ ನಾಲ್ಕು ತಿಂಗಳ ಕಾಲ ಬಂಧನದಲ್ಲಿದ್ದ ಅಫ್ರೋಜ್‌ಗೂ ಅಲ್ ಖೈದಾಗೂ ಯಾವುದೇ ಸಂಬಂಧ ವಿಲ್ಲ ಎಂದು ಗೊತ್ತಾಗಿ ಆತನನ್ನು ಬಿಡುಗಡೆ ಮಾಡಲಾಗಿತ್ತು.



ಅಫ್ಜಲ್ ಗುರು

ಕಾಶ್ಮೀರಿ ಮೂಲದ, ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್.ಎ. ಆರ್. ಗಿಲಾನಿ ಪ್ರಕರಣದಲ್ಲೂ ಆದದ್ದು ಏನು? 2001ರ ಡಿಸೆಂಬರ್ 13ರಂದು ಭಾರತದ ಪಾರ್ಲಿಮೆಂಟಿನ ಮೇಲೆ ನಡೆದ ದಾಳಿಯಲ್ಲಿ ಗಿಲಾನಿಯವರ ಪಾತ್ರ ವಿತ್ತೆಂದು ದೆಹಲಿ ಪೊಲೀಸರು ಆರೋಪಿಸಿ ಅವರನ್ನು ಬಂಧಿಸಿದ್ದರು. ತಾನು ಆ ದಾಳಿಯಲ್ಲಿ ಭಾಗವಹಿಸಿದ್ದೆ ಎಂಬ ಸುಳ್ಳು ತಪ್ಪೊಪ್ಪಿಗೆ ಸಹಿ ಮಾಡಲು ಗಿಲಾನಿಯವರನ್ನು ಒತ್ತಾಯಿಸಲಾಗಿತ್ತು. ಅದಕ್ಕೆ ಅವರು ನಿರಾಕರಿಸಿದಾಗ ಅವರನ್ನು ಬೆತ್ತಲೆಗೊಳಿಸಿ, ಚಿತ್ರಹಿಂಸೆ ನೀಡಲಾಗಿತ್ತು; ಹಲವಾರು ಗಂಟೆಗಳ ಕಾಲ ಏರೋ ಪ್ಲೇನ್ ಟ್ರೀಟ್‌ಮೆಂಟ್ ಕೊಡಲಾಗಿತ್ತು, ಅವರ ಸಂಸಾರದವರನ್ನೆಲ್ಲ ಬಂಧಿಸಿ, ಅವರ ಮಡದಿಯ ಮೇಲೆ ಅತ್ಯಾಚಾರ ಮಾಡುವುದಾಗಿಯೂ, ಅವರ ಮೂರು ವರ್ಷ ವಯಸ್ಸಿನ ಮಗನನ್ನೂ ಸೇರಿದಂತೆ ಎಲ್ಲರನ್ನೂ ಕೊಲ್ಲುವುದಾಗಿಯೂ ಬೆದರಿಸಲಾಯಿತು. ಇಂತಹ ಎಲ್ಲಾ ಬೆದರಿಕೆಗಳ, ಹಿಂಸೆಯ ನಡುವೆಯೂ ಸುಳ್ಳು ತಪ್ಪೊಪ್ಪಿಗೆಗೆ ಸಹಿ ಮಾಡಲು ಗಿಲಾನಿ ನಿರಾಕರಿಸಿದರು. ಗಿಲಾನಿಯವರನ್ನು ಮಾನಸಿಕವಾಗಿ ದಮನ ಮಾಡುವಲ್ಲಿ ವಿಫಲರಾದ ಪೊಲೀಸರು ಅವರ ವಿರುದ್ಧ ಖೊಟ್ಟಿ ಸಾಕ್ಷಿಗಳನ್ನು ಸೃಷ್ಟಿಸಿದರು. ಅವನ್ನು ನಂಬಿದ ವಿಶೇಷ ಪೋಟಾ ನ್ಯಾಯಾಲಯ ಗಿಲಾನಿಯವರಿಗೆ ಮರಣ ದಂಡನೆಯನ್ನು ವಿಧಿಸಿತ್ತು.

ಅದೃಷ್ಟವಶಾತ್ ಗಿಲಾನಿ ಪರವಾಗಿ ನಂದಿತಾ ಹಕ್ಸರ್, ರಾಂ ಜೇಠ್‌ಮಲಾನಿ ಸೇರಿದಂತೆ ಹಲವಾರು ಹಿರಿಯ ವಕೀಲರು ವಾದಿಸಿದ್ದರಿಂದ ದೆಹಲಿ ನ್ಯಾಯಾಲಯವು ಮರಣದಂಡನೆಯನ್ನು ರದ್ದುಗೊಳಿಸಿತಲ್ಲದೆ ಅವರು ದೋಷಮುಕ್ತರು ಎಂದಿತು.

ಆದರೆ ಗಿಲಾನಿಯವರೊಂದಿಗೆ ಅದೇ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಅಫಜಲ್ ಗುರು ಎಂಬಾತನಿಗೆ ನಂದಿತಾ ಹಕ್ಸರ್, ರಾಂ ಜೇಠ್‌ಮಲಾನಿ ತರಹದ ಹೈಪ್ರೊಫೈಲ್ ವಕೀಲರಿರಲಿ, ಸಾಮಾನ್ಯ ವಕೀಲನೂ ಇರಲಿಲ್ಲ. ಈಗ ಆತ ಮರಣದಂಡನೆಗೆ ಗುರಿಯಾಗಿ ತಿಹಾರ್ ಜೈಲಿನಲ್ಲಿ ಜೀವಂತ ದಿನಗಳನ್ನು ಎಣಿಸುತ್ತಿದ್ದಾನೆ.

ವಿಪರ್ಯಾಸದ ಸಂಗತಿ ಯಾವುದು ಗೊತ್ತಾ? ಇವತ್ತು ಹನೀಫನ ಬಿಡುಗಡೆ ಬಗ್ಗೆ ಹರ್ಷೋದ್ಗಾರವನ್ನೂ ಎತ್ತುತ್ತಿರುವ ನಮ್ಮ ಮಾಧ್ಯಮಗಳು ಕೆಲ ದಿನಗಳ ಹಿಂದಿನವರೆಗೂ ಹನೀಫ್‌ನನ್ನು, ಆತನ ಸಂಸಾರದವರನ್ನು ಭಯೋತ್ಪಾದಕರು ಎಂಬಂತೆ ಚಿತ್ರಿಸುತ್ತಿದ್ದವು.


ಮಾಧ್ಯಮದವರು ಸ್ವತಂತ್ರ ಬುದ್ಧಿಯನ್ನು ಉಪಯೋಗಿಸುವ ಶಕ್ತಿಯನ್ನು ಕಳೆದುಕೊಂಡರೆ ಅವರ ಕಣ್ಣಲ್ಲಿ ಅರ್‍ರಾರ್, ಮಸ್ರಿ, ಅಫ್ರೋಜ್, ಗಿಲಾನಿ, ಅಫಜಲ್, ಹನೀಫ್ ಎಲ್ಲರೂ ಭಯೋತ್ಪಾದಕರಂತೆ, ಗಲ್ಲಿಗೇರಲೇಬೇಕಾದವರಂತೆ ಕಾಣಿಸುತ್ತಾರೆ. ಅದಕ್ಕಿಂತಲೂ ಅಪಾಯಕಾರಿಯಾದದ್ದೇನೆಂದರೆ, ಸರಕಾರ ಮತ್ತು ಪೊಲೀಸರು ಹೇಳಿದ್ದೆಲ್ಲವನ್ನೂ ವೇದವಾಕ್ಯದಂತೆ ಸ್ವೀಕರಿಸಿ ಪ್ರಕಟಿಸುವ, ಬಿತ್ತರಿಸುವ ಪತ್ರಕರ್ತರಿಂದಾಗಿ ಅದೆಷ್ಟೋ ಅಮಾಯಕರ ಬದುಕು ನುಚ್ಚು ನೂರಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಪತ್ರಿಕೋದ್ಯಮ ನಿಜವಾದ ನಾಲ್ಕನೇ ಸ್ತಂಭ ಆಗುವುದೆಂದು?

(ಅಫಜಲ್ ಗುರು ಪ್ರಕರಣ ಕುರಿತಂತೆ ಹೆಚ್ಚು ಮಾಹಿತಿಗಾಗಿ ನಮ್ಮ ಪ್ರಕಾಶನದ 'ಡಿಸೆಂಬರ್ 13' -ಲೇಖಕಿ ಅರುಂಧತಿ ರಾಯ್ ಮತ್ತು ಇತರರು ಪುಸ್ತಕವನ್ನು ಓದಿ)

-ಜಿ.ಎಲ್.

ಸಂತನ ದೇಗುಲಕ್ಕೆ ಸೈತಾನ ಪಾದ್ರಿ ಉಳ್ಳಾಗಡ್ಡಿ

ನಮ್ಮ ದೇಶದಲ್ಲಿ ಒಂದು ಕಡೆ ದೇವರು, ದೇಗುಲ, ಧರ್ಮಗಳನ್ನೇ ತಮ್ಮ ಹೊಟ್ಟೆ ತುಂಬಿಸುವ ಸಾಧನಗಳನ್ನಾಗಿ ಮಾಡಿಕೊಂಡಿರುವವರಿಗೇನೂ ಕೊರತೆ ಇಲ್ಲ. ಇನ್ನೊಂದೆಡೆ, ಇವುಗಳನ್ನೇ ಬಳಸಿಕೊಂಡು ದುಡ್ಡು ಮಾಡುವ ಖದೀಮರಿಗೂ ಬರವಿಲ್ಲ. ಆದರೆ, ಇದು ಯಾವುದೇ ಒಂದು ಧರ್ಮಕ್ಕೋ, ಮತಕ್ಕೋ ಸೀಮಿತವಾಗಿ ಇರುವುದೂ ಅಲ್ಲ. ಹಿಂದೂ, ಮುಸ್ಲಿಮ್, ಕ್ರೈಸ್ತ-ೕಗೆ ಧರ್ಮ ಯಾವುದಾದರೇನು, ಭಕ್ತರನ್ನು ುಲಿಯುವವರು ಎಲ್ಲೆಲ್ಲಿಯೂ ಇದ್ದಾರೆ. ದಕ್ಕೆ ಹುಬ್ಬಳ್ಳಿಯ ಉಳ್ಳಾಗಡ್ಡಿಯೇ ಕ್ಷಿ.



ಎಸ್.ಎಚ್. ಉಳ್ಳಾಗಡ್ಡಿ

ಹುಬ್ಬಳ್ಳಿಯ ಘಂಟಿಕೇರಿಯ ಹತ್ತಿದ ಕ್ರಿಶ್ಚಿಯನ್ ಕಾಲೋನಿಯಲ್ಲಿ ತ್ಯಂತ ಪುರಾತನವಾದ ಚರ್ಚ್ ಂದಿದೆ. ಇದಕ್ಕೆ ಎಸ್. ಎಚ್. ಉಳ್ಳಾಗಡ್ಡಿ ಎಂಬ ಪಾದ್ರಿಯೋ ಅಥವಾ ೖತಾನನೋ ಕಳೆದ 12 ವರ್ಷಗಳಿಂದ ಂಟುಬಿದ್ದಿದ್ದಾನೆ. ಇವನ ಕಿತಾಪತಿಗಳನ್ನು ೋಡಿ ನೋಡಿ ಸುಸ್ತಾದ ಕ್ರಿಶ್ಚಿಯನ್ ಮುದಾಯವೇ ಈಗ ಇವನ ವಿರುದ್ಧ ರುಗಿ ಬಿದ್ದಿದೆ. ಚರ್ಚಿನ ಹಿತೈಷಿಗಳೆಲ್ಲಾ ೇರಿಕೊಂಡು ಈಗಾಗಲೇ ಉತ್ತರ ಕರ್ನಾ ಕ ಪ್ರಾಂತೀಯ ರೆವರೆಂಡ್ ಬಿಶಪ್ ಎಸ್. ವಸಂತ ುಮಾರ್‌ರವರಿಗೆ ಲಿಖಿತ ಮನವಿ ಸಲ್ಲಿಸಿ ಸೈತಾನ್ ಾದರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಈ ಉಳ್ಳಾಗಡ್ಡಿಗೆ ಪ್ರತಿ ತಿಂಗಳು 12,000 ರೂಪಾಯಿಗಳ ಗೌರವಧನವನ್ನು ನೀಡಲಾಗುತ್ತದೆ. ುಕ್ತವಾಗಿ ಒಂದು ಸುಸಜ್ಜಿತವಾದ ಮನೆಯನ್ನು ೀಡಲಾಗಿದೆ. ಮಕ್ಕಳು, ಮರಿ ಇಲ್ಲದ ಇವನಿಗೆ ಅದ್ಯಾಕೆ ಷ್ಟು ಬೇಕೋ ಗೊತ್ತಿಲ್ಲ, ಕಂಡಕಂಡಲ್ಲಿ ಹಣ ುಳುಸುವುದನ್ನೇ ದಂಧೆಯನ್ನಾಗಿಸಿಕೊಂಡುಬಿಟ್ಟಿದ್ದಾನೆ.

ತನ್ನ ಮನೆ ಛಾವಣಿ ಸೋರುತ್ತದೆ ಎಂದು ಅದರ ುರಿಗಾಗಿ ಹಣ ಎತ್ತಿದ. ಇದ್ದಷ್ಟು 600 ಚದರ ಅಡಿಗಳಾದರೂ 1000 ಚದರ ಅಡಿಗಳಿಗೆ ಬಿಲ್ ಹಾಕಿಸಿ ದುಡ್ಡು ಎತ್ತಿಕೊಂಡ. ಅದು ಹೇಗೋ ಗೊತ್ತಾಗಿ ಕಂಡಕಂಡವರಿಂದ ಮಂಗಳಾರತಿಯನ್ನೂ ಮಾಡಿಸಿಕೊಂಡ.


ತನಗೆ ಬರುವ ಗೌರವಧನ ಸಾಲದೆಂಬಂತೆ ವಾರಕ್ಕೆ ಮೂರು ಸಾರಿ ಪ್ರಾರ್ಥನಾ ಸಮಯದಲ್ಲಿ ಭಕ್ತರಿಂದ ದುಡ್ಡು ಎತ್ತುತ್ತಾನೆ. ಇದೇ ತಿಂಗಳಿಗೆ ಕನಿಷ್ಠ ಪಕ್ಷ 15 ಸಾವಿರ ಆಗುತ್ತದೆ. ಇದಲ್ಲದೇ ನೌಕರಿಯಲ್ಲಿರುವ ಕ್ರಿಶ್ಚಿಯನ್ನರು ತಮ್ಮ ಸಂಬಳದ ಶೇ. 10 ರಷ್ಟು ಹಣವನ್ನು ಈ ಚರ್ಚಿಗೆ ತಂದು ಸುರಿಯುತ್ತಾರೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಲೆಕ್ಕ ಬುಕ್ಕು ಇಲ್ಲದೇ ನೇರವಾಗಿ ಉಳ್ಳಾಗಡ್ಡಿಯ ತಿಜೋರಿ ಸೇರುತ್ತದೆ. ಏಕೆಂದರೆ, ಭಕ್ತರಿಂದ ಹಣ ಪಡೆದುದಕ್ಕಾಗಿ ಕೊಡುವ ರಶೀದಿಗಳೇ ಡೂಪ್ಲಿಕೇಟ್. ಒಂದೇ ನಂಬರಿನ ಎರಡೆರಡು ರಶೀದಿಗಳನ್ನು ಮಾಡಿಸಿಟ್ಟುಕೊಂಡಿದ್ದಾನೆ. ಒಂದು ರಾಮನ ಲೆಕ್ಕಕ್ಕೆ, ಮತ್ತೊಂದು ಕೃಷ್ಣನ ಲೆಕ್ಕಕ್ಕೆ.

ಹುಬ್ಬಳ್ಳಿ

ಈತ ಹಣ ಗೆಬರುವುದಕ್ಕೆ ಏನೆಲ್ಲಾ ಕರಾಮತ್ತು ಮಾಡಬಹುದೆಂದು ಲೆಕ್ಕ ಹಾಕುತ್ತಿರುತ್ತಾನೆ. ಏನೂ ಸಿಗದಿದ್ದಾಗ ಇದ್ದುದನ್ನೇ ಒಡೆದು ಕಟ್ಟುವ ಕೆಲಸ ಮಾಡುತ್ತಾನೆ. ಚೆನ್ನಾಗಿಯೇ ಇದ್ದ ಚರ್ಚಿನ ಕಾಂಪೌಂಡ್‌ನ್ನು ಸರಿ ಇಲ್ಲ ಎಂದು ಹೇಳಿ ಅದನ್ನು ಒಡೆಸಿ ಹೊಸದಾಗಿ ಕಟ್ಟಿಸಿದ. ಇಂತಹ ಅಭಿವೃದ್ಧಿ ಕಾರ್ಯಗಳಿಗೆಲ್ಲ ಬಿಶಪ್ ಅವರಿಂದ ಹಣ ಬರುತ್ತದೆ. ಆದರೂ ಭಕ್ತರಿಗೆ ಡುಪ್ಲಿಕೇಟ್ ರಶೀದಿ ಕೊಟ್ಟು ಅವರಿಂದಲೂ ಹಣ ಎತ್ತಿ ನೇರವಾಗಿ ಜೇಬಿಗಿಳಿಸುತ್ತಾನೆ.

ಚರ್ಚಿನ ಸಮಿತಿಯಲ್ಲಿ ಮಹಿಳೆಯರು ಬೇಡ!

ಮಹಿಳೆಯರೆಂದರೆ ಉಳ್ಳಾಗಡ್ಡಿಗೆ ಅದೇಕೋ ದ್ವೇಷ. ಹಾಗಾಗಿಯೇ ಚರ್ಚಿನ ಸಮಿತಿಯಲ್ಲಿ ಮಹಿಳೆಯರು ಇರಕೂಡದು ಎಂಬ ಫರ್ಮಾನು ಹೊರಡಿಸಿದಂತಿದೆ.



ಪುರಾತನ ಚರ್ಚ್

ಈ ಚರ್ಚಿಗೆ ಒಂದು ಆಡಳಿತ ಮಂಡಳಿ ಇದೆ. ಅದರ ಸದಸ್ಯರ ನೇಮಕಾತಿಗಾಗಿ ಪ್ರತೀ ಎರಡು ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಆದರೆ ಈ ಫಾದರ್ ಉಳ್ಳಾಗಡ್ಡಿ ಎಂಬ ಸೈತಾನನಿಗೆ ಚುನಾವಣೆಯೇ ಬೇಡ. ಹೀಗಾಗಿ ಕಳೆದ ಏಳೆಂಟು ವರ್ಷಗಳಿಂದ ಚುನಾವಣೆಯನ್ನೇ ನಡೆಸಿರಲಿಲ್ಲ, ಕೇಳಿದರೆ, 'ಬಿಶಪ್‌ರವರೊಂದಿಗೆ ಮಾತನಾಡಿದ್ದೇನೆ. ಅವರು ಚುನಾವಣೆ ಬೇಡ ಎಂದಿದ್ದಾರೆ' ಎಂದೆಲ್ಲಾ ಬುರುಡೆ ಬೇರೆ ಬಿಡುತ್ತಿದ್ದ.

ಆದರೆ ಕ್ರಿಶ್ಚಿಯನ್ ಸಮುದಾಯದ ಜನ ಇವನ ವಿರುದ್ಧ ಕಿಡಿ ಕಾರುತ್ತಾ ಚುನಾವಣೆ ನಡೆಸಬೇಕು ಎಂದು ಪ್ರತಿಭಟನೆ ದಾರಿ ಹಿಡಿದಿದ್ದರಿಂದ ಮಣಿದ ಬಿಶಪ್ ಕೊನೆಗೂ ಮಾರ್ಚ್ 26, 2006ರಂದು ಚುನಾವಣೆ ನಡೆಸಿದ್ದರು. ಆದರೆ, ಉಳ್ಳಾಗಡ್ಡಿ ಚುನಾವಣೆಯ ಸಂದರ್ಭದಲ್ಲಿ ಪುರುಷರೊಂದಿಗೆ ಮಹಿಳೆಯರು ಸ್ಪರ್ಧಿಸುವುದು ಬೇಡ ಎಂದು ತಕರಾರು ತೆಗೆದಿದ್ದ. ಐದು ಜನ ಪುರುಷರೊಂದಿಗೆ ಒಬ್ಬ ಮಹಿಳಾ ಸದಸ್ಯಳೂ ಇರಬೇಕೆಂಬ ನೀತಿ, ನಿಯಮಗಳಿವೆ. ಅದರಂತೆ, ಇದೇ ಚರ್ಚಿನಲ್ಲಿ ಈ ಹಿಂದೆ ಗುಣವಂತವ್ವ ಬೇಳಿ, ಸುಂದ್ರವ್ವ ಪೀಟರ್, ಸುಂದ್ರವ್ವ ತಟಪಟಿ, ರೂಟಮ್ಮ ಪೀಟರ್, ಸಿಸ್ಟರ್ ಹನ್ನಾ ಉಬರ್ ಮುಂತಾದವರು ಸದಸ್ಯರಾಗಿ ಸೇವೆ ಸಲ್ಲಿಸಿದ ದಾಖಲೆಗಳೇ ಇವೆ. ಆದರೆ ಉಳ್ಳಾಗಡ್ಡಿಗೆ ಈ ನೀತಿ ನಿಯಮಗಳೆಲ್ಲಾ ಬೇಕಾಗಿಲ್ಲ. ಒಂಭತ್ತು ಜನ ಪುರುಷ ಸದಸ್ಯರ ಜೊತೆಗೆ ಒಬ್ಬ ಮಹಿಳಾ ಸದಸ್ಯರಿರುವುದು ನಮ್ಮ ಸಂಪ್ರದಾಯವಲ್ಲ ಎಂದು ಉಪದೇಶ ಬೇರೆ ಮಾಡುತ್ತಾನೆ.

ಒಟ್ಟಿನಲ್ಲಿ ಈಗ ಸೈತಾನ ಪಾದ್ರಿಯ ಪಾಪದ ಕೊಡ ತುಂಬಿದಂತೆ ಕಾಣುತ್ತಿದೆ. ಇವನ ಅವಾಂತರಗಳನ್ನೆಲ್ಲ ಇದುವರೆಗೂ ನೋಡಿ ಸಹಿಸಿದ ಕ್ರಿಶ್ಚಿಯನ್ ಸಮುದಾಯ ಈಗ ತಿರುಗಿ ಬಿದ್ದಿದೆ. ಕ್ರಿಶ್ಚಿಯನ್ನರೆಲ್ಲ ಒಂದಾಗಿ ಉಳ್ಳಾಗಡ್ಡಿಯನ್ನು ಚರ್ಚಿನ ಆವರಣದಿಂದ ಓಡಿಸುವ ದಿನ ದೂರ ಇಲ್ಲ ಅಂತ ಕಾಣುತ್ತೆ.

-ವರದಿಗಾರ

ಇದು ಬೆಂಗಳೂರಿನ ಬಿಜೆಪಿ ಕೂಟದ ರೌಡಿಗಳು, ಬಿಲ್ಡರುಗಳು, ಪುಢಾರಿಗಳು ಮತ್ತು ಪಾಲಿಕೆ ಕೌನ್ಸಿಲರ್‌ಗಳೆಲ್ಲ ತಾವು ದಲಿತರೆಂದೂ ಭೂಹೀನ ನಿರ್ಗತಿಕರೆಂದೂ ನಕಲಿ ದಾಖಲೆ ಸೃಷ್ಟಿಸಿ ಬಗರ್‌ಹುಕುಂ ಸಕ್ರಮದ ಹೆಸರಲ್ಲಿ ನಡೆಸಿದ ರಿಯಲ್ ಎಸ್ಟೇಟ್ ಕೊಳ್ಳೆಯ ಕತೆ. ಬೆಂಗಳೂರಿಗೆ ಹೊಂದಿಕೊಂಡಂತೆ ಉತ್ತರಹಳ್ಳಿ ಕ್ಷೇತ್ರದ ಸರಿಸುಮಾರು 12 ಸಾವಿರ ಕೋಟಿ ಮೌಲ್ಯದ ನಾಲ್ಕೂವರೆ ಸಾವಿರ ಎಕರೆಗಳಷ್ಟು ಭಾರೀ ಗಾತ್ರದ ಈ ಭೂಕಬಳಿಕೆಯ ಬಗ್ಗೆ ಲೋಕಾಯಕ್ತರಾಗಲಿ, ಎ.ಟಿ. ರಾಮಸ್ವಾಮಿ ಕಮಿಟಿಯಾಗಲಿ ತನಿಖೆ ಮಾಡುವುದೇ ಆದಲ್ಲಿ ಆರೋಗ್ಯ ಮಂತ್ರಿ ಆರ್. ಅಶೋಕ್ ಮತ್ತು ಆತನ ಭೂಕಂಟಕ ಕೂಟವನ್ನು ಜೈಲಿಗೆ ಹಾಕಲು ಬೇಕಾದ ಎಲ್ಲಾ ದಾಖಲೆಗಳನ್ನು ಪತ್ರಿಕೆ ಒದಗಿಸುತ್ತದೆ.



ರೌಡಿ, ಕೌನ್ಸಿಲರ್, ಕ್ರಿಮಿನಲ್‌ಗಳಿಗೆ ಬಗರ್‌ಹುಕುಂ ಭೂಮಿ


ಮಂತ್ರಿ ಅಶೋಕನ ಭೂ ಸುಧಾರಣೆ ಸ್ಟೈಲ್

4500 ಎಕರೆ ದರೋಡೆ

■ ರಾ. ಸೋಮನಾಥ್

ಕೋಟ್ಯಾಧಿಪತಿ ಬಿಲ್ಡರ್ ಒಬ್ಬ ಸರ್ಕಾರಿ ದಾಖಲೆಗಳಲ್ಲಿ ಹೇಗೆ ನಿರ್ಗತಿಕ ರೈತನಾಗಬಲ್ಲ? ಇನ್ನೂ ಹುಟ್ಟದೇ ಇರುವ ಶ್ರೀಮಂತ ಕೌನ್ಸಿಲರ್ ಓರ್ವನ ಮಗ ಬಗರ್‌ಹುಕುಂ ಸಾಗುವಳಿದಾರನಾಗುವ ಬಗೆ ಎಂತು? ಬೆಂಗಳೂರಿನ ರೌಡಿಗಳು, ಬಿಲ್ಡರ್‌ಗಳು, ಪಾಲಿಕೆ ಕೌನ್ಸಿಲರ್‌ಗಳು ಮತ್ತು ಬಿಜೆಪಿಯ ಪುಢಾರಿಗಳೆಲ್ಲ ನಿರ್ಗತಿಕ ದಲಿತ ರೈತರೆಂದರೆ ಅದನ್ನು ಸರ್ಕಾರ ನಂಬಬಹುದಾ? ಮತ್ತು ಇಂಥ ಶ್ರೀಮಂತ ಭೂರಹಿತ(!)ರಿಗೆ ಸಾವಿರಾರು ಎಕರೆ ಸರ್ಕಾರಿ ಭೂಮಿ ಮಂಜೂರು ಮಾಡಬಹುದಾ?


ಇದನ್ನು ಪವಾಡವೆನ್ನಿ, ಆರೋಗ್ಯ ಮಂತ್ರಿ ಆರ್. ಅಶೋಕ್ ಸಾಹೇಬರ ಮಹಿಮೆಯೆನ್ನಿ. ಕೋಟ್ಯಾಧಿಪತಿಯಾದ ಬಿಲ್ಡರ್‌ನನ್ನು ನಿರ್ಗತಿಕ ರೈತನನ್ನಾಗಿಸಿ, ಬೆಂಗಳೂರು ಕಾರ್ಪೊರೇಷನ್ನಿನ ಶ್ರೀಮಂತ ಕೌನ್ಸಿಲರ್‌ಗಳಿಗೆ ದಲಿತ ಕೂಲಿಗಳ ಪಟ್ಟಕಟ್ಟಿ; ಬೆಂಗಳೂರಿನ ರೌಡಿಗಳು, ಬಿಜೆಪಿಯ ಪುಂಡರು ಮತ್ತು ತನ್ನ ಪೋಕರಿ ಶಿಷ್ಯರಿಗೆಲ್ಲ ಭೂಹೀನ ಕೃಷಿಕರೆಂದು ಬೋಗಸ್ ದಾಖಲೆ ಸೃಷ್ಟಿಸಿ ಸರಿಸುಮಾರು ನಾಲ್ಕೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಜಮೀನನ್ನು ಆರೋಗ್ಯ ಮಂತ್ರಿ ಅಶೋಕ್ ಕೊಳ್ಳೆ ಹೊಡೆದಿದ್ದಾರೆ!



ವೆಂಕಟಪ್ಪ

ಅದೂ ಬೆಂಗಳೂರಂಚಿನ, ಸದ್ಯ ಗ್ರೇಟರ್ ಬೆಂಗಳೂರಿಗೇ ಸೇರ್ಪಟ್ಟ, ಎಕರೆಯೊಂದಕ್ಕೆ ಲಕ್ಷ-ಕೋಟಿಯ ಮೌಲ್ಯವುಳ್ಳ, ತಾವೇ ಶಾಸಕರಾಗಿರುವ ಉತ್ತರಹಳ್ಳಿ ಕ್ಷೇತ್ರದ ಈ ನಾಲ್ಕೂವರೆ ಸಾವಿರ ಎಕರೆಗಳಷ್ಟು ಭೂಮಿ ಸೇರಬೇಕಿದ್ದದ್ದು ಬಡರೈತರಿಗೆ, ನಿರ್ಗತಿಕ ದಲಿತರಿಗೆ ಮತ್ತು ಭೂಹೀನ ಕೃಷಿ ಕೂಲಿಗಳಿಗೆ!

ಮಂತ್ರಿಯೊಬ್ಬ ಸಹಸ್ರಾರು ದಲಿತರನ್ನು ವಂಚಿಸಿ, ತಾನೇ ಬೋಗಸ್ ದಾಖಲೆಗಳನ್ನು ಸೃಷ್ಟಿಸಿ, ನಗರವಾಸಿ ಶ್ರೀಮಂತ ಪುಂಡರಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮದಡಿಯಲ್ಲಿ ಭೂಗಳ್ಳತನಕ್ಕೆ ಕೈ ಜೋಡಿಸುತ್ತಾನೆಂದರೆ ನೆಲಗಳ್ಳರನ್ನು ಜೈಲಿಗೆ ಹಾಕಲು ಹೊರಟ ದೇವೇಗೌಡರಿಗೆ ಮಂತ್ರಿ ಅಶೋಕ್ ಮನೆಯ ಅಡ್ರೆಸ್ಸು ಕೊಡುವವರ್‍ಯಾರು?




ಎಲ್. ಶ್ರೀನಿವಾಸ್

1997 ರಲ್ಲಿ ಮೊದಲ ಬಾರಿಗೆ ಉತ್ತರಹಳ್ಳಿಗೆ ಶಾಸಕರಾದ ಆರ್. ಅಶೋಕ್ ಈತನಕ ಸೋತಿಲ್ಲ. ನಿನ್ನೆ ಮೊನ್ನೆಯ ತನಕ ಬೆಂಗಳೂರು ದಕ್ಷಿಣ ತಾಲ್ಲೂಕು ಭೂಮಂಜೂರಾತಿ ಸಮಿತಿಗೆ ಅವರೇ ಅಧ್ಯಕ್ಷರಾಗಿದ್ದರು. ಸದ್ಯ ಮಂತ್ರಿಯಾದ ನಿಮಿತ್ತ ... ನೆಚ್ಚಿನ ಬಂಟ ಕಗ್ಗಲಿಪುರದ ಶಿವಕುಮಾರನನ್ನು ಭೂಮಂಜೂರಾತಿ ಕಮಿಟಿಗೆ ಅಧ್ಯಕ್ಷನನ್ನಾಗಿಸಿದ್ದು ... ಬಿಟ್ಟರೆ ಕಳೆದ ಎಂಟು ವರ್ಷಗಳಿಂದ ಆ ಗಾದಿಯನ್ನಾಳುತ್ತಾ ಬಂದವರು ಅಶೋಕ್.

ಭೂಮಂಜೂರಾತಿ ಸಮಿತಿಯ ಅಧ್ಯಕ್ಷಗಿರಿಯೆಂದರೇನೇ ನಿರ್ಗತಿಕರು, ಭೂಹೀನರ... ದಲಿತರನ್ನು ಗುರುತಿಸಿ ಅವರಿಗೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವುದು. ಆಯಾ ಕ್ಷೇತ್ರದ ಎಮ್ಮೆಲ್ಲೆಯೇ ಇಂಥ ಸಮಿತಿಗೆ ಅಧ್ಯಕ್ಷನಾಗಬೇಕೆಂಬುದು ಕಾನೂನು. ಹಾಗಂತ ಕಂಡಕಂಡವರಿಗೆ ಸರ್ಕಾರಿ ಭೂಮಿ ಮಂಜೂರು... ಮಾಡುವಂತಿಲ್ಲ. ಅದಕ್ಕೂ ತನ್ನದೇ ಆದ ಪರತ್ತು... ನಿಯಮಾವಳಿಯಿದೆ. ಸಾಮಾಜಿಕ ನ್ಯಾಯದ ಸಿದ್ಧಾಂತಕ್ಕೆ ಬದ್ಧವಾಗಿ ರೂಪುಗೊಂಡ ಭೂಮಂಜೂರಾತಿ ಕಾಯ್ದೆ 1969 ರ ಪ್ರಕಾರ ಆಯಾ ತಾಲ್ಲೂಕಿನಲ್ಲಿ ಲಭ್ಯವುಳ್ಳ ಸರ್ಕಾರಿ ಭೂಮಿಯಲ್ಲಿ ಶೇ.50 ರಷ್ಟನ್ನು ಕಡ್ಡಾಯವಾಗಿ ದಲಿತರಿಗೆ ಹಂಚಲೇಬೇಕು.

ಇದು ಚಂಡಶಾಸನ.

ಬಗರ್‌ಹುಕುಂ ಸಾಗುವಳಿ ಸಕ್ರಮ ಕಾಯ್ದೆಯಡಿಯಲ್ಲಿ ಭೂಮಂಜೂರು ಮಾಡಬೇಕೆಂದರೆ ಫಲಾನುಭವಿಯಾದ... 1991 ಕ್ಕಿಂತಲೂ ಹಿಂದಿನಿಂದ ಸದ... ಜಮೀನನ್ನು ಉಳುಮೆ ಮಾಡುತ್ತಿರಬೇಕು... ಆತ ಬಡವನಾಗಿರಬೇಕು... ವಾರ್ಷಿಕ ಆದಾ... ಹನ್ನೆರಡು ಸಾವಿರಕ್ಕೂ ಹೆಚ್ಚಿರಕೂಡದು. ಯಾವ ಗ್ರಾಮದ ಸರ್ಕಾರಿ ಭೂಮಿಯನ್ನು ಬಗರ್‌ಹುಕುಂ ಉಳುಮೆ ಮಾಡುತ್ತಿದ್ದಾನೋ ಅದೇ ಊರಿನ ವಾಸಿಯಾಗಿರಬೇಕು. ಆತನಿಗೆ ಮಂಜೂರು ಮಾಡುವ ಸರ್ಕಾರಿ ಭೂಮಿಯೂ ಸೇರಿದಂತೆ ಆತನ ಒಟ್ಟು ಹಿಡುವಳಿ 4.38 ಎಕರೆಗಿಂತ ಹೆಚ್ಚಿರಕೂಡದು. ವಯಸ್ಕನಾಗಿರಬೇಕು. ನಿರ್ಗತಿಕ ರೈತನಾಗಿರಬೇಕು.



ಬಸವರಾಜು

ಹೀಗೆ ಭೂ ಮಂಜೂರಾತಿ ಕಾಯ್ದೆ 19... ಮತ್ತು ಅದರಡಿ ರೂಪುಗೊಂಡ ಬಗರ್‌ಹು... ಸಕ್ರಮ ನಿಯಮಾನುಸಾರ ದಲಿತರು, ಬಡವರಿಗೆ ಭ... ವಿತರಣೆಯಾಗಬೇಕು. ಅದರಲ್ಲೂ ಉತ್ತರಹಳ್ಳಿಯ... ಬೆಂಗಳೂರು ಹೊರವಲಯದ ಹಳ್ಳಿಗಳಿಂದಾವ...

ಇದು ಬಿಜೆಪಿ ಲ್ಯಾಂಡ್ ಮಾಫಿಯಾ!



ತಾನು ಮಂತ್ರಿಯಾದೆನೆಂದು ತಾನಿದ್ದ ಭೂಮಂಜೂರಾತಿ ಸಮಿತಿಯ ಅಧ್ಯಕ್ಷಗಾದಿಗೆ ಅಶೋಕ್ ಎಂಥವನನ್ನು ನೇಮಿಸಿದ್ದಾರೆ ಗೊತ್ತೆ?

ಆತನ ಹೆಸರು ಎ. ಶಿವಕುಮಾರ್ ಉರ್ಫ್ ಕಗ್ಗಲಿಪುರದ ಶಿವಕುಮಾರ. ಹುಟ್ಟಾ ರೌಡಿ ಪಕ್ಕಾ ನೆಲಗಳ್ಳ. ಈ ಹಿಂದೆ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಕೂಲಿಗಾಗಿ ಕಾಳು ಯೋಜನೆಯಲ್ಲಿ ನುಂಗಿ ನೀರು ಕುಡಿದಿದ್ದ. ತಟ್ಟಗುಪ್ಪೆಯ ಅಂತಪ್ಪ, ಕಗ್ಗಲಿಪುರದ ನಜೀರ್‌ಖಾನ್, ಉತ್ತರಿಯ ರೌಡಿ ವೆಂಕಟ, ಗೋಣಿಪುರದ ಪಾತಕಿ ಜೈಶಂಕ್ರ, ಸೂಲಿಕೆರೆಯ ಎಸ್.ಪಿ. ರೇಣುಕಪ್ಪ, ರಾಮೋಹಳ್ಳಿ ವೇಣುಗೋಪಾಲ ಮುಂತಾದ ಬಿಜೆಪಿಯ ರೌಡಿಗಳದ್ದೇ ಹಿಂಡು ಕಟ್ಟಿಕೊಂಡು ಕನಕಪುರ ರಸ್ತೆಯ ನಲವತ್ತೆಕರೆ ಸರ್ಕಾರಿ ಭೂಮಿಗೆ ಕಾಂಪೌಂಡ್ ಹಾಕಿದ್ದ. ಅದನ್ನು ನಕಲಿ ದಾಖಲೆ ಸೃಷ್ಟಿಸಿಯೇ ಮಾರಿಕೊಂಡ.

ಇಂಥ ಖದೀಮನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಅಶೋಕ್ ಭೂಮಂಜೂರಾತಿ ಸಮಿತಿಗೆ ನೇಮಿಸಿದ್ದೇ ತಡ, ಶಿವಕುಮಾರ್ ಮಾಡಿದ ಮೊದ... ಕೆಲಸವೆಂದರೆ, ತನ್ನ ಪತ್ನಿ ಶಶಿಕಲಾ ಎಂಬಾಕೆ... ಕಗ್ಗಲಿಪುರದ ಸರ್ವೆ ನಂಬರ್ 46 ರಲ್ಲಿ ಮೂರೆಕ... ಭೂಮಿ ಮಂಜೂರು ಮಾಡಿದ್ದು!

ಶಿವಕುಮಾರನಿಗೆ ಈಗಾಗಲೇ ಎಂಟೆಕ... ಭೂಮಿಯಿದೆ. ತಿಂಗಳಿಗೆ ಕಮ್ಮಿಯೆಂದರೂ 6... ಸಾವಿರ ರೂಪಾಯಿಯಷ್ಟು ಬಾಡಿಗೆ ಬರುತ್ತ... ಇಷ್ಟಿದ್ದೂ ಎಕರೆಯೊಂದಕ್ಕೆ ಕನಿಷ್ಠ ಒಂದೂವರೆ ಕೋ... ಬೆಲೆ ಬಾಳುವ ಮೂರೆಕರೆಯನ್ನು ನಕಲಿ ದಾಖ... ಸೃಷ್ಟಿಸಿ ತನ್ನದೇ ಹೆಂಡತಿಗೆ ಮಂಜೂ... ಮಾಡುತ್ತಾನೆಂದರೆ ಏನರ್ಥ?

ಇದೇ ನಾಲ್ಕೂವರೆ ಕೋಟಿ ಮೌಲ್ಯ... ಭೂಮಿಯನ್ನು ಅದೇ ಊರಿನ ದಲಿತರಿಗೆ... ಕೊಡಲಿಲ್ಲ?

ಇಂಥವನನ್ನು ಭೂಮಂಜೂರಾತಿ ಸಮಿ... ಅಧ್ಯಕ್ಷನನ್ನಾಗಿ ಮಾಡುವುದಕ್ಕೂ, ಕುರಿ ಕಾಯ... ತೋಳ ಬಿಡುವುದಕ್ಕೂ ಏನು ವ್ಯತ್ಯಾಸ?

ಭೂಗತ ಕ್ರಿಮಿಗಳಿಗೂ ಭೂಮಿ!


ಅರಸಯ್ಯ

ಉತ್ತರಿ ಗ್ರಾಮದ ಸ.ನಂ. 112 ರಲ್ಲಿ ಮಾದೇಶ ಬಿನ್ ಗೋವಿಂದಪ್ಪ ಎಂಬಾತನಿಗೆ ಅಶೋಕ್ ಮೂರೆಕರೆ ಭೂಮಿ ಮಂಜೂರು ಮಾಡಿದ್ದರ ಮರ್ಮವೇ ಬೇರೆ. ಈ ಮಾದೇಶ ಕಲಾಸಿಪಾಳ್ಯದ ಪಾರ್ವತಿಪುರ ಎಂಬ ಏರಿಯಾದ ಮೀಟರ್ ಬಡ್ಡಿ ದೊರೆ. ಚಿಟ್ಟಿ ಸಲೀಮ್ ಕೊಲೆ ಕೇಸಿನಲ್ಲಿದ್ದ ಪುರಾಣಾ ಪಂಟರ್. ತಾನು ಉತ್ತರಿ ಗ್ರಾಮದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿದ್ದೆ, ತಾನು ನಿರ್ಗತಿಕ ಎಂದು ಈತ ಕೊಟ್ಟ ಅರ್ಜಿಯನ್ನೇ ಅಶೋಕ್ ನಂಬುತ್ತಾರೆ. ಮತ್ತು ಜಮೀನು ಮಂಜೂರು ಮಾಡುತ್ತಾರೆ. ಏಕೆಂದರೆ ಈ ಮಾದೇಶ ಸಿಟಿ ಬಿಜೆಪಿ ಉಪಾಧ್ಯಕ್ಷ ಮತ್ತು ಇತ್ತೀಚೆಗಷ್ಟೇ ನಟಿಯರನ್ನು ಕೆಣಕಿ ರಂಪ ಮಾಡಿಕೊಂಡ ಗುಣಾ ಚಿತ್ರದ ಹೀರೋ ಯಶ್ರಾಸ್ವಾಮಿಯ ಖಾಸಾ ಅಣ್ಣ!


ಯಶ್ರ

ಅಲ್ಲಿಗೆ ಅಶೋಕ್ ಹಗಲು ದರೋಡೆಯಲ್ಲಿ ಬೆಂಗಳೂರು ಅಂಡರ್‌ವರ್ಲ್ಡಿಗೂ ಪಾಲು ಸಂದಂತಾಯ್ತು. ಅಶೋಕ್ ಅಂಡರ್ ವರ್ಲ್ಡ್ ಪ್ರೇಮ ಇಷ್ಟಕ್ಕೇ ಮುಗಿಯದೇ ಬನಶಂಕರಿಯ ರೌಡಿ ಜಗ್ಗನಿಗೂ ಇದೇ ಉತ್ತರಿಯ ಸ.ನಂ. 112 ರಲ್ಲಿ ಮತ್ತೆ ಮೂರೆಕರೆ ಮಂಜೂರಾಗಿದೆ. ಬನಶಂಕರಿಯಲ್ಲಿ ಸ್ಕೂಟರ್ ಗ್ಯಾರೇಜ್ ನಡೆಸುವ ಈ ಜಗ್ಗ ಉರ್ಫ್ ಜಗದೀಶ ಅರಸಯ್ಯನ ತಮ್ಮ ಸಿದ್ಲಿಂಗನ ಕೊಲೆ ಆರೋಪಿ!

ದಲಿತರು, ಬಡರೈತರ ಭೂಮಿಯನ್ನು ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ಅಂಡರ್‌ವರ್ಲ್ಡ್‌ನ ಹಂತಕರಿಗೆ ಹಂಚುವುದೇ ಬಿಜೆಪಿಯ ಸಾಮಾಜಿಕ ನ್ಯಾಯವೇ?

ಕ್ಷೇತ್ರವೊಂದರಲ್ಲೇ ಸರಿಸುಮಾರು ಐದೂವರೆ ಲಕ್ಷದಷ್ಟು ನಿರ್ಗತಿಕ, ಭೂಹೀನ ದಲಿತರಿದ್ದಾರೆ. ಬಿಡಿಎ ಮತ್ತು ಕೆಐಎಡಿಬಿಗಳು ಬೆಂಗಳೂರು ಸುತ್ತಮುತ್ತ ಕಿತ್ತುಕೊಂಡ ಭೂಮಿಯಿಂದ ಬೀದಿಗೆ ಬಿದ್ದ ಒಕ್ಕಲಿಗರೂ ಗಣನೀಯ ಪ್ರಮಾಣದಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಜಮೆಗೊಂಡಿದ್ದಾರೆ. ಜೊತೆಗೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ, ಯಶವಂತಪುರ ಮತ್ತು ಕೆಂಗೇರಿ ಹೋಬಳಿಗಳ ಹತ್ತು ಸಾವಿರಕ್ಕು ಅಧಿಕ ಸರ್ಕಾರಿ ಭೂಮಿ ಅಶೋಕ್ ಕ್ಷೇತ್ರವೊಂದರಲ್ಲೇ ಇದೆ.

ಇಂಥ ಭೂಮಿಯನ್ನು ಹಂಚುವುದೇ ಆದಲ್ಲಿ ಅದಕ್ಕೆ ದಲಿತರೇ ಮೊದಲ ಹಕ್ಕುದಾರರಾಗಬೇಕು. ಮಿಕ್ಕಂತೆ ಬೆಂಗಳೂರು ಅಭಿವೃದ್ಧಿಗಾಗಿ ಭೂಮಿ ಕಳಕೊಂಡವರು, ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಭೂಹೀನರಿಗಾದರೂ ದಕ್ಕಬೇಕು. ಇದು ಕಾನೂನು. ಉತ್ತರಹಳ್ಳಿಗೆ ಹಿಂದೆಲ್ಲಾ ಶಾಸಕರಾಗಿದ್ದ ಶ್ರೀನಿವಾಸ್, ಸ್ಲಂ ರಮೇಶ್ ಮುಂತಾದವರೆಲ್ಲಾ ಇದನ್ನೇ ಪಾಲಿಸಿಕೊಂಡು ಬಂದಿದ್ದಾರೆ. ಎಲ್ಲೋ ಒಂದೆರಡು ಅಕ್ರಮಗಳನ್ನು ಬಿಟ್ಟರೆ ಸಾರಾಸಗಟಾಗಿ ರಿಯಲ್ ಎಸ್ಟೇಟ್ ದಂಧೆಗಿಳಿಯಲಿಲ್ಲ, ದುರಂತವೆಂದರೆ ಅಶೋಕ್ ಶಾಸಕರಾಗುವ ಹೊತ್ತಿಗೆ ಉತ್ತರಹಳ್ಳಿ ಕ್ಷೇತ್ರದ ಬನ್ನೇರುಘಟ್ಟ ರಸ್ತೆ, ದಾಸರಹಳ್ಳಿ, ತುಮಕೂರು ರಸ್ತೆ, ಬನಶಂಕರಿ ಸುತ್ತಮುತ್ತಸ ಕನಕಪುರ ರಸ್ತೆ, ಕಲಾಸಿಪಾಳ್ಯ, ಸುಂಕದಕಟ್ಟೆಯಂಥ ಜನಸಾಂದ್ರ ಏರಿಯಾಗಳ ಮಾಗಡಿ ರಸ್ತೆ ಉಲ್ಲಾಳು ಉಪನಗರ, ಕೆಂಗೇರಿ ಸುತ್ತಮುತ್ತಲ ಮೈಸೂರು ರಸ್ತೆಯಂಥ ಏರಿಯಾಗಳಲ್ಲಿ ಭೂಮಿಯ ಬೆಲೆ ಗಗನಕ್ಕೇರಿಬಿಟ್ಟಿತ್ತು, ಎಕರೆಯೊಂದಕ್ಕೆ ಲಕ್ಷ-ಕೋಟಿ ಲೆಕ್ಕದ ಇಂಥ ಸರ್ಕಾರಿ ಭೂಮಿಯನ್ನು ಭೂಹೀನ ದಲಿತರಿಗೋ, ನಿರ್ಗತಿಕ ರೈತನಿಗೋ ಕೊಟ್ಟೇನು ಲಾಭ? ಆದರಲ್ಲೂ ದಲಿತರೆಂದೂ ಬಿಜೆಪಿಯನ್ನು ನಂಬಿದವರಲ್ಲ, ಜೊತೆಗೆ ಸ್ವತಃ ಅಶೋಕ್ ವ್ಯಕ್ತಿ ಮತ್ತು ಪ್ರವೃತ್ತಿಯಲ್ಲಿ ಬೆಂಗಳೂರು ಕಂಡ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್ ಕೂಡ.

ಇಂಥವನು ಗೆದ್ದು ಎಮ್ಮೆಲ್ಲೆಯಾಗಿ ಆತನ ಕೈಗೇ ಭೂ ಮಂಜೂರಾತಿ ಸಮಿತಿಯ ಅಧ್ಯಕ್ಷಗಾದಿ ಸಿಕ್ಕುಬಿಟ್ಟರೆ ಏನು ಗತಿ?

1999 ರಲ್ಲಿ ಎರಡನೇ ಬಾರಿ ಗೆದ್ದು ಅಶೋಕ್ ಮತ್ತೆ ಭೂ ಮಂಜೂರಾತಿ ಸಮಿತಿಗೆ ಅಧ್ಯಕ್ಷರಾಗುತ್ತಿದ್ದಂತೆಯೇ ಬೆಂಗಳೂರು ನಗರದ ಬಿಜೆಪಿ ಬೆಂಬಲಿತ ರೌಡಿಗಳು, ಬಿಲ್ಡರ್‌ಗಳು, ಕೌನ್ಸಿಲರ್‌ಗಳು ಮತ್ತು ಖದೀಮ ನೆಲಗಳ್ಳರಿಗೆಲ್ಲ ಋಣಸಂದಾಯದ ಪ್ಯಾಕೇಜ್ ಒಂದನ್ನು ಸ್ವತಃ ಅಶೋಕ್ ರೂಪಿಸಿಬಿಟ್ಟರು. ಇದರ ಫಲವೇ ಪದ್ಮನಾಭನಗರದ ನೆಲಗಳ್ಳ ಕೌನ್ಸಿಲರ್ ಎಲ್. ಶ್ರೀನಿವಾಸನಿಗೆ ಕೆಂಗೇರಿ ಹೋಬಳಿಯ ಬಿ.ಎಂ. ಕಾವಲು ಸರ್ವೇ ನಂಬರ್ 35 ರಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಎರಡೆಕರೆ ಭೂಮಿಯ ಸರ್ಕಾರಿ ಮಂಜೂರಾತಿ!

ಈ ಹೊತ್ತಿಗಾಗಲೇ ಪದ್ಮನಾಭನಗರದ ಚಿಕ್ಕಲಸಂದ್ರ ಕೆರೆಯನ್ನು ನುಂಗಿ ನೀರು ಕುಡಿದಿದ್ದ ಕೌನ್ಸಿಲರ್ ಎಲ್. ಶ್ರೀನಿವಾಸ್ ಹೇಳಿಕೇಳಿ ಬಿ.ಎಂ. ಕಾವಲು ಗ್ರಾಮದ ನಿವಾಸಿಯಲ್ಲ, ಆ ಜಮೀನಿನ ಬಗರ್‌ಹುಕುಂ ಸಾಗುವಳಿದಾರನೂ ಅಲ್ಲ, ಕೋಟ್ಯಾಧಿಪತಿ ಕೌನ್ಸಿಲರ್ ಓರ್ವನಿಗೆ ನಿರ್ಗತಿಕ ರೈತನೆಂದು ಬೋಗಸ್ ದಾಖಲೆಗಳನ್ನು ಸೃಷ್ಟಿಸಿ ಅಶೋಕ್ ಭೂ ಮಂಜೂರು ಮಾಡಿಬಿಟ್ಟರು. ಇದಾಗಿದ್ದು 2000 ದ ಜನವರಿಯಲ್ಲಿ.

ಇನ್ನು ಬೆಂಗಳೂರಿನ ಮಿಕ್ಕ ಬಿಜೆಪಿ ಕೌನ್ಸಿಲರ್‌ಗಳು ಸುಮ್ಮನಿರುತ್ತಾರಾ? ಶ್ರೀನಿವಾಸನಗರದ ಕೌನ್ಸಿಲರ್ ಡಿ. ವೆಂಕಟೇಶಮೂರ್ತಿ ಬಿನ್ ಎ.ವಿ. ದೇವಪ್ಪ ತಾನೂ ನಿರ್ಗತಿಕ ರೈತನೆಂದು ಮತ್ತೊಂದು ಬೋಗಸ್ ದಾಖಲೆ ಸೃಷ್ಟಿಸಿ, ತನ್ನ ವಾರ್ಷಿಕ ಆದಾಯ ಹನ್ನೆರಡು ಸಾವಿರ ರೂಪಾಯಿಗಿಂತ ಕಮ್ಮಿ ಎಂದು ಇನ್ನೊಂದು ಖೊಟ್ಟಿ ಸರ್ಟಿಫಿಕೇಟ್ ಹುಟ್ಟಿಸಿ ಉತ್ತರಹಳ್ಳಿ ಹೋಬಳಿಯ ಸೋಮನಹಳ್ಳಿ ಸ.ನಂ. 242 ರಲ್ಲಿ ನಾಲ್ಕೆಕರೆ ಸರ್ಕಾರಿ ಭೂಮಿಗೆ ಅರ್ಜಿ ಗುಜರಾಯಿಸಿಬಿಟ್ಟ. ಜೊತೆಗೆ ಬೆಂಗಳೂರಿನ ಅತ್ಯಂತ ಕುಖ್ಯಾತ ನೆಲಗಳ್ಳ ಕಂ ಬಿಲ್ಡರ್ ಮೂಲಕ ಚಂಗಮರಾಜು ಎಂಬಾತ ತನ್ನ ಮಗ ಕೆ. ಗುರವರಾಜನಿಗೂ ಇದೇ ಸರ್ವೇ ನಂಬರಿನಲ್ಲಿ ನಾಲ್ಕೆಕರೆ ಜಮೀನು ಕೊಡಿ ಎಂದು ಇನ್ನೊಂದು ಅರ್ಜಿ ಲಗಾಯಿಸಿದ್ದ!


ಕೌನ್ಸಿಲರ್ ಎಲ್. ಶ್ರೀನಿವಾಸನ ಲ್ಯಾಂಡ್ ಗ್ರ್ಯಾಬಿಂಗ್

ಈ ಚಂಗಮರಾಜು ಹೇಳಿಕೇಳಿ ಅಶೋಕ್‌ನ ಲ್ಯಾಂಡ್ ಗ್ರ್ಯಾಬಿಂಗ್ ದಂಧೆಯ ಪಾರ್ಟನರ್. ತನ್ನ ಮಗನೂ ನಿರ್ಗತಿಕ ಬಗರ್‌ಹುಕುಂ ಸಾಗುವಳಿದಾರನೆಂದು ಆತ ಸಲ್ಲಿಸಿದ ಖೊಟ್ಟಿ ದಾಖಲೆಗಳನ್ನೇ ಅಶೋಕ್ ಅಧಿಕೃತವೆಂದು ಘೋಷಿಸಿದರು. ಕೌನ್ಸಿಲರ್ ವೆಂಕಟೇಶ್‌ಮೂರ್ತಿ ಮತ್ತು ಬಿಲ್ಡರ್ ಚಂಗಮರಾಜುಗೆ ತಲಾ ನಾಲ್ಕೆಕರೆಯಂತೆ ಒಟ್ಟೂ ಎಂಟೆಕರೆ ಮಂಜೂರು ಮಾಡಿಬಿಟ್ಟರು.

ಇಷ್ಟಾದ ಮೇಲೆ ಜೆ.ಪಿ. ನಗರದ ಬಿಜೆಪಿ ಕೌನ್ಸಿಲರ್ ಎಸ್.ಕೆ ನಟರಾಜ್ ಕೇಳಬೇಕಲ್ಲ! ಈತ ಮಹಾ ಪಾಖಂಡಿ. ನೇರವಾಗಿ ತಾನೇ ಕೈಹಾಕದೇ ತನ್ನ ಮಾವ ಕೆ.ವೈ. ನಾರಾಯಣರೆಡ್ಡಿ ಬಿನ್ ಯಲ್ಲಪ್ಪ ರೆಡ್ಡಿಗೆ ಹೆಮ್ಮಿಗೆಪುರದ ಸ.ನಂ. 89 ರಲ್ಲಿ 1.38 ಎಕರೆಯನ್ನೂ, ಅತ್ತೆ ಶಾರದಮ್ಮನ ಹೆಸರಿಗೆ ಅದೇ ಹೆಮ್ಮಿಗೆಪುರದ ಸ.ನಂ. 92 ರಲ್ಲಿ ಮೂರೆಕರೆಯಂತೆ ಒಟ್ಟೂ 4.38 ಎಕರೆ ಸರ್ಕಾರಿ ಭೂಮಿಯನ್ನು ಒಂದೇ ಏಟಿಗೆ ಲಪಟಾಯಿಸಿಬಿಟ್ಟ.


ಇನ್ನು ಪಕ್ಕದ ಗಣೇಶ್ ಮಂದಿರ ವಾರ್ಡಿನ ಮತ್ತೊಬ್ಬ ಬಿಜೆಪಿ ಕೌನ್ಸಿಲರ್ ಬಸವರಾಜು ಇಂಥದೊಂದು ಸುವರ್ಣಾವಕಾಶವನ್ನು ಬಿಡುತ್ತಾನಾ? ತನ್ನ ಪತ್ನಿ ಮಂಜುಳಾ ಹೆಸರಿಗೆ ಕೆಂಗೇರಿ ಹೋಬಳಿಯ ಸರ್ವೆ ನಂಬರ್ 91 ರಲ್ಲಿ ಮೂರೆಕರೆಯನ್ನೂ ಅತ್ತೆ ಲಕ್ಷ್ಮಿ ಬಿನ್ ವೆಂಕಟಪ್ಪಳಿಗೆ ಆದೇ ಸ.ನಂ. ನಲ್ಲಿ ಮತ್ತೆ ಮೂರೆಕರೆಯಂತೆ ಒಟ್ಟು ಆರೆಕರೆಯನ್ನು ಒಟ್ಟೊಟ್ಟಿಗೇ ಮಂಜೂರು ಮಾಡಿಕೊಂಡ. ಈತನಾಗಲಿ, ಈತನ ಪತ್ನಿಯಾಗಲಿ ಜೀವಮಾನದಲ್ಲೆಂದೂ ಹೊಲ ಉತ್ತವರಲ್ಲ, ಆದರಲ್ಲೂ ಕೆಂಗೇರಿ ಹೋಬಳಿಯ ಅಗರದ ಸರ್ಕಾರಿ ಭೂಮಿಯನ್ನು ಕಂಡವರೇ ಅಲ್ಲ, ಕೌನ್ಸಿಲರ್ ಬಸವರಾಜ ತನ್ನ ಪತ್ನಿಯ ಹೆಸರಿಗೆ ಬೋಗಸ್ ಸಾಗುವಳಿ ಚೀಟಿಯೊಂದನ್ನು ಸೃಷ್ಟಿಸಿದ. ತನ್ನ ಅತ್ತೆಯ ಹೆಸರಲ್ಲಿ ನಕಲಿ ರೇಷನ್‌ಕಾರ್ಡ್ ಬೋಗಸ್ ಇನ್‌ಕಂ ಸರ್ಟಿಫಿಕೇಟ್ ಎಲ್ಲವನ್ನೂ ಹುಟ್ಟುಹಾಕಿದ್ದ.

ಹೀಗೆ ಬೆಂಗಳೂರಿನ ಬಿಜೆಪಿಯ ಖದೀಮ ಕೌನ್ಸಿಲರ್‌ಗಳೆಲ್ಲ ತಾವು ಉತ್ತರಹಳ್ಳಿ ಕ್ಷೇತ್ರದ ಭೂಹೀನ ಕೃಷಿಕರೆಂದು ಬೋಗಸ್ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನು ಕಬಳಿಕೆಗೆ ನಿಂತಿದ್ದನ್ನು ಕಂಡು ಆಗಿನ ತಹಶೀಲ್ದಾರ್ ಎನ್.ಎಸ್. ರಾಮೇಗೌಡರು ಇದನ್ನು ಇನ್ನಿಲ್ಲದಂತೆ ಪ್ರತಿಭಟಿಸಿದ್ದಾರೆ. ಯಾವತ್ತು ತನ್ನ ಭೂಕಬಳಿಕೆಗೆ ಸಹಕರಿಸಲಿಲ್ಲವೋ ಅಶೋಕ್ ಬಿಜೆಪಿ ಕಾರ್ಯಕರ್ತರನ್ನೇ ಛೂಬಿಟ್ಟು ತಹಶೀಲ್ದಾರ್ ರಾಮೇಗೌಡರನ್ನು ಘೇರಾವ್ ಮಾಡಿಸಿ 'ಅಮ್ಮಾ ಅಕ್ಕಾ....!' ಎಂದು ವಾಚಾಮಗೋಚರ ಬಯ್ಯಿಸಿದ. ಇಲ್ಲದ ಕಿರುಕುಳ ಕೊಟ್ಟ. ಈ ಮಧ್ಯೆಯೇ ತಹಶೀಲ್ದಾರ್ ರಾಮೇಗೌಡರು ನಿಗೂಢವಾಗಿ ಸತ್ತುಹೋದರು. ಅದನ್ನು ಕೊಲೆಯೆಂದೇ ಅವರ ಮಗ ಮುಖ್ಯಮಂತ್ರಿಗೆ ದೂರು ಕೊಟ್ಟ.

ಹೀಗೆ ಅಶೋಕ್ ಭೂಕಬಳಿಕೆಯನ್ನು ವಿರೋಧಿಸಿದ ತಹಶೀಲ್ದಾರ್ ರಾಮೇಗೌಡರು ನಿಕಾಲಿಯಾದ ಮೇಲೆ ಆ ಜಾಗಕ್ಕೆ ಬಂದ ವೆಂಕಟೇಶಯ್ಯ ಹೇಳಿಕೇಳಿ ಅಶೋಕ್ ನೆಚ್ಚಿನ ಬಂಟ. ಈತನೇ ನಿಂತು ಬೋಗಸ್ ದಾಖಲೆಗಳ ಮೇಲೆ ಬೆಂಗಳೂರಿನ ಬಿಲ್ಡರ್‌ಗಳು ಮತ್ತು ಕೌನ್ಸಿಲರ್‌ಗಳ ಸಂಬಂಧಿಗಳಿಗೆ ಸಾಗುವಳಿ ಚೀಟಿ ವಿತರಿಸಿದ. ಅಲ್ಲಿಗೆ ಅಶೋಕ್ ಮೊದಲ ಸುತ್ತಿನ ಭೂಕಬಳಿಕೆ ಮುಗಿದಂತಾಗಿತ್ತು. ಆನಂತರ ಬಂದ ತಹಶೀಲ್ದಾರ್‌ಗಳಾದ ರಾಮಚಂದ್ರ, ನಾರಾಯಣಸ್ವಾಮಿ, ಗಂಗಾಧರಯ್ಯ ಮತ್ತು ಹಾಲಿ ತಹಶೀಲ್ದಾರ್ ಚಿಕ್ಕಬೆಟ್ಟಯ್ಯ ಇತ್ಯಾದಿಗಳೆಲ್ಲ ಅಶೋಕ್ ಚೇಲಾಗಳೇ. ಈ ಪೈಕಿ ರಾಮಚಂದ್ರ ಸದ್ಯ ಮಂತ್ರಿ ಅಶೋಕ್‌ರ ಆಪ್ತ ಸಹಾಯಕ.

ಇಷ್ಟಾದ ಮೇಲೆ ಬೆಂಗಳೂರು ನಗರದ ಇತರೇ ಬಿಜೆಪಿ ಕ್ರಿಮಿಗಳು ಗಿಟ್ಟಿಸಲೇಬೇಕಲ್ಲ! ಈ ಪೈಕಿ ಮುಂಚೂಣಿಗೆ ನಿಂತವನು ಬನಶಂಕರಿಯ ಬಿಜೆಪಿ

(ಮುಂದಿನ ಪುಟಕ್ಕೆ)



ಪಟ್ಟಣಗೆರೆ ಬಾಲಕೃಷ್ಣನ ಪವಾಡ!

ಉತ್ತರಹಳ್ಳಿ ಬಗರ್‌ಹುಕುಂ ಭೂಕಬಳಿಕೆಯ ಸೂತ್ರಧಾರರ ಪೈಕಿ ಪಟ್ಟಣಗೆರೆ ಸಿಎಂಸಿಯ ಮಾಜಿ ಅಧ್ಯಕ್ಷ ಬಾಲಕೃಷ್ಣನೂ ಒಬ್ಬ. ಹೇಳಿಕೇಳಿ ಎಮ್ಮೆಲ್ಲೇ ಅಶೋಕರ ಬಲಗೈ ಬಂಟ. ಸಾಲದ್ದಕ್ಕೆ ಅಶೋಕ್ ಜೊತೆ ಸೇರಿಕೊಂಡು ನಟ ದಿವಂಗತ ಬಾಲಕೃಷ್ಣರ ಅಭಿಮಾನ್ ಸ್ಟುಡಿಯೋದ ಭೂಮಿಯನ್ನು ಮುಂಡಾಮೋಚಿದ ಭೂಕಂಟಕ!

ಇಂಥವನ ಮಗ ಕಾರ್ತಿಕ್‌ಗೆ ಕೆಂಗೇರಿ ಹೋಬಳಿಯ ಅಗರ ಗ್ರಾಮದ ಸರ್ವೆ ನಂಬರ್ 91 ರಲ್ಲಿ ಅಶೋಕ್ ನಾಲ್ಕೆಕರೆ ದಲಿತರ ಭೂಮಿಯನ್ನು ಮಂಜೂರು ಮಾಡಿದ್ದಾರೆ. ಇದೇ ಬಾಲಕೃಷ್ಣನ ಪತ್ನಿ ಸುಗುಣ ಕೂಡ ಕೌನ್ಸಿಲರ್ ಆಗಿದ್ದಾಕೆ. ಈಕೆಗೆ ಉತ್ತರಹಳ್ಳಿ ಹೋಬಳಿಯ ಸೋಮನಹಳ್ಳಿ ಸ.ನಂ. 113 ರಲ್ಲಿ ಮತ್ತೆ ನಾಲ್ಕೆಕರೆ ಸರ್ಕಾರಿ ಭೂಮಿ ಮಂಜೂರಾಗಿದೆ.

ತಮಾಷೆಯೆಂದರೆ ಮಗ ಕಾರ್ತಿಕ್‌ಗೆ ಮಂಜೂರಾದ ಭೂದಾಖಲೆಗಳಲ್ಲಿ ತಂದೆಯ ಹೆಸರೇ ಇಲ್ಲ, ತಾಯಿ ಸುಗುಣಾರ ಮಗ ಎಂದು ನಮೂದಿಸಲಾಗಿದೆ. ಈತನೀಗ 18 ರ ಹರೆಯ. ಒಂದು ಪಕ್ಷ 1991 ರಲ್ಲಿ ಈತ ಬಗರ್‌ಹುಕುಂ ಸಕ್ರಮಕ್ಕೆಂದು ಅರ್ಜಿ ಸಲ್ಲಿಸಿದ್ದೇ ಆಗಿದ್ದರೆ ಆ ಹೊತ್ತಿಗೆ ಈತ ಎರಡು ವರ್ಷದ ಮಗುವಾಗಿದ್ದ! 1991 ಕ್ಕಿಂತಲೂ ಎಂಟು ವರ್ಷದ ಹಿಂದಿನಿಂದ ಈತ ಬಗರ್‌ಹುಕುಂ ಕೃಷಿಕನಾಗಿದ್ದ ಎಂಬ ಖೊಟ್ಟಿ ದಾಖಲೆಯನ್ನೇ ನಂಬುವದಾದರೆ ಈತ ಹುಟ್ಟುವ ಮೊದಲೇ ಹೇಗೆ ಹೊಲ ಉಳುತ್ತಿದ್ದ? ಹೋಗಲಿ, ತನ್ನ ಬಾಲ್ಯದಿಂದಲೇ ಹೊಲ ಉತ್ತು ಬಿತ್ತು ಮಾಡುತ್ತಿದ್ದ ಎಂದೇ ಇಟ್ಟುಕೊಳ್ಳೋಣ! ಆದ್ಯಾವತ್ತು ಶಾಲೆಗೆ ಹೋದ? ಅದ್ಯಾವತ್ತು ಪಿಯೂಸಿ ಮುಗಿಸಿದ?



ಸುಗುಣ ಬಾಲಕೃಷ್ಣ

ಈತ ಬೆಂಗಳೂರಿನ ಇಂಥದ್ದೇ ಕಾನ್ವೆಂಟಿನಲ್ಲಿ ಓದಿದ್ದಾನೆಂಬ ಬಗ್ಗೆ ದಾಖಲೆಗಳಿವೆ. ಪ್ರತಿನಿತ್ಯ ಕ್ಲಾಸಿಗೆ ಹಾಜರಾತಿಯನ್ನು ಕೊಟ್ಟಿದ್ದಾನೆ. ಒಂದೋ ಈತ ಹುಟ್ಟುವ ಮೊದಲೇ, ಅಂದರೆ ತನ್ನ ಪೂರ್ವಜನ್ಮದಲ್ಲಿ ಅಗರದ ಸರ್ಕಾರಿ ಭೂಮಿಯನ್ನು ಉತ್ತಿರಬೇಕು. ಅಥವಾ ಈತ ಓದಿದ ಕಾನ್ವೆಂಟಿನವರು ನಕಲಿ ಮಾರ್ಕ್ಸ್‌ಕಾರ್ಡ್ ಕೊಟ್ಟಿರಬೇಕು. ಈ ಎರಡೂ ಒಟ್ಟೊಟ್ಟಿಗೆ ಸಂಭವಿಸಿದ್ದೇ ಆದರೆ ಕಾರ್ತಿಕ್ ಒಂದೇ ಕಾಲಕ್ಕೆ ಹತ್ತಾರು ಕಡೆ ಮಹಿಮೆ ತೋರುವ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನಂತೆ ಮಾಯಾವಿಯಾಗಿರಬೇಕು!

ಇದು ಅಶೋಕ್ ಪಟಾಲಮ್ಮಿನ ಭೂಕಬಳಿಕೆಯ ವಿರೋಧಾಭಾಸ. ಹಾಗೇ ಬಾಲಕೃಷ್ಣನ ಪತ್ನಿ ಸುಗುಣ ಸೋಮನಹಳ್ಳಿಯಲ್ಲಿ ಸರ್ಕಾರಿ ಭೂಮಿಯನ್ನು ಉಳುಮೆ ಮಾಡಿಕೊಂಡಿದ್ದಕ್ಕೂ ಇಂಥದ್ದೇ ಪವಾಡ ಸದೃಶ ಪುರಾವೆ ಕಲ್ಪಿಸಲಾಗಿದೆ. ಯಾವ ಥರದ ತನಿಖೆಯಾದರೂ ಬಾಲಕೃಷ್ಣ, ಆತನ ಪತ್ನಿ ಸುಗುಣ, ಮಗ ಕಾರ್ತಿಕ್ ಜೊತೆ ಮಂಜೂರು ಮಾಡಿದ ಮಂತ್ರಿ ಅಶೋಕ್ ಕೂಡ ಜೈಲಿಗೆ ಹೋಗಬೇಕಾಗುತ್ತದೆ.

ಆದರೆ ತನಿಖೆ ಮಾಡುವವರ್‍ಯಾರು? ಅದಕ್ಕೇನು ಹೋರಾಡುವವರ್‍ಯಾರು?


ಎ.ಟಿ. ರಾಮಸ್ವಾಮಿ ಹಾಗೂ ಲೋಕಾಯುಕ್ತರಲ್ಲಿ ನಮ್ಮ ಮನವಿ




ಬಹುಶಃ ಕರ್ನಾಟಕದಲ್ಲಿ ಪತ್ತೆಯಾಗುತ್ತಿರುವ ಅತಿದೊಡ್ಡ ಸರ್ಕಾರಿ ಭೂಕಬಳಿಕೆ ಪ್ರಕರಣ ಇದಾಗಿದೆ. ಬಡವರು, ಭೂರಹಿತರಿಗೆ ಮಂಜೂರಾಗಬೇಕಿದ್ದ ಈ ದಿನ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಜಮೀನುಗಳನ್ನು ರೌಡಿ ಶೀಟರುಗಳು, ಕೌನ್ಸಿಲರ್‌ಗಳು ಪತ್ನಿ-ಮಕ್ಕಳು ಹಾಗೂ ಅನೇಕ ಕ್ರಿಮಿನಲ್‌ಗಳ ಹೆಸರಿನಲ್ಲಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

ಈ ಕಾನೂನುಬಾಹಿರ ಭೂ ಮಂಜೂರಾತಿಗೆ ಸಂಬಂಧಿಸಿದ ಕೆಲವು ದಾಖಲೆ 'ಲಂಕೇಶ್' ಬಳಿ ಇವೆ.

ಮಾನ್ಯ ಲೋಕಾಯುಕ್ತ ಉಪಲೋಕಾಯುಕ್ತರಲ್ಲಿ ಮತ್ತು ಜೆ.ಟಿ. ರಾಮಸ್ವಾಮಿಯವರ ಸದನ ಸಮಿತಿಗೆ ನಮ್ಮ ಮನವಿ ಏನೆಂದರೆ ದಯವಿಟ್ಟು ಈ ಭೂಕಬಳಿಕೆ ಬಗ್ಗೆ ತನಿಖೆ ನಡೆಯಲಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಅದಕ್ಕೆ ಸಹಕರಿಸಲು 'ಲಂಕೇಶ್' ಸಿದ್ಧವಿದೆ.



ಗಣೇಶ್ ಮಂದಿರ ವಾರ್ಡ್ ಕೌನ್ಸಿಲರ್ ಬಸವರಾಜನ ಪತ್ನಿ ಮಂಜುಳಾ ಹೆಸರಿನ ಪಹಣಿ




ಪಟ್ಟಣಗೆರೆ ಬಾಲಕೃಷ್ಣನ ಮಗ ಕಾರ್ತಿಕ್ ಹೆಸರಿನ ಪಹಣಿ

(ಹಿಂದಿನ ಪುಟದಿಂದ)

ಲೀಡರ್ ನಾಗರಸಯ್ಯ, ಈತ ಉತ್ತರಿ ಗ್ರಾಮದ ಸ.ನಂ. 112 ರಲ್ಲಿ ಎರಡೆಕರೆ ಕಬಳಿಸಿದ. ಚುಂಚಘಟ್ಟದ ಮತ್ತೊಬ್ಬ ಬಿಜೆಪಿ ಲೀಡರ್ ಜೈರಾಮನಿಗೆ ಚನ್ನಕುರಸೆಯಲ್ಲಿ ಮೂರೆಕರೆ, ಆತನ ಅಣ್ಣ ಗೋವಿಂದರಾಜು ಎಂಬಾತನಿಗೆ ಅಲ್ಲೇ 2.6 ಎಕರೆ ದಲಿತರ ಪಾಲಿನ ಭೂಮಿಯನ್ನು ಅಶೋಕ್ ಮಂಜೂರು ಮಾಡಿದ್ದಾರೆ. ಬಿ.ಎಂ. ಕಾವಲು ಸರ್ವೆ ನಂಬರ್ 35 ರಲ್ಲಿ ತಾನು ನಿರ್ಗತಿಕ ಕೃಷಿಕೂಲಿಯೆಂದು 3.36 ಎಕರೆ ಜಮೀನು ಕೊಳ್ಳೆ ಹೊಡೆದ ದೊಡ್ಡಕಲ್ಲಸಂದ್ರದ ಮತ್ತೊಬ್ಬ ಬಿಜೆಪಿ ನಾಯಕ ಮೂಡಲಗಿರಿಗೌಡ ಹೇಳಿಕೇಳಿ ಮೈಕೋ ಉದ್ಯೋಗಿ. ತನ್ನ ಮಗ ದಯಾನಂದನ ಹೆಸರಿಗೂ ಮತ್ತೆ 36 ಗುಂಟೆ ಮಂಜೂರು ಮಾಡಿಸಿಕೊಂಡ ಮೂಡಲಗಿರಿಗೌಡ ಅದ್ಯಾವತ್ತು ಆ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದ?

ಈ ಹಿಂದೆ ಚನ್ನಕುರಸೆಯಲ್ಲಿ ಜಮೀನು ಹೊಡೆದ ಬಿಜೆಪಿ ಧೂರ್ತ ಜೈರಾಮ ಎರಡನೇ ಬಾರಿ ಬಿ.ಎಂ. ಕಾವಲು ಸರ್ಕಾರಿ ಭೂಮಿಗೆ ಬೋಗಸ್ ದಾಖಲೆ ಸೃಷ್ಟಿಸಿ ಮತ್ತೆ ಎರಡೆಕರೆ ಭೂಮಿ ದೋಚುತ್ತಾನೆ. ಕೋರಮಂಗಲದ ಇನ್ನೊಬ್ಬ ಬಿಜೆಪಿ ಪುಢಾರಿ ಕೆಂಪಯ್ಯನ ಪತ್ನಿ ವಿಜಯಲಕ್ಷ್ಮಿಗೆ ಅಗರ ಸ.ನಂ. 28 ರಲ್ಲಿ ಎರಡೆಕರೆ, ಈಕೆಯ ಮಗ ಜಿ. ಪ್ರವೀಣ್ ಹೆಸರಿಗೆ ಮತ್ತೆ 1.27 ಎಕರೆ, ಅಗರದ ಹಾಲಿನ ಡೈರಿ ಸೆಕ್ರೆಟರಿ ಮತ್ತು ಲೋಕಲ್ ಬಿಜೆಪಿ ಪುಡಾರಿ ಎಂ. ಗಂಗರಾಜುಗೆ, 4.38 ಎಕರೆ, ಅಗರದ ಮಗದೊಬ್ಬ ಬಿಜೆಪಿ ಧೂರ್ತ ಶಂಕರನಾರಾಯಣ ಮತ್ತು ಆತನ ಅಣ್ಣ ರಂಗರಾಜು ಎಂಬಾತನಿಗೆ 4.38 ಎಕರೆ, ಕಗ್ಗಲಿಪುರದ ಬಿಜೆಪಿ ಮುಖಂಡ ವೆಂಕಟಪ್ಪ ಬಿನ್ ಚನ್ನಪ್ಪನಿಗೆ ಎರಡೂವರೆ ಎಕರೆ, ಸೂಲಿಕೆರೆಯ



ಶಿವಕುಮಾರ್

ಬಿಜೆಪಿ ಪಂಚಾಯ್ತಿ ಮೆಂಬರ್ ರೇಣುಕಪ್ಪನಿಗೆ ಎರಡೆಕರೆ, ಆತನ ಹೆಂಡ್ತಿಯ ಹೆಸರಿಗೆ ಮೂರೆಕರೆ, ಸಿಟಿ ಬಿಜೆಪಿ ನಾಯಕಿ ಸ್ವರ್ಣಲತಾ ಮಂಜುನಾಥ್ ಎಂಬಾಕೆಗೆ ಮೂರೆಕರೆ- ಹೀಗೆ ಅಶೋಕ್ ಚೇಲಾಗಳು, ಬಂಟರೆಲ್ಲ ಬಗರ್‌ಹುಕುಂ ಹೆಸರಲ್ಲಿ ಎಕರೆ ಗಳ ಮೇಲೆ ಎಕರೆ ಸರ್ಕಾರಿ ಭೂಮಿ ದೋಚಿದ್ದಾರೆ.

ವಿಚಿತ್ರವೆಂದರೆ ತಾವು ಆ ಕಾಲದಿಂದಲೂ ಉಳುಮೆ ಮಾಡಿಕೊಂಡಿದ್ದ ಜಮೀನಿಗೆ ಸಾಗುವಳಿ ಚೀಟಿ ಕೊಡಿ ಎಂದು ಇದೇ ಉತ್ತರಹಳ್ಳಿಯ ಮೂರು ಸಾವಿರಕ್ಕೂ ಅಧಿಕ ದಲಿತರು ಇವತ್ತಿಗೂ ತಾಲ್ಲೂಕು ಕಚೇರಿಗೆ ಅಲೆಯುತ್ತಲೇ ಇದ್ದಾರೆ. ಅಸಲೀ ಹಕ್ಕುದಾರರಾದ ಅವರ್‍ಯಾರಿಗೂ ಅಶೋಕ್ ಜಮೀನು ಮಂಜೂರು ಮಾಡಿಲ್ಲ; ಈ ಬಗ್ಗೆ ದಲಿತ ಸಂಘಟನೆಗಳಾದ ದಸಂಸ,


ಬಿಡಿ ಚಿತ್ರಗಳು

● ಪಾರ್ವತೀಶ ●

ಸೀತಾರಾಂ ಕಣಗಾಲ್ ಥರ ಎಂಬ ಆರೋಪ

ಟಿ.ಎನ್. ಸೀತಾರಾಂರ ಕ್ರಿಯೇಟಿವಿಟಿ, ಚಟಪಟಿಗಳು ಅರ್ಥವಾಗಿರುವವರೆಲ್ಲಾ 'ಅಪ್ರತಿಭ'ರಾಗುವಂಥ ಸುದ್ದಿ ಇತ್ತೀಚೆಗೆ ಕೇಳಿಬರುತ್ತಿದೆ.

ಅದು ಪುಟ್ಟಣ್ಣ ಕಣಗಾಲ್‌ರಷ್ಟೇ ಸೀತಾರಾಂ ಕೂಡ 'ಪ್ರತಿಭಾ'ವಂತ ಎಂಬ ಲೇಬಲ್ ಹಚ್ಚುವ ಪ್ರಯತ್ನ. ಇದು ಸೀತಾರಾಂರಿಗೆ ಮಾಡುತ್ತಿರುವ ಅವಮಾನವಲ್ಲದೇ ಬೇರೇನೂ ಅಲ್ಲ. ಶರಪಂಜರ, ನಾಗರಹಾವು, ಮಸಣದ ಹೂವು, ಶುಭಮಂಗಳದಂತ ಪ್ರತಿಗಾಮಿ ಮೌಲ್ಯಗಳ ಸಿನಿಮಾ ಮಾಡಿದ ಪುಟ್ಟಣ್ಣ ಸಿನಿಮಾಗಳಲ್ಲಿದ್ದ **rationale** ಏನು ಅಂತ ಇದುವರೆಗೂ ಯಾರು ಪ್ರಶ್ನಿಸಿಲ್ಲ. ಇದೇ ಪುಟ್ಟಣ್ಣ 'ಧರಣಿ ಮಂಡಲ ಮಧ್ಯದೊಳಗೆ'



ಎಂಬ ಹಾಸ್ಯಾಸ್ಪದ ಚಿತ್ರವನ್ನು ಮಾಡಿದ್ದರು. ಅಷ್ಟೇ ಅಲ್ಲ 'ನಾನು **leftist**, ನನ್ನಂಥಾ ಎಡಪಂಥೀಯ ಯಾರೂ ಇಲ್ಲ' ಎಂದೂ ಕೊಚ್ಚಿಕೊಂಡಿದ್ದರು. ಹಾಗೆ ನೋಡಿದರೆ ಪಂತುಲು, ಎನ್. ಲಕ್ಷ್ಮೀನಾರಾಯಣ, ಸಿದ್ದಲಿಂಗಯ್ಯನವರಿಗೆ ಹೋಲಿಸಿದರೆ ಪುಟ್ಟಣ್ಣ ಮಿಡಿಯೋಕರ್ ಅಷ್ಟೆ. ಪುಟ್ಟಣ್ಣರಿಗೆ ಸಿನಿಮಾ ವ್ಯಸನವಿತ್ತೇ ವಿನಃ ಮೌಲ್ಯ ಇರಲಿಲ್ಲ. ಅಂತಾ ಪುಟ್ಟಣ್ಣನನ್ನು ಸ್ಟಾರ್ ನಿರ್ದೇಶಕರೆಂಬಂತೆ ಬಿಂಬಿಸಿದ್ದು ಅವರ ಸ್ವಜಾತಿ ಪತ್ರಕರ್ತರೆ. ಈಗ ಅದೇ ಪರಂಪರೆಯ ಜನ ಟಿ.ಎನ್ ಸೀತಾರಾಂರನ್ನು ಆಧುನಿಕ ಪುಟ್ಟಣ್ಣ ಎಂದು ರೈಲು ಹತ್ತಿಸುತ್ತಿದ್ದಾರೆ. 'ನಮ್ಮೊಳಗೊಬ್ಬ ನಾಜೂಕಯ್ಯ'ದಂತ ಬಂಡವಾಳಶಾಹಿ ವಂಚನೆಯನ್ನು ಬಿಂಬಿಸುವ ನಾಟಕ ಬರೆದು 'ಮನ್ವಂತರ'ದಂತ ಪಾಪುಲರ್ ಸೀರಿಯಲ್ ಮಾಡಿ, ನಕ್ಸಲ್ ಸಿಂಪಥೈಸರ್ ರೀತಿ 'ಮುಕ್ತಾ' ನಿರ್ಮಿಸಿದ ಸೀತಾರಾಂ ಧೋರಣೆಯಲ್ಲಿ ರ್‍ಯಾಡಿಕಲಿಸಂ ಇದೆ. ಅಂತಾ ಸೀತಾರಾಂರನ್ನು ಪುರಾತನ ಕಾಲದ, ಹಳಸಲು ಮೌಲ್ಯಗಳ ಪುಟ್ಟಣ್ಣನ ಜೊತೆ ಹೋಲಿಸುವುದು ಯಾವ ನ್ಯಾಯ?

ಇಷ್ಟಕ್ಕೂ ಪುಟ್ಟಣ್ಣ ಆಗ ಭಾರಿ ಫೇಮಸ್ ಆಗಿದ್ದು ನಿಜಕ್ಕೂ ಶ್ರೇಷ್ಠ ನಿರ್ದೇಶಕನ ಕ್ವಾಲಿಟಿ ಹೊಂದಿದ್ದರೆಂಬುದಕ್ಕಲ್ಲ, ಬದಲಾಗಿ ಆಗ ಹೆಚ್ಚು ಜನ ಶ್ರೇಷ್ಠರಿರಲಿಲ್ಲ ಮತ್ತು ಇದ್ದವರನ್ನು ಯಾರೂ ಪರಿಗಣಿಸಿರಲಿಲ್ಲ ಅಷ್ಟೇ.

ಆನು ದೇವ... ಜಿಕೆಜಿ ಸಂಶೋಧನೆ

ಇತ್ತೀಚೆಗೆ ನಾಲ್ಕಾರು ಮಂದಿ ಬುದ್ಧಿಜೀವಿ-ಬರಹಗಾರರು ಒಂದೆಡೆ ಸೇರಿದ್ದಾಗ ನಮ್ಮ ಕಿವಿಗೆ ಬಿದ್ದ ಒಂದು ಸಂಭಾಷಣೆಯನ್ನು ಯಥಾವತ್ತಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಇಂಧೂದರ ಹೊನ್ನಾಪುರ (ಸಂವಾದ ಪತ್ರಿಕೆ ಸಂಪಾದಕರು): ಕೆಲವು ಜಾತಿವಾದಿ ದುಷ್ಟ ಶಕ್ತಿಗಳು ಆನುದೇವಾ ವಿರುದ್ಧ ಗಲಾಟೆ ಮಾಡುತ್ತಿದ್ದಾರೆ. ನಾವೆಲ್ಲಾ ಇದರ ವಿರುದ್ಧ ದನಿ ಎತ್ತಬೇಕು.

ಜಿ.ಕೆ. ಗೋವಿಂದರಾವ್ (ಫುಲ್‌ಟೈಂ ಟಿವಿ ನಟ, ಪಾರ್ಟ್‌ಟೈಂ ಬುದ್ಧಿಜೀವಿ): ರ್‍ರೀ... ಅದಿರಲಿ, ಇದರ ಹಿಂದೆ ಒಂದು ರಾಜಕೀಯ ತಂತ್ರಾನೂ ಇದೆಯಂತೆ....?

ಇಂಧೂದರ: ಏನ್ ಸಾರ್ ಅದೂ.....!?

ಜಿಕೆಜಿ: ಈ ಪುಸ್ತಕದ ಹಿಂದೆ ದೇವೇಗೌಡ ಇದಾರೆಂತ ಸುದ್ದಿ ಇದೆ.



ಇಂಧೂದರ: (ಆಶ್ಚರ್ಯದಿಂದ) ಇದೇನ್ ಸಾರ್ ಹೀಗೇಳ್ತಾ ಇದ್ದೀರಾ, ಯಾರ್ ಹೇಳಿದ್ದು?

ಜಿಕೆಜಿ: ರ್‍ರೀ... ಬಂಜಗೆರೆಗೆ ದೇವೇಗೌಡ್ರ ದುಡ್ಡು ಕೊಟ್ಟು ಸಂಶೋಧನೆ ಮಾಡಿಸಿ ಆಮೇಲೆ ಪುಸ್ತಕ ಪ್ರಿಂಟ್ ಮಾಡಿಸಲು ದುಡ್ಡು ಕೊಟ್ಟಿದ್ದಾರಂತೆ.

ಇಂಧೂದರ: (ದಿಗ್ಭ್ರಮೆಯಾಗಿ) ಯಾಕಂತೆ!

ಜಿಕೆಜಿ: ಜಾತಿಜಗಳ ತಂದಿಡೋಕೆ ಕಣ್ರಿ, ಅದಕ್ಕೆ ನಾನು ಈ ಪುಸ್ತಕಾನ ಸಮರ್ಥಿಸಲ್ಲ. ನೀವು ಧರಣಿ ಮಾಡೋದಾದ್ರೆ ಬರೀ ಅಭಿವ್ಯಕ್ತಿ ಸ್ವಾತಂತ್ರ್ಯ ಅಂತಾ ಬೇಕಿದ್ರೆ ಒಂದೆರಡು ನಿಮಿಷ ಬಂದು ಹೋಗ್ತೀನಿ ಆಯ್ತಾ?

ಇಂಧೂದರ: (ಸಹನೆ ತಂದುಕೊಂಡು) ಸಾರ್ ನಿಮಗೆ ಒಂದು ಪ್ರಶ್ನೆ ಕೇಳ್ತೀನಿ. ಆನುದೇವಾದ ಪ್ರಕಾಶಕರು ಯಾರೂಂತ ನಿಮಗೆ ಗೊತ್ತಾ?

ಜಿಕೆಜಿ: (ತಬ್ಬಿಬ್ಬಾಗಿ) ಇಲ್ಲ. ಗೊತ್ತಿಲ್ಲ. ನಾನದನ್ನು ನೋಡೋಕೂ ಹೋಗಿಲ್ಲ.


ಇಂಧೂದರ: (ತಣ್ಣಗೆ) ನಾನೇ ಸಾರ್.

ಜಿಕೆಜಿ: ....!!!

-ಬುದ್ಧಿಜೀವಿಗಳೆನಿಸಿಕೊಂಡವರಲ್ಲೂ ಯಾವ್ಯಾವ ರೀತಿ ವಕ್ರಬುದ್ಧಿ ಇರುತ್ತೆ ನೋಡಿ.

ಕಲಾಂಗೆ ಬ್ರಿಟಿಷ್ ದೊರೆಯ ಗುಲಾಮ ಪದಕ

ಭಾರತೀಯರಿಗೆ ಇಂಗ್ಲಿಷರು ಕೊಡುವ ನೈಟ್‌ಹುಡ್, ಸರ್, ರಾವ್ ಬಹಾದ್ದೂರ್, ದಿವಾನ್ ಮುಂತಾದ ಗೌರವ ಪದವಿಗಳ ಬಗ್ಗೆ ವಸಾಹತಶಾಹಿ ಆಳ್ವಿಕೆ ಕಾಲದಿಂದಲೂ ವ್ಯಾಮೋಹ ಇತ್ತು. ಈಗಿನ ಹೊಸ ಸುದ್ದಿಯ ಪ್ರಕಾರ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿರುವ ನಮ್ಮ ಕಲಾಂಗೆ 'ದೊರೆ 2 ನೇ ಚಾರ್ಲ್ಸ್ ಪ್ರಶಸ್ತಿ' ನೀಡುತ್ತಾರಂತೆ. ಕಲಾಂ 'ಆಯ್ತು ಕೊಡಿ' ಅಂತಲೂ ಹೇಳಿ ಈ ಬಿರುದು ಈಸಿಕೊಂಡು ಬರಲು ಇಂಗ್ಲೆಂಡಿಗೆ ಹೋಗುತ್ತಿದ್ದಾರೆ. ಭಾರತದಂತಾ ದೊಡ್ಡ ಸೆಕ್ಯುಲರ್ ಡೆಮಾಕ್ರೆಟಿಕ್ ಗಣರಾಜ್ಯದ ಅಧ್ಯಕ್ಷನಾಗಿದ್ದವರು ತನ್ನ ಸ್ಥಾನದ ಘನತೆ ಅರಿಯದೆ, ಸ್ವಾಭಿಮಾನ ಬಿಟ್ಟು ಇಂತಾ ಚಿಲ್ಲರೆ ಪ್ರಶಸ್ತಿಗಳಿಗೂ ಕ್ಯೂ ನಿಲ್ಲುವುದು ಎಂತಾ ಅಸಹ್ಯ ಅಲ್ಲವಾ? ಈ ಕಲಾಂ ಎಂಥ ಅಸಂಬದ್ಧ ವ್ಯಕ್ತಿಯೆಂದರೆ ಗುಜರಾತಿನಲ್ಲಿ ಬಿಜೆಪಿಗಳು ಮುಸ್ಲಿಮರ ನರಮೇಧ ಮಾಡಿದ ನಂತರ ಪ್ರೊ. ಬಂದೂಕುವಾಲ ಎಂಬುವರು ಮೈನಾರಿಟಿ ಶಿಕ್ಷಣ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಿದರೆ ಕಲಾಂ 'ಈಗ ಬರಲಾರೆ' ಎಂದಿದ್ದರು. ಆದರೆ ಅದೇ ಸಮಯದಲ್ಲಿ ಹಿಂದೂ ಸಂಘಟನೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅದೇ ಗುಜರಾತಿಗೆ ಹೋಗಿದ್ದರು. ಇದು ದೇಶದ ಜನತೆಗೆ ಯಾವ ಸಂದೇಶ ನೀಡಬಹುದೆಂಬುದನ್ನು ಕಲಾಂ ಗಣನೆಗೇ ತೆಗೆದುಕೊಂಡಿರಲಿಲ್ಲ. ಅಂತಾ ಕಲಾಂ ನಾಳೆ ಇಂಗ್ಲೆಂಡಿನ ರಾಜನ ಆಸ್ಥಾನಕ್ಕೆ ಹೋಗಿ ಭಟ್ಟಂಗಿ ಪ್ರಶಸ್ತಿ ಎತ್ತಿಕೊಂಡು ಬಂದರೆ ಏನಾಶ್ಚರ್ಯ!



ಇಷ್ಟಕ್ಕೂ ಕಲಾಂರನ್ನು **People's President** ಎಂದೇ ಹಲವು ತಲೆಕೆಟ್ಟ ಪತ್ರಿಕೆಗಳು ಮತ್ತು ಚಾನೆಲ್‌ಗಳು ಬಿಂಬಿಸಿಕೊಂಡು ಬಂದಿದ್ದವು. ಅದೇ ಅಸಲಿ ತಮಾಷೆ. ಇಡೀ ದೇಶಕ್ಕೆ ಇನ್ನೂ ತಲೆಕೆಟ್ಟಿಲ್ಲದಿರುವುದು ನಮ್ಮ ಪುಣ್ಯ!

ಸಮತಾ ಸೈನಿಕ ದಳ, ಬಹುಜನ ಸಮಾಜ ಪಕ್ಷ, ಜನಾಂದೋಲನ ಸಂಘಟನೆಗಳು ಬಗರ್‌ಹುಕುಂ ಸಕ್ರಮಗೊಳಿಸಿ ಎಂದು ಜಿಲ್ಲಾಧಿಕಾರಿಗಳ ಕಚೇರಿಯೆದುರು ಅದೆಷ್ಟು ಪ್ರತಿಭಟನೆಗಳನ್ನು ನಡೆಸಿಲ್ಲ? ಓರ್ವ ಶಾಸಕನಾಗಿ ಅಶೋಕ್‌ಗೆ ಇವರ್‍ಯಾರೂ ಏಕೆ ಕಾಣಿಸುತ್ತಿಲ್ಲ? ಅಸಲೀ ಹಕ್ಕುದಾರರಾದ ದಲಿತರಿಗಿಲ್ಲದ ಸರ್ಕಾರಿ ಭೂಮಿ ಬೆಂಗಳೂರಿನ ಬಿಲ್ಡರುಗಳು, ಕೌನ್ಸಿಲರುಗಳಿಗೆ ಮತ್ತು ಬಿಜೆಪಿ ಪುಢಾರಿಗಳಿಗೆ ಹೇಗೆ ಸಕ್ರಮವಾಗಿ ಬದುತ್ತದೆ?

ಹೀಗೆ ಬೆಂಗಳೂರಿನ ನಿವಾಸಿಯಾದವನಿಗೆ, ಕುಬೇರನಿಗೆ, ಶ್ರೀಮಂತ ಬಿಲ್ಡರ್‌ಗಳಿಗೆ, ರೌಡಿಗಳಿಗೆಲ್ಲ ಉತ್ತರಹಳ್ಳಿ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕಿನ ಸರಿಸುಮಾರು ನಾಲ್ಕೂವರೆ ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಅಶೋಕ್ ಮಂಜೂರು ಮಾಡಿದ್ದಾರೆ. ಈ ಪೈಕಿ ಬಹುತೇಕರು ಕೊಟ್ಟ ದಾಖಲೆಗಳೆಲ್ಲ ಬೋಗಸ್. ಕೆಲವರು ಬೋಗಸ್ ಇನ್‌ಕಂ ಸರ್ಟಿಫಿಕೇಟ್, ಇನ್ನೂ ಕೆಲವರು ನಕಲಿ ಸಾಗುವಳಿ ಚೀಟಿ ಮತ್ತೆ ಕೆಲವರು ಸುಳ್ಳು ರೇಷನ್‌ಕಾರ್ಡು, ಇನ್ನೂ ಕೆಲವರು ಖೊಟ್ಟಿ ಪ್ರಮಾಣ ಪತ್ರಗಳನ್ನು ಲಗತ್ತಿಸಿದ್ದಾರೆ. ತಮಾಷೆಯೆಂದರೆ ಕೌನ್ಸಿಲರ್‌ಗಳ ಪತ್ನಿ, ಅತ್ತೆ, ಇತ್ಯಾದಿ ಸಂಬಂಧಿಕರ್‍ಯಾರೂ ಯಾವುದೇ ದಾಖಲೆಗಳನ್ನು ಕೊಡದೆಯೇ ಜಮೀನುಗಿಟ್ಟಿಸಿದ್ದಾರೆ.

1999 ರಿಂದ 2006 ರ ತನಕ ನಡೆದ ಬೆಂಗಳೂರು ದಕ್ಷಿಣ ತಾಲ್ಲೂಕು ಭೂಮಂಜೂರಾತಿ ಸಮಿತಿಯ ಸರ್ಕಾರಿ ಭೂಮಿ ಹಂಚಿಕೆಯ ಇಡೀ ಕರ್ಮಕಾಂಡದ ಬಗ್ಗೆ ತನಿಖೆಯಾಗಲೇ ಬೇಕು. ಎ.ಟಿ. ರಾಮಸ್ವಾಮಿಯವರ ಸದನ ಸಮಿತಿಯಲ್ಲದಿದ್ದರೆ ಕನಿಷ್ಠ ಪ್ರತ್ಯೇಕ ನ್ಯಾಯಾಂಗ ತನಿಖೆಗಾದರೂ ದಲಿತ ಸಂಘಟನೆಗಳು ಒತ್ತಾಯಿಸಬೇಕು. ಎಕರೆಯೊಂದಕ್ಕೆ ಕನಿಷ್ಠ ಎರಡು ಲಕ್ಷದಂತೆ ಲಂಚ ಕಿತ್ತೇ ಅಶೋಕ್ ಮಂಜೂರಾತಿ ಆದೇಶಕ್ಕೆ ಸಹಿ ಹಾಕಿದ್ದೇ ಹೌದಾದರೆ ಈ ಬಗ್ಗೆ ತನಿಖೆಯಾಗಲೇ ಬೇಕಲ್ಲವೇ?

ಮಂತ್ರಿ ಅಶೋಕ್ ಮತ್ತಾತನ ಬಿಜೆಪಿ ನೆಲಗಳ್ಳರ ಪಡೆಯನ್ನು ಜೈಲಿಗೆ ದಬ್ಬಲು ಇದಕ್ಕಿಂತ ಬೇಕೆ? ■

ನಕ್ಸಲೈಟರ ಅಡ್ರೆಸ್ ಕೊಡಿ

ಈಗೊಂದು ಎರಡು ವರ್ಷಗಳ ಹಿಂದಿನ ಮಾತು. ಆಗ ತಾನೆ ನಕ್ಸಲ್ ನಾಯಕ ಪ್ರೇಮ್ ಯಾನೆ ಸಾಕೇತ್ ಮಲೆನಾಡಿನ ಕಾಡಿನ ನಡುವೆ ಆಯ್ದ ಹದಿನೈದಿಪ್ಪತ್ತು ಪತ್ರಕರ್ತರನ್ನು ಕರೆಸಿಕೊಂಡು ಒಂದು ಪತ್ರಿಕಾಗೋಷ್ಠಿ ನಡೆಸಿದ್ದರು.

ಲಂಕೇಶ್‌ನಲ್ಲೂ ಆ ಬಗ್ಗೆ ವರದಿ ಪ್ರಕಟವಾಗಿತ್ತು. ಅದಾದ ಮೇಲೆ ಶುರುವಾಯಿತು ನೋಡಿ ವಿಚಾರಣೆ.

"ನನಗೆ ನಕ್ಸಲೈಟರ ಫೋನ್ ನಂಬರ್ ಕೊಡ್ತೀರಾ."

"ನಿಮ್ಮ ಹತ್ತಿರ ನಕ್ಸಲೈಟರ ಅಡ್ರೆಸ್ ಇದೆಯಾ?"

-ಬರೀ ಇಂಥದ್ದೇ ಕೋರಿಕೆಗಳವು. ಅಂದಹಾಗೆ ಹೀಗೆ ಮೂರ್ಖರಂತೆ ಕೇಳುತ್ತಿದ್ದವರು ಬೇರೆ ಯಾರೂ ಅಲ್ಲ, ಪತ್ರಕರ್ತರು, ಅದರಲ್ಲೂ ಇಂಗ್ಲಿಷ್ ಪತ್ರಕರ್ತೆಯರೇ ಜಾಸ್ತಿ. ಕನಿಕರ ಹುಟ್ಟಿಸುವಂತಿದ್ದ ಅವರ ಅಜ್ಞಾನ ನೆನೆನೆನೆದುಕೊಂಡು ನಾವು ಬಹಳ ಸಾರಿ ನಕ್ಕಿದ್ದೇವೆ. ನಕ್ಸಲರೆಂದರೆ ಎಲ್ಲೆಂದರಲ್ಲಿ ಸಿಕ್ಕುವ ಅಥವಾ ಜನತಾದಳ, ಕಾಂಗ್ರೆಸ್‌ನವರಂತೆ ನೀಟಾದ ಆಫೀಸ್ ತೆರಕೊಂಡು ಕೂತಿರುವ ಜನ ಅಂತಾ ಅವರ ಕಲ್ಪನೆ ಇತ್ತೇನೋ. ಕರ್ನಾಟಕದ ಸಾಮಾಜಿಕ ಜೀವನ, ಸಂಸ್ಕೃತಿ, ಚಳವಳಿಗಳ pulse ಗೊತ್ತಿರದ ಈ ಇಂಗ್ಲಿಷಮ್ಮಣ್ಣಿಯರ ಕತೆ ಇದಾದರೆ ಡೆಕ್ಕನ್ ಹೆರಾಲ್ಡ್‌ನಲ್ಲಿದ್ದ ಒಬ್ಬ ಹಿರಿಯ ಪತ್ರಕರ್ತ ನಕ್ಸಲೀಯರನ್ನು ಪತ್ತೆಹಚ್ಚಲು ಒಮ್ಮೆ ತಮ್ಮದೇ ವಿಶಿಷ್ಟ ಪ್ರಯತ್ನ ನಡೆಸಿದ್ದರು. ಆ ಕತೆ ಸ್ವಲ್ಪ ತಮಾಷೆಯಾಗಿದೆ. ಸ್ವಲ್ಪ ಸಾಮಾಜಿಕ ಕಾಳಜಿಯಿದ್ದ ಅವರು ಏನು ಮಾಡಿದರೆಂದರೆ ಸೀದಾ ಟೆಲಿಫೋನ್ ಡೈರೆಕ್ಟರಿ ಕೈಗೆತ್ತಿಕೊಂಡು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ಅಂತ ಹುಡುಕಿದಾಗ ಫೋನ್ ನಂಬರ್ ಸಿಕ್ಕೇಬಿಟ್ಟಿದೆ. ಸರಿ ಅಂತಾ ಮಾತಾಡಿ ಕೊನೆಗೆ ಅವರ ಜೊತೆಗೇ ಸೇರಿಯೂ ಬಿಟ್ಟಿದ್ದಾರೆ. ಅಲ್ಲಿಂದಾಚೆಗೆ ಅವರು ಇದುವರೆಗೂ ಯಾರ ಕಣ್ಣಿಗೂ ಬಿದ್ದಿಲ್ಲ ಅಂದರೆ ನಿಮಗೆ ಆಶ್ಚರ್ಯವಾಗಬಹುದು.

ಯಾಕೆ ಗೊತ್ತಾ?

ಅವರು ಫೋನ್ ಮಾಡಿದ್ದು ಸಿಪಿಎಂ ಪಾರ್ಟಿ ಆಫೀಸಿಗೆ. ಅಲ್ಲಿಗೆ ಹೋದ ಮೇಲೆ ಕ್ರಿಯಾಶೀಲರಾಗುವ ಮಾತೆಲ್ಲಿಂದ ಬರಬೇಕು ಹೇಳಿ.

ನಾಯಿ ಮೊಲೆ ಹಾಲು ದೇವರಿಗೂ ಅಲ್ಲ ದಿಂಡ್ರಿಗೂ ಅಲ್ಲ!

ಥೂತ್ತೇರಿ

ಯಾಹೂ

ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ಥೇಟ್ ತೆಪರನಂತೆ ಮಾತನಾಡಿದ ಗಿರೀಶ್ ಕಾರ್ನಾಡರನ್ನು ಹಿಗ್ಗಾಮುಗ್ಗಾ ಟೀಕಿಸಿ ಮಾನಮರ್ಯಾದೆ ಹಾಳು ಮಾಡಿದ ತಿರುಮಲೇಶ್ ಎಂಬ ಕವಿ, ಇತ್ತೀಚೆಗೆ ತಾನು ಓದಿಕೊಂಡಿದ್ದನ್ನು ಹೇಳಿಕೊಳ್ಳಲು ನಿರ್ಮಿಸಿಕೊಂಡ ವೇದಿಕೆ ನೋಡಿದರೆ ಕಾರ್ನಾಡರನ್ನು ಟೀಕಿಸಿದ್ದಕ್ಕೂ ಸಾರ್ಥಕವಾಯ್ತೆಂದು ಹಲವಾರು ಜನ ಕವಿಪುಂಗವರು ಆಡಿಕೊಳ್ಳುತ್ತಿದ್ದಾರಂತಲ್ಲಾ. ಹೇಳಿಕೇಳಿ ಈ ಕಾರ್ನಾಡರನ್ನು ಕಂಡರೆ ಚೆಡ್ಡಿಗಳಿಗೆ ತೊಣಚಿ ಹೊಕ್ಕಂತಾಗುತ್ತದೆ. ಅದರಲ್ಲೂ ಅವರು ಟಿಪ್ಪೂ ಕನಸು ಹೈದರ್ ನನಪು ಎಂದೆಲ್ಲಾ ಮಾತನಾಡುವುದನ್ನು ಕಂಡರಂತೂ ಕಾರ್ನಾಡರನ್ನು ಕರ್ನಾಟಕದಿಂದಲೇ ಓಡಿಸಬೇಕೆನಿಸುತ್ತದೆ. "ಅಂತಹ ವ್ಯಕ್ತಿಯನ್ನು ಹೀನಾಮಾನ ಟೀಕಿಸಿದ ತಿರುಮಲೇಶ್ ಖಂಡಿತ ನಮ್ಮ ಗುಂಪಿನವನೇ ಇರಬೇಕು. ಆದ್ದರಿಂದ ಆತನನ್ನು ಪುರಸ್ಕರಿಸುವುದು, ಆತನ ಪೆನ್ನಿಗೆ ಲಾಟಿ ಬಿರುಸನ್ನು ದಯಪಾಲಿಸುವುದು ನಮ್ಮ ಧರ್ಮ" ಎಂದು ತೀರ್ಮಾನಿಸಿದ ಚೆಡ್ಡಿಗಳು, ತಮ್ಮ ಕರಪತ್ರದಲ್ಲೊಂದಿಷ್ಟು ಜಾಗವನ್ನು ಕೊಟ್ಟೇಬಿಟ್ಟರಂತಲ್ಲಾ, ಥೂತ್ತೇರಿ!

* * * * * *

ಇನ್ನು ಮುಂದೆ ಅಧಿಕಾರದ ಹಸ್ತಾಂತರದ ವಿಷಯದಲ್ಲಿ ಯಾರಾದರೂ ಬಾಯಿಬಿಟ್ಟರೆ ಅವರ ಮೇಲೆ ಸೂಕ್ತವಾದ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ಪದ್ಮನಾಭನಗರದ ಖಾರಾಸ್ತಾನದಿಂದ ಆಜ್ಞೆಯೊಂದು ಹೊರಬಿದ್ದ ಕೂಡಲೇ ಡಿ.ಟಿ.ಟಿ. ಜಯಕುಮಾರ್ ಎಂಬ ಮಾಜಿ ಪೊಲೀಸ್ ಪೇದೆ ಸೂಕ್ತ ಕ್ರಮಕ್ಕೆ ಸವಾಲೆಂಬಂತೆ ಮಾತನಾಡಿದೆಯಲ್ಲಾ. ಇದರಿಂದ ದೇವೇಗೌಡರ ಎಚ್ಚರಿಕೆಯ ಕಾನೂನೆಂದರೆ ಅದು ಉಲ್ಲಂಘನೆಯ ಕಾನೂನೆಂದು ಅರ್ಥ ಮಾಡಿಕೊಳ್ಳಬೇಕೆಂದು ಜೆಡಿಎಸ್‌ನವರು ಚರ್ಚಿಸುತ್ತಿರುವಾಗಲೇ ಎಡೂರಪ್ಪನ ಬಿ.ಪಿ. ಎದ್ವಾತದ್ವಾ ಏರಿ ಸ್ವತಃ ಕುಮಾರಸ್ವಾಮಿಯೇ ಕನಿಕರಪಡುವಂತಾಗಿದೆಯಂತಲ್ಲಾ. ತನ್ನ ಅಸಂಬದ್ಧ ಮಾತುಗಳ ಕಾರಣಕ್ಕೆ ಡಿ.ಎಸ್.ಎಸ್. ಹುಡುಗರಿಂದ ವೇದಿಕೆಯಲ್ಲೇ ಹಿಗ್ಗಾಮುಗ್ಗಾ ಗೂಸಾ ತಿಂದು ಹೃದಯಾಘಾತಕ್ಕೆ ಒಳಗಾಗಿ ಮೆತ್ತಗಾಗಿರುವ ಡಿ.ಡಿ.ಟಿ.ಜೆ ಎಡೂರಪ್ಪ ಅಸಮರ್ಥ ಎಂದ ಮಾತಿಗೆ ಶಿಕ್ಷೆಯ ಬದಲಾಗಿ ದೇವೇಗೌಡರ ಕಡೆಯಿಂದ ಮೆಚ್ಚುಗೆಯ ಮಹಾಪೂರವೇ ಹರಿದುಬರುತ್ತಿದೆಯಂತಲ್ಲಾ, ಥೂತ್ತೇರಿ!!

* * * * * *


ಸದನದ ಹೊರಗೂ ಒಳಗೂ ತಾನು ಹೇಳುವುದನ್ನೇ ಗಟ್ಟಿಯಾಗಿ ಹೇಳಿದ ಡಿ.ಡಿ.ಟಿ. ಜಯಕುಮಾರನನ್ನ ನಾವು ಮಾತನಾಡಿಸದಿದ್ದರೆ ಹೇಗೆ ಅನ್ನಿಸಿತು. ಸದನದ ಕಲಾಪ ಮುಗಿಸಿಕೊಂಡು ಹೋಗುತ್ತಿದ್ದ ಜಯಕುಮಾರನ ಹಿಂದೆಯೇ ಹೋಗಿ, ಹಠಾತ್ತನೆ ಎದುರು ನಿಂತು......

"ನಮಸ್ಕಾರ್ ಸಾರ್. ನಾನು ಯಾಹೂ ಅಂತ ಪತ್ರಕರ್ತ."

"ಏನೇಳಿ ಯಾಹು?"

"ಯಾಕ್ ಸಾರ್ ಸುಸ್ತಾಗಿದೀರಿ?"

"ಮೆಟ್ಟಲು ಇಳುದು ಬಂದನಲ್ಲಾ, ಅದಕ್ಕೆ."



"ನಿಮ್ಮಂತ ಹಾರ್ಟು ಪೇಶಂಟು ಮೆಟ್ಟಲಿಳಿಬಾರ್ದು.

"ಸಾರ್, ಲಿಫ್ಟಲ್ಲೇ ಬರಬೇಕು."

"ಲಿಫ್ಟಲ್ಲೇ ಬರತಿದ್ದೆ ಕಂಡ್ರಿ. ಏನು ಜನ ಮುತ್ತಿಗೊಳ್ತರೆ. ಅದ್ಕೆ ಸಿಟ್ಟು ಬಂದು ಇಳದೆ."

"ಅಂತೂ ಒಳ್ಳೆ ಮಾತಾಡಿದ್ದಿರಿ ಸಾರ್."

"ಯಾವ್ ಮಾತೇಳಿ?"

"ಅದೆ, ಕುಮಾರಸ್ವಾಮಿ ಸಮರ್ಥ ಎಡೂರಪ್ಪ ಅಸಮರ್ಥ ಅಂತ ಹೇಳಿದ್ರಲ್ಲ, ಅದು."

"ಅಲ್ಲಪೆ ಮತ್ತೆ, ನಾವು ಎಷ್ಟು ಜನ ಇದ್ದೀವಿರಿ. ನಮ್ಮನ್ನೆಲ್ಲಾ ಕುಮಾರಣ್ಣ ಎಷ್ಟು ಚೆನ್ನಾಗಿ ನೋಡಿಕೊತ್ತರೆ, ಬೇಕಾದ ರೆಸಾರ್ಟಿಗೆ ಕರಕಂಡೋಯ್ತರೆ, ಮಜ ಮಾಡುಸ್ತರೆ, ಮನೆ ಕೊಡ್ತರೆ, ಸೈಟು ಕೊಡ್ತರೆ, ಏನು ಕೇಳಿದ್ರು ಇಲ್ಲ ಅನ್ನಲ್ಲ, ಇಂತ ಶಕ್ತಿ ಆ ಎಡೂರಪ್ಪನಿಗೆ ಇದಿಯೇನ್ರಿ?"

"ಇಲ್ಲ ಬಿಡಿ ಸಾರ್. ಇದುವರೆಗೂ ಆ ಬಿಜೆಪಿ ಎಮ್ಮೆಲ್ಲೆಗಳನ್ನು ಕರಕಂಡೋಗಿ ಕನಿಷ್ಠ ತಿರುಪ್ತಿ ಯಾತ್ರೆನಾದ್ರು ಮಾಡಿಸಿಲ್ಲ ಸಾರ್."

"ತಿರುಪ್ತಿ ಯಾತ್ರೆ ಬೇಡ ಕಂಡ್ರಿ. ಅವರಲ್ಲಿರೊ ಶಾಸಕರ ನೋಡಿದ್ರೆ ಎಲ್ಲಾ ನನ್‌ಮಕ್ಕಳೂ ಗೋವಾ ಬೀಚಲ್ಲಿ ಒದ್ದಾಡೋರಂಗೆ ಕಾಣ್ತರೆ."

"ನಿಜ ಸಾರ್. ಆ ರೇಣುಕಾಚಾರ್ಯ, ಕರಾವಳಿ ಕಡೆಯ ಶಾಸಕರನ್ನು ನೋಡಿದ್ರೆ ಬ್ಲೂಫಿಲಂ ಆಕ್ಟರ್ ತರ ಕಾಣ್ತಾರೆ."

"ಕಾಣದೇನು? ಅದೇ ಕೆಲಸದೋರು ಕಂಡ್ರಿ. ನೀವು ರೇಣುಕಾಚಾರಿ ರಿಯಲ್ ಫೋಟೋ ನೋಡಿಲ್ಲ ಅನ್ಸುತ್ತೆ, ನೋಡಿ ಗೊತ್ತಾಯ್ತದೆ. ನಾನು ಪೊಲೀಸ್ ಇಲಾಖೆಲಿದ್ದೋನು, ಇವ್ರುರ ಜಾತಕನ್ನೆಲ್ಲಾ ಸಂಗ್ರಹಿಸಿದ್ದಿನಿ. ಅದ್ಕೆ ಎಡೂರಪ್ಪ ಮುಖ್ಯಮಂತ್ರಿಯಾಗಕ್ಕೆ ನಾಲಾಯಕ್, ಅಸಮರ್ಥ ಅಂದಿದ್ದಿನಿ."

"ಯಾವ ಮಂತ್ರಿನೂ ಆಗದೆ, ಆಡಳಿತದ ವಿವರ ಗೊತ್ತಿಲ್ಲದ ಕುಮಾರಸ್ವಾಮಿ ಯಂಗೆ ಸಮರ್ಥ?"

"ನಾನಾಗಲೇ ಹೇಳಲಿಲ್ಲವೇನ್ರಿ. ಎಮ್ಮೆಲ್ಲೆಗಳನ್ನು ನಿಭಾಯಿಸೋ ಸಮರ್ಥ್ಯ ಅವರಿಗಿದೆ. ಆಡಳಿತ ತಗಂಡೇನು ಮಾಡ್ತಿರಿ? ಅದರಷ್ಟಕದು ನಡಕಂಡೋಯ್ತದೆ."

"ಎಡೂರಪ್ಪನೂ ಪವರ್ ಸಿಕ್ಕಿದ ಮೇಲೆ ನಿಭಾಯಿಸಬಹುದು?"

"ಏನ್ನಿಬಾಯಿಸ್ತಾನೆ? ಬರೀ ಶೋಭಾ ಕರಂದ್ಲಾಜೆ ನಿಭಾಯಿಸ್ತಾನೆ ಅಷ್ಟೆ. ಅಲ್ರೀ ನೂರಾರೂ ಕೋಟಿ ರೂಪಾಯಿ ತಗಂಡೋಗಿ ಅವನ ಕ್ಷೇತ್ರಕ್ಕೆ ಹಾಯ್ಕೊಳ್ತನೆ ಅಂದ್ರೆ, ಇನ್ನು ಮುಖ್ಯಮಂತ್ರಿಯಾದಾಗ ಎಷ್ಟು ತಗಂಡೋಗಬಲ್ಲ, ನೀವೆ ಹೇಳ್ರಿ?"

"ಜಯಕುಮಾರ್‌ರವರೆ, ಇವತ್ತು ಹಾಸನ, ಹೊಳೆನರಸಿಪುರ, ರಾಮನಗರದಲ್ಲಿ ಸುರಿತಾಯಿರೊ ದುಡ್ಡೆಷ್ಟು ಅಂತ ತಿಳಕೊಂಡಿಲ್ಲ ನೀವು."

"ಎಮ್ಮೆಲ್ಲೆಗಳ ನಿಭಾಯಿಸೋರು ಸುರಿಬೇಕಾಯ್ತದೆ ಕಂಡ್ರೀ. ಯಾವ ಎಮ್ಮೆಲ್ಲೆಗಳನ್ನು ಕೈಲಿಟಗಳಕ್ಕಾಗದೆ ದುಡ್ಡು ತಗಂಡೋಗಿ ಸುರಕೊಂಡ್ರೆ ಏನು ಬಂತು? ನಾಯಿ ಮೊಲೆಲಿ ಹಾಲಿದ್ರೆ ದೇವರಿಗೂ ಅಲ್ಲ ದಿಂಡ್ರಿಗೂ ಅಲ್ಲ ಅನ್ನಂಗಾಯ್ತದೆ."

"ಥೂತ್ತೇರಿ!!!"





ಅಧಿಕಾರ ಹಸ್ತಾಂತರ ಗಾಳಿಪಟ

ಈಗತಾನೆ ಆಷಾಢ ಮಾಸ ಶುರುವಾಗಿದೆ. ಸಣ್ಣ ಹೈಕಳು ಗಾಳಿಪಟ ಹಾರಿಸುತ್ತಾ ನಲಿದಾಡುವ ಈ ಹೊತ್ತಿನಲ್ಲೇ ಜಾತಿವಾದಿ ಜನತಾದಳದ ಮಾಲೀಕ ದೇವೇಗೌಡರು ತಾವೂ ಒಂದಷ್ಟು ಗಾಳಿಪಟಗಳನ್ನು ಹಾರಿಬಿಟ್ಟಿದ್ದಾರೆ. ಮಜಾ ಏನೆಂದರೆ ಗೌಡರ ಈ ರಾಜಕೀಯ ಗಾಳಿಪಟಗಳಲ್ಲಿ ಕೆಲವಕ್ಕೆ ಸೂತ್ರವೇ ಸರಿ ಇಲ್ಲ. ಇನ್ನುಳಿದವಕ್ಕೆ ಬಾಲಂಗೋಚಿಯೇ ಇಲ್ಲ. ಅಸಲಿಗೆ ಇವು ಹಾರಬೇಕೆಂದರೆ ಅವಕ್ಕೆ ಕಾಂಗ್ರೆಸ್ ಗಾಳಿ ಬೇಕೆಬೇಕು. ಆದರೆ ಅದು ಗೌಡರತ್ತ ಬೀಸುವಂತೆ ಕಾಣುತ್ತಿಲ್ಲ!

ಹೌದು. ದೇವೇಗೌಡರು ಎಷ್ಟೇ ತಿಪ್ಪರಲಾಗ ಹಾಕುತ್ತಿದ್ದರೂ ಕಾಂಗ್ರೆಸ್ ಅದನ್ನು ನಂಬಲು ರೆಡಿ ಇಲ್ಲ. ಕಾಂಗ್ರೆಸ್ ಹೈಕಮಾಂಡಿನ ಬಾಗಿಲುಗಳು ತೆರೆಯುತ್ತಿಲ್ಲ. ಇದು ಒಂದು ರೀತಿಯಲ್ಲಿ ಗೌಡರಿಗೆ 'ಬಟ್ಟೆಂಡಿರ ಮನೆಗೇ ಹಿಟ್ಟಗೋದನಂತೆ' ಎಂಬಂತಾ ದುಃಸ್ಥಿತಿ.

ಮತ್ತೊಂದೆಡೆ ಬಜೆಪಿಯ ಬಾಗಿಲು ಹಾರು ಹೊಡೆದಂತೆ ತೆರೆದುಕೊಂಡು ಬಿದ್ದಿದ್ದರೂ ಗೌಡರಿಗೆ ಅತ್ತ ಕಡೆ ಆಸಕ್ತಿ ಕಡಿಮೆಯಾಗಿಬಿಟ್ಟಿದೆ.

ಇದು ರಾಜ್ಯ ರಾಜಕೀಯದ ಲೇಟೆಸ್ಟ್ ವಿದ್ಯಮಾನ. ಇನ್ನೂ ಬಿಡಿಸಿ ಹೇಳಬೇಕೆಂದರೆ...

ಹೌದು ದೇವೇಗೌಡರು ಎಷ್ಟೇ ತಿಪ್ಪರಲಾಗ ಹಾಕುತ್ತಿದ್ದರೂ ಕಾಂಗ್ರೆಸ್ ಅದನ್ನು ನಂಬಲು ರೆಡಿ ಇಲ್ಲ. ಕಾಂಗ್ರೆಸ್ ಹೈಕಮಾಂಡಿನ ಬಾಗಿಲುಗಳು ತೆರೆಯುತ್ತಿಲ್ಲ. ಇದು ಒಂದು ರೀತಿಯಲ್ಲಿ ಗೌಡರಿಗೆ 'ಬಟ್ಟೆಂಡಿರ ಮನೆಗೇ ಹಿಟ್ಟಗೋದನಂತೆ' ಎಂಬಂತಾ ದುಃಸ್ಥಿತಿ. ಮತ್ತೊಂದೆಡೆ ಬಿಜೆಪಿಯ ಬಾಗಿಲು ಹಾರು ಹೊಡೆದಂತೆ ತೆರೆದುಕೊಂಡು ಬಿದ್ದಿದ್ದರೂ ಗೌಡರಿಗೆ ಅತ್ತ ಕಡೆ ಆಸಕ್ತಿ ಕಡಿಮೆಯಾಗಿಬಿಟ್ಟಿದೆ. ಇದು ರಾಜ್ಯ ರಾಜಕೀಯದ ಲೇಟೆಸ್ಟ್ ವಿದ್ಯಮಾನ. ಇನ್ನೂ ಬಿಡಿಸಿ ಹೇಳಬೇಕೆಂದರೆ...



ಕೇಂದ್ರ ಸಚಿವ ಕಾಂಗ್ರೆಸ್‌ನ ಎಂ.ವಿ. ರಾಜಶೇಖರನ್ ಈ ಶನಿವಾರ, ಭಾನುವಾರ ಪೂರ್ತಿ ಗೌಡರೊಂದಿಗೆ ಪದೇ ಪದೇ ಭೇಟಿಯಾಗಿ ಗುಪ್ತ ಸಮಾಲೋಚನೆ ನಡೆಸಿದ್ದಾರೆ. ಸಿದ್ದರಾಮಯ್ಯ ಜುಲೈ 30ರಂದು ಸೋಮವಾರ ದೆಹಲಿಗೆ ಹೋಗಿದ್ದಾರೆ. ಹೈಕಮಾಂಡಿನ ಅಹ್ಮದ್ ಪಟೇಲರ ತುರ್ತು ಕರೆ ಮೇರೆಗೆ ಈ ಪ್ರಯಾಣ. ಗೌಡರ ಜಾತಕ ಪುತ್ರ ರೇವಣ್ಣ ಎಂಟು ದಿಕ್ಕು ಹದಿನಾರು ಮೂಲೆಗಳಿಂದ ಜ್ಯೋತಿಷಿಗಳನ್ನು ಕರೆಸಿಕೊಂಡು 'ಸಿಎಂ ಹುದ್ದೆ' ತಮ್ಮ ಹಣೆಯಲ್ಲಿ ಬರೆದಿದೆಯಾ ಅಂತಾ ಚೆಕ್‌ಅಪ್ ಮಾಡಿಸುತ್ತಿದ್ದಾರೆ. ಇನ್ನೂ ಮುಖ್ಯವಾಗಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿಧಾನಸಭಾ ಅಧಿವೇಶನದಲ್ಲಿ ಹೆಚ್ಚು ಕಾಲಹರಣ ಮಾಡದೆ ಫೈಲುಗಳಲ್ಲಿ ಮುಳುಗಿ ಹೋಗಿದ್ದಾರೆ. ಅಂದರೆ ಒಪ್ಪಿಕೊಂಡ ಡೀಲುಗಳನ್ನು ಬೇಗ ಬೇಗ ಪೂರೈಸಿ ಫೈಲು ಕ್ಲಿಯರ್ ಮಾಡಿ ನಿರಾಳವಾಗುವ ಅರ್ಜೆನ್ಸಿ ಅವರಿಗೆ. ಕೇವಲ ಮೂರು ದಿನದ ಹಿಂದೆ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಸುತ್ತಮುತ್ತಲಿನ 65 ಎಕರೆ ಜಮೀನನ್ನು ಡಿನೋಟಿಫೈ ಮಾಡಿಸಿ ಎಕರೆಗೆ ತಲಾ 50 ಲಕ್ಷದಂತೆ ಫೀಸ್ ತೆಗೆದುಕೊಂಡಿದ್ದಾರೆ. ಕಟ್ಟಾ ಸುಬ್ರಮಣ್ಯ ನಾಯ್ಡು ತಂದು ಕೊಟ್ಟಿದ್ದ ಡೀಲು ಅದು. ವಿಧಾನಪರಿಷತ್ ಸಭಾಪತಿ ಬಿ.ಕೆ. ಚಂದ್ರಶೇಖರ್ ಸದನದಲ್ಲಿ ಸಚಿವ- ಶಾಸಕರುಗಳೇ ಕಾಣುತ್ತಿಲ್ಲ ಎಂದು ಬಹಿರಂಗವಾಗೇ ಅಸಮಾಧಾನ ವ್ಯಕ್ತಪಡಿಸುವಷ್ಟರ ಮಟ್ಟಿಗೆ ಸೆಷನ್ ಖಾಲಿ ಹೊಡೆಯುತ್ತಿದೆ. ಏಕೆಂದರೆ ಪ್ರತಿ ಮಂತ್ರಿ-ಶಾಸಕರಿಗೂ 'ಏನೋ ಒಂದು ಸಂಭವಿಸುವ' ಮುನ್ನ ತಮ್ಮ ತಮ್ಮ ವ್ಯವಹಾರಗಳನ್ನು ಮುಗಿಸಿಕೊಂಡು ಬಿಟ್ಟರೆ ಕ್ಷೇಮ ಎಂಬ ಧಾವಂತ ಕಾಡುತ್ತಿದೆ. ಅಂತಹವರು ಈ ಹಂತದಲ್ಲಿ ತಮ್ಮ ಅಮೂಲ್ಯವಾದ ಅಧಿಕಾರದ ಕೊನೆ ಗಳಿಗೆಗಳನ್ನು ಸದನದಲ್ಲಿ ಯಾಕೆ ವ್ಯರ್ಥ ಮಾಡುತ್ತಾರೆ ಹೇಳಿ?



ಒಟ್ಟಿನಲ್ಲಿ ಎಲ್ಲರಿಗೂ ಸದ್ಯದಲ್ಲೇ ಏನೋ ತೀವ್ರ ರಾಜಕೀಯ ಬೆಳವಣಿಗೆಗಳಾಗಲಿದೆ ಎಂಬುದು ಅರ್ಥವಾಗಿಬಿಟ್ಟಿದೆ. ಅತ್ತ ಕಾತರ, ಉದ್ವೇಗ, ನಿರೀಕ್ಷೆಗಳಲ್ಲಿ ಇವರೆಲ್ಲಾ ಮುಳುಗೇಳುತ್ತಿದ್ದರೆ ಇತ್ತ ಒಬ್ಬ ಯಡಿಯೂರಪ್ಪನ ಮುಖ ಮಾತ್ರ ಒಣ ಖರ್ಜೂರದಂತಾಗಿ ಹೋಗಿದೆ.





ಯಡಿಯೂರಪ್ಪ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಆಗುವುದಿಲ್ಲ ಎಂಬ ಅಂದಾಜಂತೂ ಎಲ್ಲರಿಗೂ ಗೊತ್ತಾಗಿ ಹೋಗಿದೆ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬ ಸ್ಥಿತಿ ಯಡ್ಡಿಯದು. ಈ ಗೊಂದಲಕಾರಿ ಪರಿಸ್ಥಿತಿ ನಿರ್ಮಿಸಿರುವ ಸಾಕ್ಷಾತ್ ದೇವೇಗೌಡರೇ ಈಗ ನಿರಾಶ್ರಿತನಂತೆ ಕಾಂಗ್ರೆಸ್ ಬಾಗಿಲಲ್ಲಿ ನಿಂತಿದ್ದಾರೆ.

ಅರೆ ತೆರೆದಿದೆ ಕಾಂಗ್ರೆ ಬಾಗಿಲು

ಇದೇ ಶನಿವಾರ ದೇವೇಗೌಡರೊಂದಿಗೆ ಎರಡು ತಾಸುಗಳ ಗುಪ್ತ ಚರ್ಚೆ ನಡೆಸಿಹೋದ ಎಂ.ವಿ. ರಾಜಶೇಖರನ್ "ರಾಜಕೀಯದಲ್ಲಿ ಖಾಯಂ ಶತ್ರು. ಖಾಯಂ ಮಿತ್ರ ಅಂತಾ ಯಾರೂ ಇಲ್ಲ" ಎಂದಿರುವುದು ಹೈಕಮಾಂಡಿನ ಪರೋಕ್ಷ ನಿಲುವು ಆಗಿದೆ. ಈ ಬಗ್ಗೆ 'ಲಂಕೇಶ್' ಎಐಸಿಸಿಯ ಬಿ.ಕೆ. ಹರಿಪ್ರಸಾದ್‌ರಿಂದ ಹಿಡಿದು ದೇವೇಗೌಡರನ್ನು ಕಂಡರಾಗದ ಡಿ.ಕೆ. ಶಿವಕುಮಾರ್‌ವರೆಗೂ ಯಾರನ್ನೇ ಕೇಳಿದರೂ ಈ ಸಾಧ್ಯತೆಯನ್ನು ರೂಲ್‌ಔಟ್ ಮಾಡೋಕಾಗಲ್ಲ ಎಂದು ಹೇಳುತ್ತಿದ್ದಾರೆ. ಇವರರ್ಥ ಡಿಕೆ-ಎಸ್‌ಎಂ ಕೃಷ್ಣಗೆ ಇದು ಒಪ್ಪಿಗೆ ಎಂದೇನಲ್ಲ. ಸಿದ್ದರಾಮಯ್ಯ ಕೂಡ ದಳ-ಕಾಂಗ್ರೆ ಪುನರ್ ಮೈತ್ರಿ ಏರ್ಪಟ್ಟರೆ ಕಾಂಗ್ರೆ ತ್ಯಜಿಸುವುದು ನೂರಕ್ಕೆ ನೂರು ಖಚಿತ.

ಬಿಜೆಪಿ ಕೈಗೆ ಪೂರ್ಣ ಅಧಿಕಾರ ಹೋಗುವುದನ್ನು ತಪ್ಪಿಸಬೇಕು ಮತ್ತು ಆ ಪಾರ್ಟಿ ಎಲೆಕ್ಷನ್ ಬರುವಷ್ಟರಲ್ಲಿ ಭಾರಿ ಹಣ ಕ್ರೋಢೀಕರಿಸಿಕೊಂಡು ದುಂಡಗಾಗುವುದಕ್ಕೆ ಬಿಡಬಾರದು ಎಂದಷ್ಟೇ ಯೋಚಿಸುತ್ತಿರುವ ಕಾಂಗ್ರೆಸ್ ಹೈಕಮಾಂಡ್‌ಗೆ ಈ ಪುನರ್ ಮೈತ್ರಿ ಬಗ್ಗೆ ಅರೆಮನಸ್ಸಿನ ಒಪ್ಪಿಗೆ ಇರುವಂತಿದೆ. ಇಂಥದ್ದರ ವಾಸನೆ ಹಿಡಿಯುವುದರಲ್ಲಿ ದೇವೇಗೌಡ ಎತ್ತಿದ ಕೈ. ಮೊನ್ನೆ ಏನಾಯಿತು ನೋಡಿ. ಸಹಕಾರ ಆಂದೋಲನದ ಯಾವುದೋ ಕಾರ್ಯಕ್ರಮಕ್ಕೆ ಬಂದಿದ್ದ ಎನ್‌ಸಿಪಿಯ ಶರದ್ ಪವಾರ್‌ರನ್ನು ಮನೆಗೆ ಕರೆಸಿಕೊಂಡ ಗೌಡರು ಅಹ್ಮದ್ ಪಟೇಲ್ ಹಾಗೂ ಸೋನಿಯಾರೊಂದಿಗೆ ಚರ್ಚಿಸಿ ಒಪ್ಪಿಸುವಂತೆ ಬೇಡಿಕೊಂಡಿದ್ದಾರೆ.

ಈ ದೇವೇಗೌಡ ನಂಬಿಕೆಗೆ ಅರ್ಹನಾದ ರಾಜಕಾರಣಿಯಲ್ಲ ಅಂತಾ ಗೊತ್ತಿದ್ದರೂ ದೂರ ತಳ್ಳುವಷ್ಟು ನಿಷ್ಠೂರತೆ ಇವತ್ತಿನ ಕಾಂಗ್ರೆಸ್‌ಗಿಲ್ಲ. ಎನ್‌ಡಿಎಗೆ ಎದುರಾಗಿ ಯುಪಿಎ ಬಲಪಡಿಸಬೇಕು. ಯುಎನ್‌ಪಿಎ ಎಂಬ ಮೂರನೇ ರಾಷ್ಟ್ರೀಯ ಮೈತ್ರಿಕೂಟ ತಲೆ ಎತ್ತದಂತೆ, ದೇವೇಗೌಡರಂಥವರು ಅತ್ತ ಹೋಗದಂತೆ ನೋಡಿ ಕೊಳ್ಳಬೇಕೆಂದರೆ ಸೋನಿಯಾ ಗಾಂಧಿ ಹಳೆಯದನ್ನೆಲ್ಲಾ ಮರೆಯಲೇ ಬೇಕಾಗುತ್ತದೆ. ಆವಾಗ ಕರ್ನಾಟಕದೊಳಗೆ ಸಿದ್ದರಾಮಯ್ಯ ಡಿಕೆ ಏನು ಹೇಳುತ್ತಾರೆಂಬುದಕ್ಕಿಂತ ನ್ಯಾಷನಲ್ ಲೆವೆಲ್‌ನ equation ಗಳೇ ಮುಖ್ಯವಾಗಿಬಿಡುವುದು ಸಹಜ.



ಬಿಳಿದಾಳೆ ಈಶ

ಪರಿಸ್ಥಿತಿ ಹೀಗಿದ್ದಾಗಲೂ ಸೋನಿಯಾ ಸಲಹೆಗಾರರೊಬ್ಬರು ಲಂಕೇಶ್‌ಗೆ ಹೇಳಿದ್ದೇನೆಂದರೆ "ಕುಮಾರಸ್ವಾಮಿಯೇ ಸಿಎಂ ಆಗಿ ಮುಂದುವರೆಯಲಿ ಎಂಬ ಷರತ್ತಿನೊಂದಿಗೇನಾದರೂ ಗೌಡರು ಮೈತ್ರಿಗೆ ಬಂದರೆ ಏನು ಮಾಡುವುದು?" ಎಂದು. ಸೋನಿಯಾ ಅದನ್ನು ಅನುಮೋದಿಸಲಾರರೆಂಬುದು ನಿಜ. ಅಂತ ಸಂದರ್ಭ ಬಂದರೆ ಯಾವುದಕ್ಕೂ ಇರಲಿ ಅಂತ ಗೌಡರೀಗ ಕಾಂಗ್ರೆಸ್‌ನ ರಾಜಶೇಖರನ್ ಜೊತೆ ತಮ್ಮ ರಾಜಕೀಯ ಸರಸ ಶುರು ಮಾಡಿದ್ದಾರೆ.

ಯಡ್ಡಿ ವಿರುದ್ಧ ಬಹಿರಂಗ ಪಿತೂರಿ

ಗೌಡ ಅಂಡ್ ಸನ್ಸ್ ಈಗ ಏಕಕಾಲದಲ್ಲಿ ರಹಸ್ಯ ಹಾಗೂ ಬಹಿರಂಗವೆಂಬ ಎರಡು ರೀತಿಯ ರಾಜಕೀಯ ದಾಳ ಉರುಳಿಸುತ್ತಿದ್ದಾರೆ. ಕಾಂಗ್ರೆಸ್‌ಗಳೊಂದಿಗೆ ಮುಚ್ಚುಮರೆಯ ವ್ಯವಹಾರ ನಡೆಸುತ್ತಲೇ ಬಿಜೆಪಿಯೊಳಗೆ ಯಡ್ಡಿ ವಿರೋಧಿಗಳೊಂದಿಗೆ ಬಹಿರಂಗವಾಗೇ ಭೇಟಿ, ಚರ್ಚೆಗಳು ಶುರುವಾಗಿದೆ. ಜುಲೈ 28 ರ ಶನಿವಾರ ಸ್ವತಃ ಕುಮಾರಸ್ವಾಮಿ ಶಾಸಕರ ಭವನಕ್ಕೆ ಹೋಗಿ ಶಾಸಕ ಶಂಕರಲಿಂಗೇಗೌಡರೊಂದಿಗೆ ಕೂತು ಊಟ ಮಾಡಿ ಮಾತಾಡಿ ಬಂದಿದ್ದಾರೆ. ಇದು ಈಶ್ವರಪ್ಪನವರ ಪರವಾಗಿ ಗುಂಪು ಕಟ್ಟುವ ಪ್ರಕ್ರಿಯೆಯ ಭಾಗವಾಗಿತ್ತು. ಮೂರನೇ ಬಾರಿಗೆ ಶಾಸಕನಾದರೂ ಸಚಿವ ಪದವಿ ಸಿಗಲಿಲ್ಲವೆಂದು ಯಡ್ಡಿ ವಿರುದ್ಧ ಕುದಿಯುತ್ತಿರುವ ಶಂಕರಲಿಂಗೇಗೌಡರ ಹತ್ತಿರ ಕುಮಾರಸ್ವಾಮಿ ಇಟ್ಟಿರುವ ಪ್ರಸ್ತಾಪವಿಷ್ಟೆ.

"ಒಪ್ಪಂದದಂತೆ ಅಧಿಕಾರ ಹಸ್ತಾಂತರ ಮಾಡುತ್ತೇನೆ. ಆದರೆ ಮುಂದೆ ಈಶ್ವರಪ್ಪನೇ ಸಿಎಂ ಆಗಬೇಕೆಂದು ನೀವೂ ಒತ್ತಾಯ ಮಾಡಿ, ಆಗ ನಿಮಗೆ ಮಂತ್ರಿ ಪದವಿ ಕೊಡಿಸುವುದು ನನ್ನ ಜವಾಬ್ದಾರಿ" ಎಂದು. ಅವತ್ತು ಅಲ್ಲಿ ಇನ್ನೊಬ್ಬ ಯಡ್ಡಿ ವಿರೋಧಿ ಮುಖ್ಯಮಂತ್ರಿ ಚಂದ್ರು ಹಾಗೂ ಜೆಡಿಯುನ ಎಚ್. ಆಂಜನೇಯ ಕೂಡಾ ಇದ್ದರು. ಹಾಲಿ ಸಮ್ಮಿಶ್ರ ಸರ್ಕಾರದಲ್ಲಿ ಯಾವ ಮಂತ್ರಿಗಿರಿಯೂ ಸಿಗದ ಜೆಡಿಯೂಗೆ ಅಕ್ಟೋಬರ್ ನಂತರವಾದರೂ ಒಂದು ಛಾನ್ಸ್ ಸಿಕ್ಕೀತಾ ಎಂಬ ನಿರೀಕ್ಷೆ ಇದೆ. ಮಾಧುಸ್ವಾಮಿ, ಸೋಮಶೇಖರ್‌ಗಿಂತ ಎಚ್. ಆಂಜನೇಯಗೆ ಈ ಚಟಪಟಿಕೆ ಜಾಸ್ತಿ

ಅಧಿಕಾರ ಹಸ್ತಾಂತರದ ತಮಾಷೆ ತರ್ಕಗಳು

ರೇವಣ್ಣ-ಎಚ್ಕೆ



ರೇವಣ್ಣ ಸಿಎಂ ಆಗಿಯೂ ಉತ್ತರ ಕರ್ನಾಟಕ ಲಿಂಗಾಯತ ಕಾಂಗ್ರೆಸ್ ಮುಖಂಡ ಎಚ್.ಕೆ. ಪಾಟೀಲರು ಉಪಮುಖ್ಯಮಂತ್ರಿಯಾಗುವಂತೆಯೂ ಮಾಡುವ ಒಂದು ಪ್ರಯತ್ನವಂತೂ ನಡೆದಿದೆ. ಈಗಾಗಲೇ ರೇವಣ್ಣ ಹಾಗೂ ಎಚ್ಕೆ ಪಾಟೀಲರು ಎರಡು ಸಾರಿ ಸೀಕ್ರೆಟಾಗಿ ಗೋವಾಗೆ ಹೋಗಿ ಇದರ ಸಾಧ್ಯತೆಗಳನ್ನು ಚರ್ಚಿಸಿಕೊಂಡು ಬಂದಿದ್ದಾರೆ.

ಇದು ಆಗಬೇಕಾದರೆ ಮೊದಲು ಕಾಂಗ್ರೆಸ್ ಹೈಕಮಾಂಡ್ ಗೌಡರೊಂದಿಗೆ ಪುನರ್ ಮೈತ್ರಿಗೆ ಒಪ್ಪಬೇಕು. ಹಾಗೇನಾದರೂ ಒಪ್ಪಿದರೆ ರೇವಣ್ಣ ಸಿಎಂ ಆಗುವ ಬಗ್ಗೆ ಕೆ.ಎಚ್. ಮುನಿಯಪ್ಪ, ಧರಂಸಿಂಗ್, ಆಸ್ಕರ್ ಆಕ್ಷೇಪಿಸಲಾರರು. ಗೌಡರ ಬಣಕ್ಕೆ ಎಚ್.ಕೆ. ಪಾಟೀಲರೇ ಡಿಸಿಎಂ ಆಗಲಿ ಎಂಬ ಇರಾದೆ ಇದೆ. ಅದು ಏಕೆಂದರೆ ಲಿಂಗಾಯತ ಯಡ್ಡಿಗೆ ಸಿಎಂ ಹುದ್ದೆ ತಪ್ಪಿಸಿದರೆಂಬ ಕಳಂಕವನ್ನು ಆ ಮೂಲಕ ಸ್ವಲ್ಪವಾದರೂ ನಿವಾರಿಸಿಕೊಳ್ಳಬೇಕೆಂಬುದು ಒಂದಾದರೆ ಇನ್ನೊಂದು ನೆಲೆಯಲ್ಲಿ ಎಸ್.ಎಂ. ಕೃಷ್ಣ-ಡಿಕೆಗೆ ಎಚ್ಕೆ ವೈರಿಯಾಗಿರುವುದರಿಂದ ಅಲ್ಲೂ ಲಾಭವಾಗುವುದು ಗೌಡ ಮತ್ತು ಸನ್ಸ್‌ಗೆ.

ಕುಮಾರಸ್ವಾಮಿ-ಖರ್ಗೆ



ಮರು ಮೈತ್ರಿಗೆ ಒಪ್ಪಿಕೊಂಡರೆ ಈಗಿರುವಂತೆ ಕುಮಾರಸ್ವಾಮಿಯೇ ಸಿಎಂ ಆಗಿ ಮುಂದುವರೆಯಲು ಒಪ್ಪುವಂತೆ ಗೌಡರು ಷರತ್ತು ಹಾಕಿದರೆ ಗತಿ ಏನೆಂದು ಕಾಂಗ್ರೆಸ್‌ಗೆ ಈಗಾಗಲೇ ಚಿಂತೆಯಾಗಿದೆ.

ಕಾಂಗ್ರೈಗಳ ಪ್ರಕಾರ ಕೋಮುವಾದಿಗಳೊಂದಿಗೆ ಮೈತ್ರಿ ಮಾಡಿಕೊಂಡ ಕುಮಾರಸ್ವಾಮಿ ಒಬ್ಬ ಕಳಂಕಿತ ನಾಯಕ. ಆತನ ನಾಯಕತ್ವದಲ್ಲೇ ಮತ್ತೆ ಮೈತ್ರಿ ಸರ್ಕಾರ ರಚಿಸಲು ಕಾಂಗ್ರೈ ಒಪ್ಪುವುದು ಕಷ್ಟ. ಕಾಂಗ್ರೈಗಳ ಮಾತಿರಲಿ, ಸ್ವತಃ ರೇವಣ್ಣನೇ ಇದನ್ನು ಒಪ್ಪುವುದು ಕಷ್ಟ. ಹಾಗಿದ್ದಾಗಲೂ ಗೌಡರು ಒಂದು ಕೈ ನೋಡೋಣ ಎಂದು ಈ ಗಾಳಿಪಟವನ್ನು ಹಾರಲು ಬಿಟ್ಟಿದ್ದಾರೆ. ಅದರ ಬಾಲಂಗೋಚಿಯಾಗಿ ಖರ್ಗೆ ಡಿಸಿಎಂ ಆಗುವುದಾದರೆ ಗೌಡರಿಗೆ ಏನಡ್ಡಿಯಿಲ್ಲ. ಲಿಂಗಾಯತರ ಪೈಕಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಮಾತ್ರ ಬಿಜೆಪಿ ಪರ ಸ್ವಲ್ಪ ಒಲವಿದೆ. ಅವರು ಹೇಗೂ ದಳಕ್ಕೆ ಓಟು ಹಾಕುವವರಲ್ಲ, ಆದರೆ ಖರ್ಗೆ ಅವಕಾಶ ಸಿಕ್ಕರೆ ದಲಿತರನ್ನು ಮೆಚ್ಚಿಸಬಹುದಲ್ಲ ಅಂತಾ ಈ ಮಂತ್ರವಾದಿಯ ಲೆಕ್ಕಾಚಾರ.

ಅನಂತೂದು ಒಂದು ಡೀಲಿದೆ



'ಯಡಿಯೂರಪ್ಪನವರೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿ' ಅಂತ ಅನಂತಕುಮಾರ್ ದೆಹಲಿಯಲ್ಲಿ ಹೇಳಿದ್ದಾರೆಂದು ವರದಿಗಳು ಬಂದಿವೆ. ಇವತ್ತಿನ ಗೊಂದಲಕಾರಿ ಸನ್ನಿವೇಶದಲ್ಲಿ ಈ ಯಾಂತ್ರಿಕ ಹೇಳಿಕೆಗೆ ಅಷ್ಟು ಮಹತ್ವ ಇಲ್ಲ ಎಂಬುದು ಬೇರೆಲ್ಲರಿಗಿಂತ ಅನಂತೂಗೆ ಚೆನ್ನಾಗಿ ಗೊತ್ತಿದೆ. ಆದರೆ ಯಡ್ಡಿ ಕಂಡರೆ ಕೆಂಡಮಂಡಲವಾಗುವ ಅನಂತೂ ಬಗ್ಗೆ ಬಿಜೆಪಿಗಳೇ ಹಬ್ಬಿಸಿರುವ ಇನ್ನೊಂದು ರೂಮರ್ ಏನು ಗೊತ್ತೆ?

"ಏನೇ ಆಗಲಿ ಯಡಿಯೂರಪ್ಪ ಸಿಎಂ ಆಗದಂತೆ ನೋಡಿಕೊಳ್ಳಿ" ಅಂತ ದೇವೇಗೌಡರಿಗೆ ಅನಂತೂ ಮೆಸೇಜ್ ಕಳಿಸಿದ್ದಾರೆಂಬುದು! ಕೇಳಲಿಕ್ಕೆ ಹಿತವಾಗಿರುವ, ಜೊತೆಗೆ ನಂಬಲೂ ಸಾಧ್ಯವಿರುವಂತಹ ಇಂತಾ ರೂಮರ್‌ಗಳನ್ನು ಪುಢಾರಿಗಳು ತಮ್ಮ ಹರಟೆಯ ನಡುವೆ ಚಿಪ್ಸ್ ರೀತಿ ನೆಂಚಿಕೊಳ್ಳುತ್ತಿದ್ದಾರೆ.

ರಾಮಭಕ್ತರ ಬಿಜೆಪಿ ಪಾರ್ಟಿಯೊಳಗೆ ಈಗ ರಾಮನ್ಯಾರು, ಕೈಕೆಯಿ ಯಾರು, ಮಂಥರೆ, ದಶರಥ ಯಾರೆಂಬುದು ನಿಮ್ಮ ಕಲ್ಪನೆಗೆ ಬಿಟ್ಟ ವಿಚಾರ.

ಈಶ್ವರಪ್ಪ-ರೇವಣ್ಣ



ಬಿಜೆಪಿಯೊಳಗೇ ಯಡ್ಡಿ ಪರ ಹಾಗೂ ಯಡ್ಡಿ ವಿರೋಧಿ ತಿಕ್ಕಾಟವನ್ನು ಇನ್ನಷ್ಟು ಜಾಸ್ತಿ ಮಾಡುವ ಗೌಡರ ತಂತ್ರದ ಭಾಗವಾಗಿ ಇದು ಕಾಣುತ್ತಿದೆ. ಮಂತ್ರಿಯಾಗುವುದನ್ನೇ ಕಲ್ಪಿಸಿಕೊಂಡಿರದಿದ್ದ ಈಶ್ವರಪ್ಪನಿಗೆ ಸಿಎಂ ಆಗುವ ಪುಗಸಟ್ಟೆ ಕನಸನ್ನೇ ಗೌಡರು ಕಾಣಿಸುತ್ತಿದ್ದಾರೆ. ಸಿದ್ಧರಾಮಯ್ಯ ಉಚ್ಚಾಟನೆಯಿಂದ ಗೌಡರ ವಿರುದ್ಧ ಕುರುಬರಿಗಿರುವ ಕಹಿಯನ್ನು ಮರೆಸಿಬಿಡಲು ಈಶ್ವರಪ್ಪನವರನ್ನು ದಾಳವಾಗಿ ಬಳಸುವುದು ಈ ತಂತ್ರದ ಭಾಗ.

ಎಸ್ಸೆಲ್ ಗ್ರೂಪ್‌ನವರಿಂದ ಖರೀದಿ ಮಾಡಿರುವ 'ಬೆಸ್ಟ್ ಮಿನಿಸ್ಟರ್' ಎಂಬ ಡುಬುಬಿ ಅವಾರ್ಡನ್ನೇ ಕರ್ನಾಟಕ ರತ್ನ ಪ್ರಶಸ್ತಿ ಥರ ತೋರಿಸಿಕೊಂಡು ಈಶ್ವರಪ್ಪ ಓಡಾಡುತ್ತಿದ್ದಾರೆ. ಜೊತೆಗೆ ಇದುವರೆಗೂ ಯಾರಿಗೂ ಗೊತ್ತಿರದಿದ್ದ ಚಂದ್ರಗುಪ್ತ ಮೌರ್ಯ ಟ್ರಸ್ಟ್‌ನವರು ಈ ಈಶ್ವರಪ್ಪ ಒಬ್ಬ ಲೋಕನಾಯಕನೋ ಎಂಬಂತೆ ಸನ್ಮಾನ ಏರ್ಪಡಿಸಿದ್ದು, ಜಗದೇಕ ವೀರನಂತೆ ಈಶ್ವರಪ್ಪ ಕೈ ಅಲ್ಲಾಡಿಸುತ್ತಾ ಪೋಜ್ ಕೊಡುತ್ತಿರುವುದೆಲ್ಲಾ **image building exercise**ನ ಭಾಗ.

ಬಿಜೆಪಿಯೊಳಗೆ ಯಡ್ಡಿಗೊಬ್ಬ ಪರ್ಯಾಯ ಲೀಡರೂ ಇದ್ದಾನೆಂದು ಜನರಿಗೆ ತೋರಿಸುವುದೇ ಇದರ ಸಾರಾಂಶ.

ಇದರಿಂದ ಒಟ್ಟಾರೆ ಅಧಿಕಾರ ಗೌಡರ ಕೈಲೇ ಇರುತ್ತಾದ್ದರಿಂದ ಗೌಡರಿಗೆ 75% ಲಾಭವೂ ಯಡ್ಡಿ ಹಾಗೂ ಲಿಂಗಾಯಿತರ ಅಸಮಾಧಾನದಿಂದ 25% ನಷ್ಟವೂ ಆಗಬಹುದು.

ಧರಂಸಿಂಗ್ ಗೌಡರ ಏಜೆಂಟ್!



ಕಿಂಚಿತ್ತೂ ಅನುಮಾನವಿರದಂತೆ ಸಾಬೀತಾಗಿರುವ ವಿಚಾರ ಇದು. 2004 ರಲ್ಲಿ ಕಾಂಗ್ರೈ-ದಳದ ಮೈತ್ರಿ ಸರ್ಕಾರ ಬಂದಾಗಲೂ ಗೌಡರೇ ಧರಂಸಿಂಗ್ ಸಿಎಂ ಆಗಲಿ ಅಂದಿದ್ದರು. **No** ಅನ್ನುವುದೇ ಗೊತ್ತಿರದ ಧರಂಸಿಂಗ್ ಎಲ್ಲರಿಗೂ ಮೇಯಲು ಬಿಟ್ಟು ತಾವೂ ಸಿಕ್ಕಷ್ಟು ತಿಂದು ನಿರಾಳವಾಗಿದ್ದರು. ಕೊನೆಗೆ ಅದೇ ಗೌಡರೆ ಕ್ಷಿಪ್ರ ಪಿತೂರಿ ನಡೆಸಿ **no support** ಅಂದಾಗಲೂ ಧರಂಸಿಂಗ್ ಬೇಸರಿಸಿಕೊಂಡಿರಲಿಲ್ಲ.

ಈಗೇನಾಗಿದೆ ನೋಡಿ.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕನಾಗಿರುವ ಧರಂಸಿಂಗ್ ಕೋ-ಜಾ ಸರ್ಕಾರದ ಒಂದೇ ಒಂದು ವೈಫಲ್ಯವನ್ನೂ ಎತ್ತಿ ತೋರಿಸುತ್ತಿಲ್ಲ. ಬರ ಇರಲಿ, ನೆರೆ ಬರಲಿ, ಸಾಲುಸಾಲಾಗಿ ರೈತರ ಹೆಣ ಬೀಳಲಿ, ಪೊಲೀಸರು ಗಿರಿಜನರನ್ನು ಗುಂಡಿಟ್ಟು ಸಾಯಿಸಲಿ, SEZ ಗಳು ಬರಲಿ, ದಳ ಬಿಜೆಪಿ ನಾಯಕರುಗಳು ಎಷ್ಟೇ ಸಾವಿರ ಕೋಟಿ ಲೂಟಿ ಹೊಡೆಯಲಿ... ಉಹುಂ ಒಬ್ಬ ಧರಂಸಿಂಗ್ ಮಾತ್ರ ಬಾಯಿ ತೆಗೆಯುವುದಿಲ್ಲ.

ಮೊನ್ನೆ ಸಿದ್ದರಾಮಯ್ಯ, ಖರ್ಗೆ, ಡಿಕೆ ಎಲ್ಲಾ ನಂದಗುಡಿಗೆ ಹೋಗಿ SEZ ವಿರುದ್ಧ ಪ್ರತಿಭಟನಾ ಸಭೆ ಮಾಡಿ ಬಂದರೆ ಇತ್ತ ಧರಂಸಿಂಗ್, 'SEZ ಹಾಗೂ ರೈತರ ಭೂಸ್ವಾಧೀನಕ್ಕೆ ನಮ್ಮ ಆಕ್ಷೇಪಣೆ ಇಲ್ಲ' ಎಂದು ಸದನದಲ್ಲೇ ಹೇಳಿಕೆ ನೀಡಿಬಿಟ್ಟರು.

ಗೌಡ ಮತ್ತವರ ಕುಟುಂಬದವರ ಬಗ್ಗೆ ಧರಂಸಿಂಗ್‌ಗೆ ಯಾಕಿಂತ ನಿಷ್ಠೆ, ಭಯ ಭಕ್ತಿ ಎಂಬುದಂತೂ ತನಿಖೆಗೆ ಯೋಗ್ಯವಾದ ಸಂಗತಿಯಲ್ಲವೆ? ಈಚೆಗಂತೂ ಕಾಂಗ್ರೈಗಳೇ "ನಮ್ಮ ಧರಂಸಿಂಗ್ ಒಂಥರಾ ಗೌಡರ ಏಜೆಂಟ್ ಇದ್ದಂತೆ" ಅಂತಾ ಗೇಲಿ ಮಾಡುತ್ತಿದ್ದಾರೆ ಟ್ರಾಜೆಡಿ ಏನೆಂದರೆ ಧರಂಸಿಂಗ್ ಅದಕ್ಕೂ 'No' ಅನ್ನುವುದಿಲ್ಲ.

ಹೀಗಾಗಿ ಧರಂಸಿಂಗ್ ಬದಲು ಸಿದ್ದರಾಮಯ್ಯನವರನ್ನೇ ವಿರೋಧ ಪಕ್ಷದ ನಾಯಕರನ್ನಾಗಿ ಹೈಕಮಾಂಡ್ ನೇಮಿಸುವ ಸಾಧ್ಯತೆ ಇದೆ. ಗೌಡರ ಜತೆ ಮೈತ್ರಿ ಆಗದಿದ್ದರೆ!

ಂಜನೇಯು ಗೌಡರ ಫ್ಯಾಮಿಲಿಗೆ ಈಗ ಎಷ್ಟು ತ್ತಿರವೆಂದರೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ೀಣಾಳ್ ಭೀಮಪ್ಪ ಚೇರ್ಮನ್ ಆಗಿದ್ದೇ ಆಂಜನೇಯ ಫಾರಸ್ಸಿನಿಂದಾಗಿ.

ಹೀಗೆ ಕುಮಾರಸ್ವಾಮಿ ಶಂಕರಲಿಂಗೇಗೌಡರನ್ನು ೇಟಿಯಾಗಿ ಬರುವುದು, ದೇವೇಗೌಡ ುಖ್ಯಮಂತ್ರಿ ಚಂದ್ರು ಮನೆಗೆ ೋಗಿ ಬರುವುದು, ಅದರಲ್ಲೂ ೇಕಂತಲೇ ಎಲ್ಲರಿಗೂ ೊತ್ತಾಗುವಂತೆ ಹೋಗಿ ಮಾತಾಡಿ ರುತ್ತಿರುವುದೆಲ್ಲಾ ಹುಡುಗಾಟಕ್ಕೆ ಡೆಯುತ್ತಿಲ್ಲ. ಅಲ್ಲಿ ಒಬ್ಬ ಯಡ್ಡಿ ರೋಧಿ ಶಾಸಕನ ಮನೆ ಾಗಿಲು ಗೌಡರಿಗೆ ೆರೆದುಕೊಂಡರೆ ಇಲ್ಲಿ ಯಡ್ಡಿ ಎಂ ಆಗುವ ಒಂದು ಬಾಗಿಲು ್ಲೋಸ್ ಆದಂತೆ.

ಈ ಬೆಳವಣಿಗೆಗಳನ್ನೆಲ್ಲಾ ನೋಡಿ ಚರಿಯಾಗಿರುವ ಯಡಿಯೂರಪ್ಪ ಗ ಕೆಲವು ಸ್ವಾಮಿಗಳು, ಲಿಂಗಾಯತ [illegible] ಗಳನ್ನು ಎತ್ತಿಕಟ್ಟುವ ಹತಾಶ [illegible] ಕೊಟ್ಟಿದ್ದಾರೆ. ಆದರೆ ಕೆಲವೇ ಕೆಲವು [illegible] ಮಠಾಧೀಶರ, ಲಿಂಗಾಯತ ವೇದಿಕೆಗಳಿಗೆ ೇವೇಗೌಡ ಕೇರ್ ಮಾಡುವಂತೆ ಕಾಣುತ್ತಿಲ್ಲ.

ಅಂತಿಮವಾಗಿ ಈ ತಕ್ಷಣದ ಗೊಂದಲಕ್ಕೆ ಸಿಗುವ ಅಂಶವೇನೆಂದರೆ....

ಗೌಡ-ಕಾಂಗ್ರೆಸ್ ಜೊತೆ ಪುನರ್ ಮೈತ್ರಿಯಾದರೆ ಎಂ.ವಿ. ರಾಜಶೇಖರನ್ ಸಿಎಂ ಆಗುತ್ತಾರೆ. ಒಂದು ವೇಳೆ ಬಿಜೆಪಿ ಜೊತೆಗಿನ ಮೈತ್ರಿ ಮುಂದುವರೆಯುವುದೇ ಆದಲ್ಲಿ ಈಶ್ವರಪ್ಪನವರು ಗೌಡರ ಕೈಗೊಂಬೆಯಂತೆ ಸಿಎಂ ಕುರ್ಚಿಯಲ್ಲಿ ಕೂರಲಿದ್ದಾರೆ. ದಳ, ಕಾಂಗ್ರೆಸ್, ಬಿಜೆಪಿ ಈ ಮೂರೂ ಪಕ್ಷಗಳೂ ಯಾವ ನಿರ್ಧಾರ ಮಾಡಿದರೆ ಲಾಭ ಜಾಸ್ತಿ ಎಂಬ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ. ಆದರೆ ಅಂತಿಮ ಫಲಿತಾಂಶಕ್ಕಾಗಿ ಅಕ್ಟೋಬರ್ 3 ರವರೆಗೇನೂ ಕಾಯಬೇಕಾಗಿಲ್ಲ.



ಶರದ್ ಪವಾರ್

ಈ ಆಷಾಢ ಮುಗಿಯುವ ವೇಳೆಯೊಳಗೆ ಗೌಡರು ಹಾರಿ ಬಿಡುತ್ತಿರುವ ಗಾಳಿಪಟಗಳ ಪೈಕಿ ಕೆಲವು ಗೋತಾ ಹೊಡೆದು, ಸೂತ್ರ ಸರಿ ಇರದವು ಕಿತ್ತು ಹೋಗಿರುತ್ತವೆ.

ಆಷಾಢದ ಗಾಳಿ ತಣ್ಣಗಾಗಿ ಕಾಂಗ್ರೆಸ್ ಗಾಳಿ ಏನಾದರೂ ಬೀಸಲು ಒಪ್ಪಿಕೊಂಡರೆ ಯಾವುದಾದರೂ ಒಂದು ಗಾಳಿಪಟ ಉಳಿಯಲಿದೆ.

ಸಿದ್ಧರಾಮಯ್ಯ ಬಿಎಸ್‌ಪಿಗೆ?



ಗೌಡರಿಗೆ ಕಾಂಗ್ರೆಸ್ ಮೈತ್ರಿಯ ಬಾಗಿಲು ತೆರೆದುಕೊಂಡ ದಿನವೇ ಸಿದ್ಧರಾಮಯ್ಯ ಬಹುಜನ ಸಮಾಜ ಪಕ್ಷದ ಬಾಗಿಲು ಬಡಿಯುತ್ತಾರೆ!

ಇದಂತೂ ನೂರಕ್ಕೆ ನೂರರಷ್ಟು ಸತ್ಯ.

ಸೋನಿಯಾರ ರಾಜಕೀಯ ಕಾರ್ಯದರ್ಶಿ ಅಹಮದ್ ಪಟೇಲ್ ಈಗಾಗಲೇ ಎರಡು ಸಾರಿ ಸಿದ್ದರಾಮಯ್ಯನವರನ್ನು ದೆಹಲಿಗೆ ಕರೆಸಿಕೊಂಡು ಮಾತಾಡಿದ್ದಾರೆ. ಆ ಚರ್ಚೆಗಳೆಲ್ಲವೂ ದಳ ಗೌಡ- ಕಾಂಗ್ರೈ ಪುನರ್ ಮೈತ್ರಿ ಬಗ್ಗೆಯೇ ಆಗಿದೆ. "ಕೇವಲ 20 ತಿಂಗಳು ಕಾದರೆ ಕಾಂಗ್ರೆಸ್ಸೆ ಪೂರ್ಣ ಅಧಿಕಾರ ಹಿಡಿಯುವ ಸಾಧ್ಯತೆ ಇರುವಾಗ ಈಗ್ಯಾಕೆ ಆತುರ ಪಟ್ಟು ಜೆಡಿಎಸ್‌ಗೆ ಜೀವ ಕೊಡುತ್ತೀರಿ" ಎಂದು ಸಿದ್ದು ಆಕ್ಷೇಪಿಸಿದ್ದಾರೆ. ದಳ-ಬಿಜೆಪಿಗಳಿಬ್ಬರೂ ಡಕಾಯಿತರಂತೆ ಇಡೀ ರಾಜ್ಯವನ್ನೇ ಲೂಟಿ ಮಾಡುತ್ತಿರುವಾಗ ಜನ ಮುಂದಿನ ಎಲೆಕ್ಷನ್‌ನಲ್ಲಿ ಸಹಜವಾಗೇ ಕಾಂಗ್ರೆಸ್‌ಗೆ ಬೆಂಬಲಿಸುತ್ತಾರೆ ಎಂದು ಸಿದ್ದರಾಮಯ್ಯ ಬಿಡಿಸಿ ಹೇಳಿದ್ದಾರೆ.



ಇಷ್ಟರ ನಂತರವೂ ಕಾಂಗ್ರೈ ಗೌಡರತ್ತ ಮೈತ್ರಿಯ ಕೈ ಚಾಚಿದರೆ ಅದೇ ಕ್ಷಣದಲ್ಲಿ ಸಿದ್ದರಾಮಯ್ಯ, ಜಾರಕಿಹೊಳಿ, ಡಾ. ಎಚ್.ಸಿ. ಮಹದೇವಪ್ಪ ಬಿಎಸ್‌ಪಿ ಸೇರಲಿದ್ದಾರೆ. ಅವರ ಜೊತೆಗೆ ಕೋದಂಡರಾಮಯ್ಯ, ಸಿಂಧ್ಯಾ, ಬಿ.ಆರ್. ಪಾಟೀಲ್, ವೈಜನಾಥ್ ಪಾಟೀಲರೂ ಬಿಎಸ್‌ಪಿ ಹಾದಿ ಹಿಡಿಯುವ ಸಾಧ್ಯತೆಯಿದೆ.

ಗೌಡರ ನೆಂಟಸ್ತಿಕೆಯಿಂದ ಕಾಂಗ್ರೆಸ್‌ಗೆ ಯಾವ ಲಾಭವಾಗಲಿದೆ ಎಂಬುದು ಗೊತ್ತಾಗಲು ಬಹಳ ಕಾಲ ಕಾಯಬೇಕು. ಆದರೆ ಅದರಿಂದಾಗುವ ನಷ್ಟದ ಪ್ರಮಾಣವಂತೂ ತಕ್ಷಣ ಗೊತ್ತಾಗುತ್ತದೆ.

ಬಿಎಸ್‌ಪಿ ಬೆಳೆಯುವುದನ್ನು ಕಾಂಗ್ರೆಸ್ ಬಯಸುವುದಿಲ್ಲವೆಂಬ ಸತ್ಯ ರಾಜಕಾರಣ ಬಲ್ಲವರಿಗೆ ಹೇಗೂ ಗೊತ್ತಿದೆ.

ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ

ರಾಯಚೂರು

ರಾಜ್ಯದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದಾಳಿಗಳ ಲಿಸ್ಟಿಗೆ ಇಲ್ಲಿ ಮತ್ತೊಂದು ಸೇರ್ಪಡೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಗುಡಿಹಾಳ ಗ್ರಾಮದಲ್ಲಿ ದಲಿತರ ವಿರುದ್ಧ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಸುಮಾರು ಐವತ್ತು ಮನೆಗಳಿರುವ, ಮುನ್ನೂರು ಜನಸಂಖ್ಯೆ ಇರುವ ದಲಿತರು ತಮ್ಮ ಕೇರಿಯನ್ನು ಪ್ರವೇಶಿಸಿ ಒಂದು ತಿಂಗಳಾಗುತ್ತಾ ಬರುತ್ತಿದ್ದರೂ ಯಾವ ರಾಜಕಾರಣಿಯೂ ಅತ್ತ ನೋಡಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಗುಡಿಹಾಳದಲ್ಲಿ ದಲಿತರಿಗೆ ಇವತ್ತಿಗೂ ದೇವಸ್ಥಾನದಲ್ಲಿ ಪ್ರವೇಶವಿಲ್ಲ. ಆದರೆ ದೇವಸ್ಥಾನದ ಧಾರ್ಮಿಕ ಕಾರ್ಯಕ್ರಮಗಳಿಗೆ, ಜೀರ್ಣೋದ್ಧಾರಕ್ಕೆ, ಸಭೆ-ಸಮಾರಂಭಗಳಿಗೆ ಮಾತ್ರ ಜಾತಿ ಎಂಬ ಬೇಧಭಾವ ವಿಲ್ಲದೆ ಹಣ ತೆತ್ತಲೇಬೇಕು! ಅಷ್ಟೇ ಅಲ್ಲ, ಅಲ್ಲಿನ ಹೋಟೆಲ್ಲಿಗೂ ಅಸ್ಪೃಶ್ಯರಿಗೆ ಪ್ರವೇಶ ನಿಷಿದ್ಧ. ಇನ್ನು ಊರಿನ ಬಾವಿಯಿಂದ ನೀರು ತರುವುದಂತೂ ದೂರದ ಮಾತು.

ಇಲ್ಲಿನ ದಲಿತರ ಪರಿಸ್ಥಿತಿ ಎಂತಹದ್ದೆಂದರೆ, ಮುನ್ನೂರು ಮಂದಿ ಜನಸಂಖ್ಯೆ ಇದ್ದರೂ ಅವರಲ್ಲಿ ಕೇವಲ ಇಪ್ಪತ್ತು ಮಂದಿ ಮಾತ್ರ ಶಾಲೆಯ ಮೆಟ್ಟಿಲನ್ನು ಕಂಡವರು. ಆದರೆ ಅದರಿಂದ ಅವರಿಗೇನೂ ಪ್ರಯೋಜನವಾಗದೆ ಇವತ್ತು ಅವರೆಲ್ಲ ನಿರುದ್ಯೋಗಿಗಳಾಗಿದ್ದಾರೆ. ಇಲ್ಲಿ ಒಬ್ಬೇ ಒಬ್ಬ ಸರಕಾರಿ ನೌಕರಿ ಪಡೆದ ಅದೃಷ್ಟವಂತ! ಈ ಗ್ರಾಮದ ಕೆಲವೇ ದಲಿತರು ಭೂಮಿಯನ್ನು ಹೊಂದಿದ್ದು, ಹೆಚ್ಚಿನವರು ತಮ್ಮ ಹೊಟ್ಟೆಪಾಡಿಗೆ ಸವರ್ಣೀಯರನ್ನೇ ಅವಲಂಬಿಸಿದ್ದಾರೆ.



ಚಹಾ ಕೇಳಿದ್ದೇ ಅಪರಾಧ

ಕಳೆದ ತಿಂಗಳು ಗುಡಿಹಾಳದ ಹತ್ತಿರವಿರುವ ಹಳ್ಳಿಯೊಂದರಲ್ಲಿ ದಲಿತನೋರ್ವ ಮೃತನಾದಾಗ ದೂರದೂರಿನಿಂದ ಆತನ ಸಂಬಂಧಿಗಳು ಶವಸಂಸ್ಕಾರಕ್ಕೆಂದು ಬಂದಿದ್ದರು. ಅಂತ್ಯಸಂಸ್ಕಾರಗಳು ತಡವಾದಾಗ, ದೂರದಿಂದ ಬಂದಿದ್ದವರಿಗೆ ಹಸಿವಾಗಿದೆ. ಆ ಹಳ್ಳಿಯಲ್ಲಿ ಹೋಟೆಲ್ ಇಲ್ಲದ ಕಾರಣ ಗುಡಿಹಾಳದಲ್ಲಿರುವ ಹೋಟೆಲ್‌ಗೆ ಬಂದಿದ್ದಾರೆ.

ಹಸಿವಿನಿಂದ ಪರದಾಡುತ್ತಿದ್ದ ದಲಿತರು ಬಂದ ತಕ್ಷಣ ಸವರ್ಣೀಯ ಹೋಟೆಲ್ ಮಾಲೀಕ "ತಿಂಡಿ ಎಲ್ಲಾ ಖಾಲಿಯಾಗಿದೆ. ಹೋಟೆಲ್ ಬಂದ್ ಮಾಡುತ್ತೇವೆ" ಎಂದು ಅವರೆಲ್ಲರನ್ನು ಹೊರಗೆ ಕಳಿಸಿ ಬಾಗಿಲು ಹಾಕಿದ್ದಾನೆ. ಈ ಪ್ರಕರಣ ಗುಡಿಹಾಳದ ದಲಿತರನ್ನು ಕೆರಳಿಸಿದೆ. ಈ ಅನಿಷ್ಟ ಪದ್ಧತಿಯಿಂದಾಗಿಯೇ ಹೀಗಾದದ್ದು ಎಂದು ಅರಿತು ಅದನ್ನು ಕೊನೆಗಾಣಿಸಲು ಮುಂದಾಗಿದ್ದಾರೆ. "ಇನ್ನು ಮುಂದೆ ನಮಗೂ ಹೋಟೆಲ್‌ನಲ್ಲಿ ನಾಷ್ಟಾ, ಚಹಾ ಕೊಡಿ" ಎಂದು ಹೋಟೆಲ್ ಪ್ರವೇಶಿಸಿದ್ದಾರೆ. ಈ ಬಂಡಾಯದಿಂದ ಸವರ್ಣೀಯರಿಗೆ ಮರ್ಮಾಘಾತವಾದಂತಾಗಿ ಎರಡು ಸಮುದಾಯಗಳ ನಡುವೆ ತಿಕ್ಕಾಟ ಶುರುವಾಗಿದೆ.

ಅವರ ಬಂಡಾಯ ಸವರ್ಣೀಯರ ಮೇಲೆ ಯಾವ ಪ್ರಭಾವವನ್ನೂ ಬೀರಿಲ್ಲ. ಹೀಗೆ ಒಂದು ವಾರ ಕಳೆದ ನಂತರ ಕೆಲವು ದಲಿತರು "ನಾವೂ ಮನುಷ್ಯರೇ. ನಮಗೂ ದೇವಸ್ಥಾನ ಮತ್ತು ಹೋಟೆಲ್‌ಗೆ ಪ್ರವೇಶ, ಬಾವಿಯಿಂದ ನೀರು ಪಡೆಯುವ ಅವಕಾಶ ಬೇಕು" ಎಂದು ಒತ್ತಾಯಿಸಿದ್ದಾರೆ. ಅವತ್ತೇ ರಾತ್ರಿ ಸವರ್ಣೀಯರೆಲ್ಲರೂ ಸಭೆ ಸೇರಿದ್ದಾರೆ. ಅವರ ಮುಖಂಡರು "ಇನ್ನ ಮುಂದ ಎಸ್.ಸಿ. ಮಂದಿ ಊರಾಗ ಬಂದ್ರ ಕಡಿದ ಬಡ್ರಿ. ನಾವ್ ನೋಡ್ಕೋತೀವಿ" ಎಂದರೆ, ಕೆಲವರು ದಲಿತರ ಕೇರಿಯನ್ನೇ ಸುಡಲು ತಯಾರಾಗಿದ್ದಾರೆ. ಈ ಸಭೆಯ ತೀರ್ಮಾನಗಳು ಹೇಗೋ ದಲಿತರಿಗೆ ಗೊತ್ತಾಗಿ ಭಯಭೀತರಾಗಿದ್ದಾರೆ. ಪರಿಣಾಮವಾಗಿ ಮರುದಿನದಿಂದ ಊರೊಳಗೆ ಯಾವ ದಲಿತನೂ ಹೆಜ್ಜೆ ಇಡಲಿಲ್ಲ.

ಹೀಗೆಯೇ ಮತ್ತೊಂದು ವಾರ ಕಳೆದಿದೆ. ಕೊನೆಗೆ ಭಯ ಮತ್ತು ಅವಮಾನ ಸಹಿಸಲು ಅಸಾಧ್ಯವಾಗಿ ದಲಿತ ಮುಖಂಡರು ಪೊಲೀಸರಿಗೆ ದೂರು ನೀಡಿದ್ದಾರೆ. ಆಗ ಹಳ್ಳಿಗೆ ಬಂದ ಪೊಲೀಸರು ಸವರ್ಣೀಯರ ವಿರುದ್ಧ ಕಾನೂನುಪ್ರಕಾರ ಕ್ರಮ ತೆಗೆದುಕೊಳ್ಳದೆ ಸಂಧಾನದ ನಾಟಕವಾಡಿದ್ದಾರೆ. ಆದರೆ ಅದಕ್ಕೂ ಜಗ್ಗದ ಸವರ್ಣೀಯರು "ಬೇಕಾದ್ರ ನಮ್ ಹೋಟೆಲ್‌ನ್ನು ಮುಚ್ಚತೀವಿ, ಆದ್ರ ಎಸ್.ಸಿ. ಮಂದಿಗೆ ಚಹಾ ಕೊಡಲ್ಲ" ಎಂದು ವಾದಿಸಿದ್ದಾರೆ.

ಕಬಡ್ಡಿ ಆಡುತ್ತಿರುವ ದಲಿತ ಮಂತ್ರಿ

ಎಂತಹ ವಿಪರ್ಯಾಸ ನೋಡಿ. ಈ ಘಟನೆ ನಡೆದು ಸುಮಾರು ಒಂದು ತಿಂಗಳಾದರೂ ರಾಯಚೂರು ಜಿಲ್ಲಾ ಉಸ್ತುವಾರಿ ಮಂತ್ರಿ ಆಲ್ಕೋಡ್ ಹನುಮಂತಪ್ಪ ಗುಡಿಹಾಳದ ಕಡೆ ಕಣ್ಣು ಕೂಡ ಹಾಯಿಸಿಲ್ಲ. ಆಲ್ಕೋಡ್ ಹನುಮಂತಪ್ಪನೂ ಜಾತಿಯಿಂದ ದಲಿತನೇ. ಬಹಿಷ್ಕಾರದ ಈ ಘಟನೆ ನಡೆದಾಗ, ಇದರ ವಿರುದ್ಧ ಸಮಾಜಿಕ ಸಂಘಟನೆಗಳು ಪ್ರತಿಭಟಿಸುತ್ತಿದ್ದಾಗ, ಮಂತ್ರಿಮಹಾಶಯರು ಮಾತ್ರ ದೇಶದೆಲ್ಲೆಡೆಯಿಂದ ಬಂದಿದ್ದ ಕಬಡ್ಡಿ ಆಟಗಾರರ ನಡುವಿನ ಪಂದ್ಯವನ್ನು ನೋಡುತ್ತಾ ಕಾಲ ಕಳೆದರು.

ದಲಿತರನ್ನು ದಲಿತರೇ ಶೋಷಿಸುತ್ತಿದ್ದಾರೆ ಎನ್ನುವುದಕ್ಕೆ ಇದೊಂದೇ ಉದಾಹರಣೆ ಸಾಕು. ಮುಂದುವರಿದ ದಲಿತ, ರಾಜಕಾರಣಿಗಳು, ಅಧಿಕಾರಿಗಳು, ಬುದ್ಧಿವಂತರು ಹಿಂದುಳಿದ ದಲಿತರನ್ನು ಶೋಷಿಸುತ್ತಿದ್ದಾರೆ. ಇನ್ನಾದರೂ ಗುಡಿಹಾಳ ಸಮಸ್ಯೆಯನ್ನು ಅರಿತು ಸಾಮರಸ್ಯಕ್ಕಾಗಿ, ಸಮಾನತೆಗಾಗಿ ಆಲ್ಕೋಡ್ ಹನುಮಂತಪ್ಪ ಕೆಲಸ ಮಾಡಲಿ. ಇಲ್ಲವಾದರೆ ದಲಿತರೇ ಅವನನ್ನು ಬಹಿಷ್ಕರಿಸುವ ದಿನ ದೂರವಿಲ್ಲ.

-ವರದಿಗಾರ



ಬಿಜಾಪುರದ ಟ್ಯೂಷನ್ ಮಾಫಿಯಾ


ಉತ್ತರ ಕರ್ನಾಟಕದ ಬಿಜಾಪುರದಲ್ಲಿ ಶಿಕ್ಷಣದ ಪ್ರಗತಿ ಕುಂಟುತ್ತಾ ಸಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಅಲ್ಲಿನ ಉಪನ್ಯಾಸಕರು ವ್ಯವಸ್ಥಿತವಾಗಿ ವಿದ್ಯಾರ್ಥಿಗಳ ಸುಲಿಗೆಗಿಳಿದುಬಿಟ್ಟಿದ್ದಾರೆ. ಇಡೀ ನಗರದಾದ್ಯಂತ ನಾಯಿಕೊಡೆಗಳಂತೆ ತಲೆ ಎತ್ತಿರುವ ಟ್ಯೂಷನ್ ಅಡ್ಡೆಗಳೇ ಇದಕ್ಕೆ ಸಾಕ್ಷಿ.

ಒಂದು ಕಡೆಯಿಂದ ಲೆಕ್ಕ ಹಾಕಿದರೆ ಬಿಜಾಪುರವೊಂದರಲ್ಲಿಯೇ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚಿನ ಟ್ಯೂಷನ್ ಅಡ್ಡೆಗಳಿವೆ. ಅದರಲ್ಲಿ ಶೇ. 80ರಷ್ಟು ಕ್ಲಾಸುಗಳು ನಡೆಯುವುದು ಪಿಯುಸಿಯ ಸೈನ್ಸ್ ವಿದ್ಯಾರ್ಥಿಗಳಿಗಾಗಿ. ಈ ಪ್ರತೀ ಅಡ್ಡೆಯೂ ರೆಗ್ಯೂಲರ್ ಮತ್ತು ವೆಕೇಶನ್ ಎಂದು ವರ್ಷಕ್ಕೆ ಎರಡು ಬ್ಯಾಚ್‌ಗಳನ್ನು ನಡೆಸುತ್ತವೆ. ಕೇವಲ ನಾಲ್ಕು ತಿಂಗಳು ನಡೆಯುವ ಈ ಕ್ಲಾಸುಗಳಿಗೆ ಪ್ರವೇಶ ಪಡೆಯಲು ಪ್ರತೀ ವಿದ್ಯಾರ್ಥಿ 1500 ರಿಂದ 2500 ರೂ.ಗಳ ತನಕ ತೆರಬೇಕು.

ಸರ್ಕಾರಿ ಉಪನ್ಯಾಸಕರು ಟ್ಯೂಷನ್ ನಡೆಸಕೂಡದು ಎಂಬ ನಿಯಮವಿದ್ದರೂ ಅದನ್ನೆಲ್ಲಾ ಗಾಳಿಗೆ ತೂರಿ ಸರ್ಕಾರಿ ಉಪನ್ಯಾಸಕರೇ ಈ ಹಗಲು ದರೋಡೆಗಿಳಿದಿದ್ದಾರೆ. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬೆನಕಟ್ಟಿ, ಪೂಜಾರಿ, ಸಿ.ಬಿ. ನಾಟೀಕಾರ್, ಸಂಗಮೇಶ್ ಬಡಿಗೇರ್, ಪುರುಷೋತ್ತಮ್, ಹೊಸಮನಿ ಇವರೆಲ್ಲರಿಗೂ ಕೈತುಂಬಾ ಸಂಬಳ ಸಿಗುತ್ತಿದ್ದರೂ ಅದು ಸಾಕಾಗದೆಂಬಂತೆ ಟ್ಯೂಷನ್ ದಂಧೆಗಿಳಿದು ವಿದ್ಯಾರ್ಥಿಗಳನ್ನು ದೋಚಲು ನಿಂತುಬಿಟ್ಟಿದ್ದಾರೆ. ಇನ್ನೂ ಒಂದು ದುರಂತ ಎಂದರೆ, ವಿದ್ಯಾರ್ಥಿಗಳು ಟ್ಯೂಷನ್‌ಗೆ ಬರಲಿ ಎಂದು ಕಾಲೇಜಿನಲ್ಲಿ ಸರಿಯಾಗಿ ಪಾಠವನ್ನೇ ಮಾಡುವು[...]ದಿಲ್ಲ, ಯಾರಾದರೂ ಪ್ರಶ್ನಿಸಿದರೆ '[...]ಟ್ಯೂಷನ್‌ಗೆ ಬನ್ನಿ ಅಲ್ಲಿಯೇ ವಿವರವಾಗಿ, ಚೆನ್ನಾಗಿ ಹೇಳಿ[...] ಕೊಡುತ್ತೇವೆ' ಎಂದು ನಾಚಿಕೆ[...] ಬಿಟ್ಟು ಹೇಳುತ್ತಾರೆ. ಅಷ್ಟೇ ಅಲ್ಲ[...] ತಮ್ಮ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳು ತಮ್ಮ ಬಳಿಯೇ ಟ್ಯೂಷನ್‌ಗೆ ಬರಬೇಕೇ ವಿನಃ ಬೇರೆ ಯಾರ ಬಳಿಯೂ ಹೋಗ[...] ಕೂಡದು ಎಂದು ಫರ್ಮಾನು ಹೊರಡಿಸಿದ್ದಾರೆ. ಹಾಗೊಂದು ವೇಳೆ ಯಾವುದೇ ವಿದ್ಯಾರ್ಥಿ ಬೇರೆ ಕಾಲೇಜಿನ ಉಪನ್ಯಾಸಕರ ಬಳಿ ಹೋಗುವ ಧೈರ್ಯ[...] ಮಾಡಿದರೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹಿಂಸೆ ನೀಡುತ್ತಾರೆ.

ಸರ್ಕಾರಿ ಕಾಲೇಜಿನ ಉಪನ್ಯಾಸಕರೇ ಈ ರೀತಿ ವಿದ್ಯಾರ್ಥಿಗಳನ್ನು ಸುಲಿದು ಲಕ್ಷ ಲಕ್ಷ ಕಮಾಯಿಸು[...]ತ್ತಿದ್ದಾರೆಂದರೆ ಉಳಿದವರನ್ನು ಕೇಳಬೇಕೆ? ಅವರೂ ನಾ[...] ಮುಂದು, ತಾ ಮುಂದು ಎಂದು ವಿದ್ಯಾರ್ಥಿಗಳನ್ನು ಸುಲಿಯುವ ಘನಂದಾರಿ ಕೆಲಸ[...]ದಲ್ಲಿ ರೇಸಿಗಿಳಿದಿದ್ದಾರೆ. ಪಿ.ಡಿ.ಜೆ[...] ಮಹಾವಿದ್ಯಾಲಯದ ಎ.ಡಿ. ದೇಶಪಾಂಡೆ ಎಂಬ ಉಪನ್ಯಾಸ[...] ತನ್ನ ಮನೆಯನ್ನೇ ಟ್ಯೂಷನ್ ಅಡ್ಡೆಯನ್ನಾಗಿ ಮಾಡಿಕೊಂಡಿ[...]ದ್ದಾನೆ. ಇವನ ರೇಟು ಸರ್ಕಾರಿ ಕಾಲೇಜು ಉಪನ್ಯಾಸಕರಿಗಿಂತ ಕೊಂಚ ಜಾಸ್ತಿ. ಇದೇ ಕಾಲೇಜಿನ ಹೆಗಡೆ, ಪುರಾಣಿಕ[...] ಎಂಬುವವರದು ಅವನಿಗಿಂತ ಕಡಿಮೆ.

ಆದಿಗೊಂಡ ಮತ್ತು ನಂದಿಹಾಳ ಎಂಬ ಉಪನ್ಯಾಸಕರು ನಗರದ ಜನನಿಬಿಡ ಪ್ರದೇಶದಲ್ಲಿ ದೊಡ್ಡ ಹಾಲ್‌ವೊಂದನ್ನು ಬಾಡಿಗೆಗೆ ಪಡೆದು ದೊಡ್ಡ ಆಡ್ಡೆಯನ್ನು ಸ್ಥಾಪಿಸಿ[...]




ಬೆನಕಟ್ಟಿ ಸಂಗಮೇಶ್ ಬಡಿಗೇರ

ದರೋಡೆ ಮಾಡಿದ್ದು ನಕ್ಸಲರಲ್ಲವಾದರೆ ಅದನ್ನು ಮಾಡಿದ್ಯಾರು?

ಕಳೆದ ಒಂದು ತಿಂಗಳಿಂದ ರಾಜ್ಯಾದ್ಯಂತ ನಕ್ಸಲರದೇ ಸುದ್ದಿ. ಒಂದು ಕಡೆ ಪೊಳ್ಳು ಎನ್‌ಕೌಂಟರ್‌ನಲ್ಲಿ ಆದಿವಾಸಿಗಳನ್ನು ಕೊಂದಿದ್ದು, ಇನ್ನೊಂದು ಕಡೆ ನಕ್ಸಲ್ ನಿಗ್ರಹ ಪಡೆಯ ವೆಂಕಟೇಶ್ ಸತ್ತಿದ್ದು, ಮತ್ತೊಂದೆಡೆ ನಕ್ಸಲರು ಮಲೆನಾಡಿನ ದಟ್ಟ ಅರಣ್ಯದಲ್ಲಿರುವ ಒಂಟೊಂಟಿ ಮನೆಗಳಿಗೆ ನುಗ್ಗಿ ದರೋಡೆ ಮಾಡುತ್ತಿದ್ದಾರೆಂಬುದು. ನಕಲಿ ಎನ್‌ಕೌಂಟರ್‌ಗೆ ಸಂಬಂಧಿಸಿದಂತೆ ಪತ್ರಕರ್ತರು ಮತ್ತು ಸತ್ಯಶೋಧನಾ ತಂಡಗಳು ಒಳಗೊಂಡಂತೆ ಅನೇಕರು ಸ್ಥಳಕ್ಕೆ ಭೇಟಿ ನೀಡಿ ಬಂದದ್ದರಿಂದ ಅದೊಂದು ಕಗ್ಗೊಲೆ ಎಂಬುದು ಹೊರ ಪ್ರಪಂಚಕ್ಕೆ ಚೆನ್ನಾಗಿಯೇ ತಿಳಿಯಿತು.

ಆದರೆ, ದರೋಡೆಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರಣವೇ ಇರಲಿಲ್ಲ. ಅದನ್ನು ನಿಜಕ್ಕೂ ನಕ್ಸಲರೇ ಮಾಡಿದರೆ? ಅಥವಾ ಬೇರೆ ಯಾರೋ ಮಾಡಿ ಅದನ್ನ ನಕ್ಸಲರ ತಲೆಗೆ ಕಟ್ಟುತ್ತಿದ್ದಾರೆಯೇ? ಹಿಂದೆಲ್ಲ ಇಲ್ಲದ ದರೋಡೆ ಪ್ರಕರಣಗಳು ದಿಢೀರ್ ಎಂದು ನಕಲಿ ಎನ್‌ಕೌಂಟರ್ ಆದ ತಕ್ಷಣವೇ ಏಕೆ ಶುರುವಾದವು? ಎಂಬಿತ್ಯಾದಿ ಪ್ರಶ್ನೆಗಳು ಮಾತ್ರ ಹಾಗೇ ಉಳಿದಿದ್ದವು. ಇವೆಲ್ಲವುಗಳಿಗೆ ನಕ್ಸಲರೇ ಈಗ ಪತ್ರದ ಮೂಲಕ ಉತ್ತರ ಕೊಟ್ಟಿದ್ದಾರೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)ದ ಮಲೆನಾಡು ದಕ್ಷಿಣ ಪ್ರದೇಶ ವಲಯ ಸಮಿತಿಯ ಲೆಟರ್ ಹೆಡ್‌ನಲ್ಲಿ ಕೈಬರಹದಲ್ಲಿ ಬರೆದಿರುವ ಈ ಪತ್ರ (23/07/2007) ನಮ್ಮ ಆಫೀಸಿಗೆ 27/07/2007 ರಂದು ತಲುಪಿದೆ. ಪ್ರಾಯಶಃ ಇನ್ನಿತರ ಎಲ್ಲ ಪತ್ರಿಕೆಗಳಿಗೂ ಇದೇ ಪತ್ರವನ್ನು ಅವರು ಕಳಿಸಿದ್ದಿರಬೇಕು. ಇದರಲ್ಲಿ ಆಗುಂಬೆ ಬಳಿ ನಡೆದ ನಾಲ್ಕು ಮನೆಗಳ ದರೋಡೆಗಳನ್ನು ತಾವು ಮಾಡಿಲ್ಲವೆಂದೂ, ದರೋಡೆಗೊಳಗಾದವರು ಯಾವ ವರ್ಗಕ್ಕೆ ಸೇರಿದವರೆಂಬುದು ತಮಗೆ ಗೊತ್ತಿಲ್ಲವೆಂದೂ, ಅದನ್ನು ನಡೆಸಿರುವವರು ಯಾರೆಂಬುದರ ಬಗ್ಗೆಯೂ ತಮಗೆ ಅರಿವಿಲ್ಲವೆಂದೂ, ಹಾಗೆಯೇ ಈ ದರೋಡೆಗಳನ್ನು ತಾವು ಖಂಡಿಸುತ್ತೇವೆಂದೂ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೇ, "ನಾವು ಮಾಡಿದ್ದೆಲ್ಲವನ್ನೂ ಬಹಿರಂಗವಾಗಿಯೇ ಒಪ್ಪಿಕೊಳ್ಳುತ್ತೇವೆ, ತಪ್ಪು ಮಾಡಿದರೂ ಬಹಿರಂಗವಾಗಿಯೇ ಜನರ ಕ್ಷಮೆ ಯಾಚುತ್ತೇವೆ" ಎಂದೂ ಅವರು ಪತ್ರದಲ್ಲಿ ಹೇಳಿದ್ದಾರೆ.


ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
ವಲಯ ಸಮಿತಿ
ದಕ್ಷಿಣ ಪ್ರದೇಶ

ನಕ್ಸಲರು ಹೇಳುವುದರಲ್ಲಿ ಒಂದು ಸತ್ಯಾಂಶವಿದೆ. ಇಲ್ಲಿಯವರೆಗೆ ಅವರು ಮಾಡಿದ್ದೆಲ್ಲವನ್ನೂ ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಅವರ ನಾಯಕ ಸಾಕೇತ್ ರಾಜನ್‌ನನ್ನು ಪೊಲೀಸರು ಕೊಂದು ಹಾಕಿದ ಮೇಲೆ ಪೊಲೀಸರಿಗೆ ಸಾಕೇತ್ ರಾಜನ್ ಬಗ್ಗೆ ಮಾಹಿತಿ ನೀಡಿದ್ದಕ್ಕಾಗಿ ಶೇಷೇಗೌಡ ಎಂಬ ಪೊಲೀಸ್ ಮಾಹಿತಿದಾರನನ್ನು ಅವರು ಗುಂಡಿಟ್ಟು ಕೊಂದರು. ಅದನ್ನು ಅವರು ಬಹಿರಂಗವಾಗಿಯೇ ಒಪ್ಪಿಕೊಂಡರು. ಸಾಕೇತ್ ರಾಜನ್ ನಂತರದ ಅವರ ರಾಜ್ಯ ಸಮಿತಿಯ ನಾಯಕ ಸಂಧೇ ರಾಜಮೌಳಿಯನ್ನು ಆಂಧ್ರ ಪೊಲೀಸರು ಕೊಂದು ಹಾಕಿದಾಗ ಅದಕ್ಕೆ ಪ್ರತೀಕಾರವಾಗಿ ಅವರು ಆಗುಂಬೆ ಬಳಿ ಬಸ್ ಒಂದಕ್ಕೆ ಬೆಂಕಿ ಇಟ್ಟರು. ಅದನ್ನೂ ಅವರು ತಾವೇ ಮಾಡಿದ್ದಾಗಿ ಒಪ್ಪಿಕೊಂಡರು. ಅದೇ ಸಮಯದಲ್ಲಿ ಶೃಂಗೇರಿ ಬಳಿ ಇನ್ನೊಂದು ಬಸ್‌ಗೆ ಬೆಂಕಿ ಹಚ್ಚಿದ ಪ್ರಕರಣ ನಡೆದಾಗ ಅದನ್ನು ಮಾಡಿದವರು ತಾವಲ್ಲ, ಭಜರಂಗದಳದವರು ಎಂದು ಹೇಳಿದರು. ನಕ್ಸಲರು ಮಾಡಿರುವ ತಪ್ಪಿಗೆ ಬಹಿರಂಗವಾಗಿ ಸಾರ್ವಜನಿಕವಾಗಿ ಕ್ಷಮೆ ಯಾಚಿದ ಅದೆಷ್ಟೋ ಪ್ರಕರಣಗಳು ಆಂಧ್ರದಲ್ಲೂ ನಡೆದಿವೆ.

ಅಷ್ಟೇ ಏಕೆ, ಈಗ ಬಂದಿರುವ ಪತ್ರದಲ್ಲೂ ಅವರು ಮಾಡಿದ್ದನ್ನು ಒಪ್ಪಿಕೊಂಡಿದ್ದಾರೆ. ಅವರ ಒಂದು ಸಶಸ್ತ್ರ ದಳ ಕೇಶವ ಹೆಗ್ಡೆ ಎಂಬುವವರ ಮನೆಗೆ ನುಗ್ಗಿ ಒಂದು ತೋಟಾ ಕೋವಿ, ಎರಡು ತೋಪು ಮತ್ತು 52,755 ರೂಪಾಯಿಗಳನ್ನು ಎತ್ತಿಕೊಂಡು ಹೋಗಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಮಾತ್ರವಲ್ಲ, ಅದನ್ನು ಸಮರ್ಥಿಸಿಕೊಂಡಿದ್ದಾರೆ. ಅದಕ್ಕೆ ಅವರು ಕೊಡುವ ಕಾರಣ: "ಆ ಹಣ ಕೇಶವ ಹೆಗ್ಡೆ ಬೆವರು ಸುರಿಸಿ ದುಡಿದದ್ದಲ್ಲ, ಬದಲಾಗಿ ಅಮಾಯಕ ಗಿರಿಜನರನ್ನು, ಕೂಲಿ ಕಾರ್ಮಿಕರನ್ನು ಶೋಷಣೆ ಮಾಡಿ ಗಳಿಸಿದ್ದು. ಒಂದು ವೇಳೆ ಜನಪರ ಮತ್ತು ಪ್ರಾಮಾಣಿಕ ಲೋಕಾಯುಕ್ತರೇ ಅವನ ಮನೆಗೆ ದಾಳಿ ಮಾಡಿದ್ದರೂ ಆ ಹಣವನ್ನು ಸೀಜ್ ಮಾಡುತ್ತಿದ್ದರು" ಎಂದು. ವಿಶೇಷ ಎಂದರೆ, ಮನೆಯಲ್ಲಿ ಸಿಕ್ಕಿರುವ ಹಣದಲ್ಲಿ 10,000 ರೂಪಾಯಿಗಳನ್ನು ಕೇಶವ ಹೆಗ್ಡೆಗೆ ಹಿಂತಿರುಗಿಸಿದ್ದಾರೆ. ಇದು ದರೋಡೆಕೋರರ ಲಕ್ಷಣವೆ?

ಅಂದಹಾಗೆ, ಈ ಕೇಶವ ಹೆಗ್ಡೆ ಎಂತಹ ತಿಕ್ಕಲು ಮನುಷ್ಯನೆಂದರೆ ಕುಡಿದ ಅಮಲಿನಲ್ಲಿ ಆತ ಪೊಲೀಸರಿಗೆ ಫೋನ್ ಮಾಡಿ "ಠಾಣೆಯಲ್ಲೇನು ಹರಕೊತ್ತಿದ್ದೀರಿ? ನಮ್ಮ ಮನೆಯ ದನದ ಕೊಟ್ಟಿಗೆಯಲ್ಲಿ ಐವರು ನಕ್ಸಲರು ಅವಿತುಕೂತಿದ್ದಾರೆ. ಬಂದು ಅವರನ್ನ ಹಿಡೀರಿ" ಎಂದೆಲ್ಲ ಅರಚಿದ್ದುಂಟು. ಹಾಗೆಯೇ ತನ್ನ ಬಂದೂಕನ್ನು ಹಿಡಿದು ಊರಿನ ಜನರಿಗೆ ತನ್ನ ಹೆಂಡತಿಯನ್ನು ಬೆದರಿಸಿದ್ದೂ ಉಂಟು. ಈ ಕಾರಣ ಕ್ಕಾಗಿಯೇ ಹಳ್ಳಿಯವರು "ಪೊಲೀ[...]ಸರೇ, ಇವ ಯಾರನ್ನಾ ದರೂ ಕೊಲ್ಲುವ ಮುನ್ನ ಅವನ ಬಂದೂಕನ್ನು ವಶಪಡಿಸಿ ಕೊಂಡರೆ ವಾಸಿ" ಎಂದು ಹೇಳಿದ್ದರಂತೆ. ಈಗ ನಕ್ಸಲರೇ ಅದನ್ನು ವಶಪಡಿಸಿಕೊಂಡಿದ್ದು ಹೆಗ್ಡೆಯ ಮನೆಯವರಿಗೂ ನೆಮ್ಮದಿ ತಂದಿದೆ ಎನ್ನುತ್ತಿದ್ದಾರೆ ಹಳ್ಳಿಯ ಜನ!

ಈ ದರೋಡೆ ಕುರಿತಂತೆ ನಕ್ಸಲರು ಕೊಟ್ಟಿರುವ ಸಮರ್ಥನೆಯನ್ನು ನಾವು ಒಪ್ಪಿಕೊಳ್ಳಲಾಗುವುದಿಲ್ಲ, ಆದರೆ ನಕ್ಸಲರು ತಾವು ಮಾಡಿರುವುದನ್ನು ಒಪ್ಪಿಕೊಳ್ಳುವ, ಮಾಡದಿರುವುದನ್ನು ತಳ್ಳಿಹಾಕುವವರಾಗಿರುವುದರಿಂದ ಈ ದರೋಡೆಗಳನ್ನು ಮಾಡಿದವರು ಯಾರು? ಅವನ್ನು ಯಾಕೆ ಪೊಲೀಸರು ನಕ್ಸಲರ ಹಣೆಗೆ ಕಟ್ಟುತ್ತಿದ್ದಾರೆ? ಈವರೆಗೆ ನಡೆಯದಿದ್ದಷ್ಟು ದರೋಡೆ ಪ್ರಕರಣಗಳು ದಿಢೀರ್[...]

...ಗೆಯೇ ಸುಲಿಯುತ್ತಿದ್ದಾನೆ. ಇನ್ನು ಸ್ಟ್ಯಾನರ್ ಎಂಬ ...ರೊಬ್ಬ ತನ್ನ 10 ನಂಬರ್ ಶಾಲೆಯನ್ನೇ ... ತೆರೆದುಕೊಂಡು ಸುಲಿಯುತ್ತಿದ್ದಾನೆ. ಗಾಂ... ಗೌರಿ ಎಂಬ ಸಹೋದರರೀರ್ವರು ನಡೆಯುವ ...ಗೆ ವಿದ್ಯಾರ್ಥಿಗಳ ನೂಕುನುಗ್ಗಲು. ಅವರು ...ಡಿದು ಪಾಠ ಮಾಡುತ್ತಾರೆಂದರೆ ಬಿಜಿನೆಸ್ ...ಗಿರಬಹುದೆಂದು ನೀವೇ ಯೋಚಿಸಿ.

...ರ್ಜಿ, ತೋಟಗೇರ್, ಜಗನ್ನಾಥ್, ಎಸ್.ಎಸ್ ... ಬಸವರಾಜ, ಕೆ.ಸಿ.ಪಿ ಕಾಲೇಜಿನ ಆಶಾ, ಬೀದ್ ... ಬಿದಾದಾರ್ ಇವರೆಲ್ಲರೂ ಪ್ರತಿ ವಿದ್ಯಾರ್ಥಿಯಿಂದ ...500 ಮಾತ್ರ ದೋಚುತ್ತಾರೆ.

...ಕಾಲೇಜೇ ಟ್ಯೂಷನ್ ಅಡ್ಡೆ

... ಕೆಲವು ಉಪನ್ಯಾಸಕರದ್ದಂತೂ ಅಕ್ಷರಶಃ ಹಗಲು ...ಯಿ. ಸರ್ಕಾರಿ ಪದವಿಪೂರ್ವ ಕಾಲೇಜು, PDJ ... ಕೆಲವು ಕಾಲೇಜುಗಳ ಉಪನ್ಯಾಸಕರು ತಮ್ಮ ...ಕಾಲೇಜುಗಳನ್ನೇ ಟ್ಯೂಷನ್ ಅಡ್ಡೆಗಳನ್ನಾಗಿ ...ಸಿದ್ದಾರೆ. ಇದಕ್ಕಾಗಿ ಕಾಲೇಜಿನ ಪ್ರಿನ್ಸಿಪಾಲರಿಗೆ, ... ಮಂಡಳಿಯ ಜನರಿಗೆ ತಪ್ಪದೇ ನೈವೇದ್ಯ ...ತ್ತಾರೆ. ಈ ಉಪನ್ಯಾಸಕರಂತೂ ಕಾಲೇಜಿನಲ್ಲಿ ... ಮಾಡುವುದಿಲ್ಲ, ಅವರ ಆಸಕ್ತಿಯೇನಿದ್ದರೂ ... ಮೇಲೇಯೇ.

...ನ್ಯಾಸಕರು ತಮ್ಮ ವಿದ್ಯೆ ಎಂಬ ಸರಕನ್ನು ವಿದ್ಯಾರ್ಥಿ ...ಹಕನಿಗೆ ಮಾರುವುದಕ್ಕೆ ರೆಗ್ಯೂಲರ್ ಕ್ಲಾಸಿನಲ್ಲಿ ...ಗಳನ್ನೂ ಮಾಡುತ್ತಾರೆ. ಕಾಲೇಜು ಆರಂಭವಾದ ... ದಿನಕ್ಕೆ ಈ ಜಾಹಿರಾತು ನೀಡಲು ಪ್ರಾರಂಭಿಸಿ ... ಮಾರ್ಕ್ಸ್, ರಿಜಲ್ಟ್, ಫ್ಯೂಚರ್ ಎಂತೆಲ್ಲಾ ...ದ ಮಾತುಗಳ ಮೂಲಕ ವಿದ್ಯಾರ್ಥಿಗಳನ್ನು ...ತರನ್ನಾಗಿಸಿ ಟ್ಯೂಷನ್‌ಗೆ ಬರುವಂತೆ ತಲೆ ...ತ್ತಾರೆ.

...ವಲ ವರ್ಷದ ಪಿಯುಸಿ ವಿದ್ಯಾರ್ಥಿಗಳನ್ನು ಗಾಳ ...ತಿಯುವ ಈ ಉಪನ್ಯಾಸಕರು ಎರಡು ವರ್ಷ ... ನಿರಾತಂಕವಾಗಿ ಸುಲಿಯುತ್ತಾರೆ. ಒಬ್ಬೊಬ್ಬ ...ಯನ್ನೂ ಪ್ರತ್ಯೇಕವಾಗಿ ಭೇಟಿ ಮಾಡುವ ಇವರು ...ಯರ್ ಬಗ್ಗೆ ನೀನೇನೂ ಚಿಂತೆ ಮಾಡ್ಬೇಡ. ...ಟ್ಯೂಷನ್‌ಗೆ ಬಾ. ನಿನ್ನ ಪ್ರಾಕ್ಟಿಕಲ್‌ಗೆ ಫುಲ್ ... ಕೊಡ್ತೇನೆ. ಪರೀಕ್ಷೆ ಹಾಲ್‌ನಲ್ಲಿ ಬಂದು 20 ... ಉತ್ತರವನ್ನೂ ಹೇಳಿ ಬರೆಸುತ್ತೇನೆ" ಎಂದೆಲ್ಲಾ ...ಡೆದು ತಮ್ಮ ಟ್ಯೂಷನ್ ಅಡ್ಡೆಗೆ ವಿದ್ಯಾರ್ಥಿಗಳು ...ವಾಗುವಂತೆ ಮಾಡುತ್ತಾರೆ.

...ನಲ್ಲಿ, ಈ ನೆಲದ ಕಾನೂನು, ನೀತಿ, ನಿಯಮ ... ಗಾಳಿಗೆ ವಿದ್ಯಾರ್ಥಿಗಳನ್ನು ಹಾಡುಹಗಲೇ ...ತ್ತಿರುವ ಇಂಥ ಖದೀಮ ಉಪನ್ಯಾಸಕರಿಗೆ ಮೂಗು ...ಹಾಕುವವರ್‍ಯಾರು? ಶಿಕ್ಷಣದ ಪಾರದರ್ಶಕತೆ, ... ಬಗ್ಗೆ ಬೆಂಗಳೂರಿನಲ್ಲಿ ಕುಳಿತು ಪುಂಖಾನು...ಗಿ ಭಾಷಣ ಬಿಗಿಯುವ ಶಿಕ್ಷಣ ಮಂತ್ರಿಗಳು ... ಮಾಡಬೇಕಲ್ಲವೇ?

- ವರದಿಗಾರ

... ಈಗ ಶುರುವಾಗಿದ್ದೇಕೆ? ಎಂಬ ಪ್ರಶ್ನೆಗಳು ...ಗಿ ಹುಟ್ಟುತ್ತವೆ.


...ವದಲ್ಲಿ ಮೆಣಸಿನ ಹಾಳ್ಯದಲ್ಲಿ ಅಮಾಯಕ ...ನಿರಾಯುಧ ಆದಿವಾಸಿಗಳನ್ನು ಪೊಲೀಸರು ...ಗಿ ಹತ್ಯೆಗೈದುದರ ವಿರುದ್ಧ ರಾಜ್ಯಾದ್ಯಂತ ...ರು, ಪ್ರಜ್ಞಾವಂತ ನಾಗರಿಕರು, ಅಷ್ಟೇ ಏಕೆ ... ವಿರೋಧ ಪಕ್ಷಗಳ ನಾಯಕರೂ ಕಿಡಿಕಾರಿದ್ದರು. ...ಸಂಪಥಿ ನಕ್ಸಲೀಯರ ಪರವಾಗಿ ವಾಲುತ್ತಿದೆ ...ಅದನ್ನು ಹೇಗಾದರೂ ಮಾಡಿ ತಡೆಯಬೇಕೆಂದು ... ಮತ್ತು ಭಜರಂಗದಳ ಎರಡೂ ಸೇರಿ ನಡೆಸಿದ ... ಫಲಿತಾಂಶವೇ ಹತ್ಯದ್ಕ ಎಪಿಸೋಡ್ ಮತ್ತು ...ಬಳಿಯ ನಾಲ್ಕು ಮನೆಗಳ ದರೋಡೆ ಎಂದರೆ ... ತಪ್ಪಾಗಲಾರದು.

...ಅಭಿಪ್ರಾಯವನ್ನು ಬಹುತೇಕ ಸ್ಥಳೀಯರೂ ...ತ್ತಾರೆ. ಏಕೆಂದರೆ, ದರೋಡೆ ಮಾಡಿದವರೆಲ್ಲರೂ ...ಕಪ್ಪು ಬಟ್ಟೆ ಕಟ್ಟಿಕೊಂಡು ಬಂದಿದ್ದರು ಎಂದು ...ೊಳಗಾದವರು ಹೇಳುತ್ತಾರೆ. ಇದೂ ಕೂಡ ...ರ ಲಕ್ಷಣವಲ್ಲ, ಸ್ಥಳೀಯರೇ ಹೇಳುವಂತೆ ... ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಬಂದದ್ದಿಲ್ಲ, ...ಹೆಗ್ಗೆ ಮನೆಗೆ ಬಂದು ಹಣ, ಬಂದೂಕು ...ದಾಗಲೂ, ಶೇಷೇಗೌಡನನ್ನು ಹತ್ಯೆ ಮಾಡಿ ... ಅವರು ಮುಖಕ್ಕೆ ಬಟ್ಟೆಕಟ್ಟಿಕೊಂಡಿರಲಿಲ್ಲ, ...ಗ ಅವರು ಯಾಕೆ ಈಗ ಮುಸುಕುಧಾರಿ ...ರೆ? ಅಥವಾ ಅವರ ಹೆಸರನ್ನು ಹೇಳಿಕೊಂಡು ... ಮುಖಕ್ಕೆ ಬಟ್ಟೆ ಕಟ್ಟಿಕೊಳ್ಳುವ ಅಗತ್ಯ ಯಾಕೆ ...?

...ದು ಉತ್ತರ ಕೊಟ್ಟಿದ್ದಾರೆ. ಪೊಲೀಸರು ಈ ...?

ಕೊಪ್ಪಳ ಜಿಲ್ಲಾ ಕಾಂಗ್ರೆಸ್: ಮುಳುಗುತ್ತಿರುವ ಟೈಟಾನಿಕ್

"ಇಂಟರ್‌ವೆಲ್ ನಂತರ ಟೈಟಾನಿಕ್ ಸಿನಿಮಾ ನೆನಪಿಸಿಕೊಳ್ಳಿ. ಅರ್ಧ ಮುಳುಗಿದ ಹಡಗು, ಬದುಕುಳಿದ ಅರ್ಧ ಜನರ ಪರದಾಟ; ಥೇಟ್ ಹಾಗೇ ಇದೆ ಕೊಪ್ಪಳ ಜಿಲ್ಲಾ ಕಾಂಗ್ರೆಸ್‌ನ ಸ್ಥಿತಿ ಮತ್ತು ಅದರ ಕಾರ್ಯಕರ್ತರದು. ಈಗಿರುವ ಹಡಗಿನಲ್ಲೇ ಇದ್ದರೂ ಸಾಯ್ತೀವಿ, ಹಡಗಿನಿಂದ ಹಾರಿದರೂ ಸಾಯ್ತೀವಿ, ಹಾಗಿದೆ ಕಾಂಗ್ರೆಸ್‌ನ ಹಳೆಯ 'ಲೀಡರ್‌ಗಳ ಸ್ಥಿತಿ.



ಯಲಬುರ್ಗಾ, ಕೊಪ್ಪಳ ಶಾಸಕರು ಪೂರ್ತಿ ಜನಹಿತ ಮರೆತಿದ್ದರೆ, 'ಕೈ'ಯಲ್ಲಿದ್ದ ಕನಕಗಿರಿ, ಕುಷ್ಟಗಿ ಕ್ಷೇತ್ರಗಳನ್ನು ಕಳಕೊಂಡು ಕಾಂಗ್ರೆಸ್ ಮಂಗ್ಯಾ ಆಗಿದೆ. ಎರಡೂವರೆ ದಶಕ ಕೊಪ್ಪಳ, ಬಳ್ಳಾರಿ, ರಾಯಚೂರು ಕಾಂಗ್ರೆಸ್ಸನ್ನು ನಿಯಂತ್ರಿಸಿದ ಹೆಂಡದ ದೊರೆ ಎಚ್. ರಾಮುಲು ನಿವೃತ್ತಿಯಾಗಿ ಆರಾಮವಾಗಿರುವಾಗ, ಅವರ ಕಣ್ಣೆದುರೇ ಕಾಂಗ್ರೆಸ್‌ನ್ನು ಮಣ್ಣುಪಾಲು ಮಾಡಲಾಗುತ್ತಿದೆ.

ಯಾರ್‍ರೀ ಎಮ್ಮೆ?

ಹದಿನಾಲ್ಕು ವರ್ಷಗಳ ನಂತರ ಕೊಪ್ಪಳದಲ್ಲಿ ಕಾಂಗ್ರೆಸ್ಸಿನಿಂದ ಗೆದ್ದಿರುವ ಶಾಸಕ ಬಸವರಾಜ ಹಿಟ್ನಾಳನದು ಬರೀ ರೊಕ್ಕ ಮಾಡುವ ಕಾಯಕ. ಕ್ಷೇತ್ರದ ತುಂಬ ನಡೆದಿರುವ ರಸ್ತೆ ಕಾಮಗಾರಿಗಳ ಅವ್ಯವಹಾರವೇನಾದರೂ ಸರಿಯಾಗಿ ತನಿಖೆಯಾದರೆ ಮೊದಲು ಮನೆಗೆ ಹೋಗುವುದು ಹಿಟ್ನಾಳನೇ. ಗೆಲುವಿಗೆ ಹೆಗಲು ಕೊಟ್ಟವರನ್ನೇ ಹಚಾ ಅಂದು ಸಿಂಗಲ್ಲಾಗಿ ಮೇಯುತ್ತಿರುವ ಹಿಟ್ನಾಳನ ನಿಷ್ಕ್ರಿಯತೆಗೆ ಏನೆಂದರೂ ಸಾಲದು. ಪಕ್ಕದಲ್ಲಿ ತುಂಗಭದ್ರಾ ನದಿ ಇಟ್ಟುಕೊಂಡು ಕುಡಿಯುವ ನೀರಿಗೆ ಹಸಹಪಿಸುತ್ತಿದೆ ಕೊಪ್ಪಳ. ನಗರಸಭೆಯವರಿಗೆ ಮೂಡು ಬಂದಾಗೊಮ್ಮೆ ಬಿಡುವ ನೀರು ಕುಡಿಯುವುದಿರಲಿ, ತಿಕ ತೊಳೆಯಲು ಕೂಡ ನಾಲಾಯಕ್. ಹಿಟ್ನಾಳನನ್ನು ಶಾಸಕನನ್ನಾಗಿಸಿದ ತಪ್ಪಿಗೆ ಇಂತಹ ನೀರನ್ನು ಕುಡಿಯುತ್ತಿದೆ ಕೊಪ್ಪಳ. ಪಕ್ಷದವರಂತು ಹಿಟ್ನಾಳನನ್ನು ಯಾವತ್ತೋ ದೂರ ಇಟ್ಟಾಗಿದೆ. ರಂಜಾನ್, ಬಕ್ರೀದ್‌ಗಳಲ್ಲಿ ತಲೆಗೆ ಟೋಪಿ ಧರಿಸಿ ಬಂದು ಮುಸ್ಲಿಂರನ್ನು ಮರುಳು ಮಾಡುವ ಹಿಟ್ನಾಳ, ಉರ್ದು ಶಾಲೆಗೆಂದು ನಿಗದಿಯಾಗಿದ್ದ ಜಾಗವನ್ನು ಅಕ್ರಮವಾಗಿ ಡಿಗ್ರಿ ಕಾಲೇಜ್‌ಗೆ ಕೊಟ್ಟು, ಕಾಂಟ್ರಾಕ್ಟ್‌ನಿಂದ 5 ಲಕ್ಷ ಮಾಮೂಲು ತಗೊಂಡು ಹಾಯಾಗಿದ್ದುಬಿಟ್ಟ.


ಸೋನಿಯಾ ಗಾಂಧಿ ಬಿಟ್ಟರೆ ಕಾಂಗ್ರೆಸ್‌ಗೆ ನಾನೇ ಗತಿ ಎಂತಾಡುವ ಬಸವರಾಜ ಹಿಟ್ನಾಳ್ ತನ್ನ ಧನ ದಾಹಕ್ಕಾಗಿ ಪಕ್ಷಕ್ಕೆ ಬೆಂಕಿ ಇಡುತ್ತಿದ್ದು, ಈತನದೇ ಪಾರ್ಟಿಯ, ಈತನ ಮಗನ ವಯಸ್ಸಿನ ಕೃಷ್ಣಾ ರೆಡ್ಡಿ ಕಪಾಳಕ್ಕೆ ಬಿಗಿದು ಜೆಡಿಎಸ್‌ಗೆ ಜಿಗಿದು ಎಪಿಎಂಸಿ ಅಧ್ಯಕ್ಷನಾಗಿಬಿಟ್ಟ. ಹತ್ತಿರದಲ್ಲೇ ಇರುವ ಗ್ರಾಮ ಪಂಚಾಯತ್ ಅಧ್ಯಕ್ಷ-ಉಪಾಧ್ಯಕ್ಷರುಗಳ ಆಯ್ಕೆ ಸಂದರ್ಭದಲ್ಲಿ ಇನ್ನಷ್ಟು ಪಂಚಾಯ್ತಿಗಳು ಕಾಂಗ್ರೆಸ್‌ನಿಂದ ಕೈತಪ್ಪಿ ಹೋಗುವ ಸಂಭವವೇ ಇದೆ. ಯಾವುದೇ ಹೊತ್ತಿನಲ್ಲಿ ಬರಬಹುದಾದ ನಗರಸಭೆ ಚುನಾವಣೆಗೆ ಈತನ ತಯಾರಿ ಶೂನ್ಯ.

ಚೂರಿ ಇಟ್ಟ ಮಲ್ಲಿ!

ಮೂರು ದಶಕಗಳ ಕಾಲ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಕ್ಷೇತ್ರ ಜೆಡಿಎಸ್‌ನ ಇಕ್ಬಾಲ್ ಅನ್ಸಾರಿ ವಶವಾದಾಗಿನಿಂದ ಕಾಂಗ್ರೆಸ್ಸಿಗರೇ ಕೋಮುವಾದಿಗಳಾಗಿಬಿಟ್ಟದ್ದಾರೆ. ರಾಮುಲು ಸಾಮ್ರಾಜ್ಯದಿಂದ ಬಿಡುಗಡೆ ಹೊಂದಿದ ಕಾಂಗ್ರೆಸ್ ಈಗ ಗಂಗಾವತಿಯಲ್ಲಿ ಕೇರಾಫ್ ಫುಟ್‌ಪಾತ್. ಡಿಸಿಸಿ ಅಧ್ಯಕ್ಷೆ ಲಲಿತಾರಾಣಿಯಾಗಿದ್ದರೂ ಎಲ್ಲವನ್ನೂ ಕಂಟ್ರೋಲ್‌ನಲ್ಲಿಟ್ಟುಕೊಂಡಿರುವವನು ಸಿದ್ರಾಮಸ್ವಾಮಿ. ಈತ ತನ್ನದೇ ಪಾರ್ಟಿಯ ಅನ್ನಪೂರ್ಣಳನ್ನು ಬರ್‍ರಿಯಾ ಅಂತ ಕರೆದು ನಾಲ್ಕು ಜನರೆದುರು 'ಸಾರಿ' ಅಂದವನು. ಇತ್ತ ಮಾಜಿ ಸಚಿವ ಡಿಸಿಸಿಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಹೋಗಿ ಸೋತು ಸುಣ್ಣವಾಗಿ ಈಗ ಪಕ್ಷಕ್ಕೆ ಚೂರಿ ಇಟ್ಟದ್ದಾನೆ.

ಕಾಂಗ್ರೆಸ್‌ನ ಕೈಯಲ್ಲಿದ್ದ ಗಂಗಾವತಿ (ರಾಜ್ಯದ ಎರಡನೇ ಅತಿದೊಡ್ಡ) ಎಪಿಎಂಸಿಗೆ ವಿರೇಶಪ್ಪ ಆದಾಪುರನನ್ನು ಅಧ್ಯಕ್ಷಗಾದಿಯಿಂದ ಇಳಿಸಲಾಯಿತು. ನಂತರ ಬೀದಿ ಜಗಳಕ್ಕೆ ಇಳಿದ ಕಾಂಗ್ರೆಸ್ಸಿನವರು ಮೂರು ತುಂಡಾಗಿ ಹೋದರು. ವಿಚಿತ್ರವೆಂದರೆ ಕಾಂಗ್ರೆಸ್ ತನ್ನ ಅಭ್ಯರ್ಥಿ ವಿರೇಶಪ್ಪನನ್ನು ಇಳಿಸಲು ಬಿಜೆಪಿಯ ದೊಡ್ಡಯ್ಯ ಸ್ವಾಮಿಯಂತಹ ಸದಸ್ಯರ ಬೆಂಬಲ ಪಡೆದಿತ್ತು, ಕೊನೆಗೆ ಕಾಂಗ್ರೆಸ್‌ನ ಒಡಕನ್ನು ಸರಿಯಾಗಿ ಬಳಸಿಕೊಂಡ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಬಿಜೆಪಿಯ ನಾಲ್ವರು, ಜೆಡಿಎಸ್‌ನ ಮೂವರು ಕಾಂಗ್ರೆಸ್‌ನ ಒಬ್ಬರ ಬೆಂಬಲದಿಂದ ದೊಡ್ಡಯ್ಯ ಅರವಟಗೆಮಠ ಅಧ್ಯಕ್ಷನಾದರೆ ಕೈಯಲ್ಲಿದ್ದದ್ದನ್ನು ಕಳಕೊಂಡು ಕಾಂಗ್ರೆಸ್ ಖಾಲಿ ಆಗಿ ಕುಂತಿದೆ. ಅಧ್ಯಕ್ಷಗಿರಿ ಕಾಂಗ್ರೆಸ್‌ನಿಂದ ತಪ್ಪಲು ಮಾಜಿ ಸಚಿವ ಮಲ್ಲಿಕಾರ್ಜುನ ತನ್ನ ಶಿಷ್ಯ ವಿರೇಶಪ್ಪ ಆದಾಪೂರನಿಂದ ಬಿಜೆಪಿಗೆ ಕೈ ಎತ್ತುವಂತೆ ಮಾಡಿಬಿಟ್ಟದ್ದಾನೆ.

ಬಳ್ಳಾರಿಯ ರೆಡ್ಡಿಗಳು ಗಂಗಾವತಿಗೆ ಲಗ್ಗೆ ಹಾಕಲು ಸಿದ್ಧವಾಗಿರುವಾಗ ಜಿ.ಪಂ. ಅಧ್ಯಕ್ಷೆ ಕಾಂಗ್ರೆಸ್‌ನ ವಿಜಯಲಕ್ಷ್ಮಿಯೇ ರೆಡ್ಡಿಗಳ ಬಗ್ಗೆ ಸಾಫ್ಟ್ ಆಗಿ ಮಾತನಾಡುತ್ತಿದ್ದಾಳೆ. ಡಿಸಿಸಿ ಅಧ್ಯಕ್ಷೆ ಲಲಿತಾರಾಣಿ ಕೂಡ ಹೆಚ್ಚುಕಮ್ಮಿ ಹೀಗೆ. ಒಟ್ಟಿನಲ್ಲಿ ಗಂಗಾವತಿ ಕಾಂಗ್ರೆಸ್ ಕೆಲವೇ ದಿನಗಳಲ್ಲಿ ದುರ್ಗಮ್ಮನ ಹಳ್ಳಕ್ಕೆ ಬಿದ್ದರೂ ಆಶ್ಚರ್ಯವಿಲ್ಲ.



ಯಲಬುರ್ಗಾ ನಿರೋ- ಬೆಂಗ್ಳೂರ್ ಹೀರೋ!

ರಾಜಕೀಯವೆಂಬ ಸಮುದ್ರದಲ್ಲಿ ಕಾಂಗ್ರೆಸ್ ಹಡಗಿಗೆ ಮಾತ್ರ ಅಸ್ತಿತ್ವ ಎನ್ನುತ್ತ ದಳದಿಂದ ಬಂದು ಯಲಬುರ್ಗಾ ಶಾಸಕನಾಗಿರುವ ಬಸವರಾಜ ರಾಯರೆಡ್ಡಿಯದು ಒಂಥರಾ ರಾಜಕಾರಣ. ಕ್ಷೇತ್ರದ ರಸ್ತೆಗಳೆಲ್ಲ ಹದಗೆಟ್ಟಿವೆ. ಯಲಬುರ್ಗಾದಿಂದ ತಮಿಳುನಾಡಿನವರೆಗೂ ಬಸ್ಸು ಓಡಿಸುವ ರಾಯರೆಡ್ಡಿ, ಕ್ಷೇತ್ರದ ಹಳ್ಳಿಗಳಿಗೇ ಬಸ್ಸಿಲ್ಲದಂತೆ ಮಾಡಿದ್ದಾನೆ. ಎಂದೂ ಇಲ್ಲದ ರೀತಿಯಲ್ಲಿ ಯಲಬುರ್ಗಾ ನಗರ ಕುಡಿಯುವ ನೀರಿಗಾಗಿ ಲಬೋಲಬೋ ಅಂತ ಬಾಯಿ ಬಡಿದುಕೊಳ್ಳುತ್ತಿದೆ. ಆದರೆ ಶಾಸಕ ರಾಯರೆಡ್ಡಿ ಯಲಬುರ್ಗಾ ನೀರಿನ ಬಗ್ಗೆ ಬಿಟ್ಟು ಅಧಿವೇಶನದಲ್ಲಿ ಬೆಂಗಳೂರಿಗೆ ಸಪ್ಲೈ ಆಗುವ ಕುಡಿಯುವ ನೀರಿನ ಬಗ್ಗೆ ಪ್ರಶ್ನೆ ಕೇಳುತ್ತಾನೆ. ಆ ಮೂಲಕ ಕ್ಷೇತ್ರದಲ್ಲಿ ಮತ್ತಷ್ಟು ಜನರ ಆಕ್ರೋಶಕ್ಕೆ ಕಾರಣವಾಗಿದ್ದಾನೆ. ಈತನಿಗಂತೂ ಹಳೇ-ಹೊಸ ಕಾಂಗ್ರೆಸ್ಸಿಗರಂತೂ ಕಾಣುವುದೇ ಇಲ್ಲ, ಅಧಿಕಾರದ ವಿಚಿತ್ರ ಅಮಲಿನಲ್ಲಿರುವ ರಾಯರೆಡ್ಡಿ ತನ್ನ ಗೆಲುವಿಗೆ ಶ್ರಮಿಸಿದ ಪ್ರಮುಖ ಕಾರ್ಯಕರ್ತರನ್ನೇ ಕಣ್ಣೆತ್ತಿ ನೋಡದಂತಹ ಸ್ಥಿತಿಗೆ ಬಂದಿದ್ದಾನೆ.

ಇತ್ತೀಚೆಗೆ ನಡೆದ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಸಿಕ್ಕಾಪಟ್ಟೆ ಭ್ರಷ್ಟಾಚಾರ ಎಸಗಿರುವ ಹಿಂಬಾಲಕರ ಮೇಲೆ ಆರೋಪ ಹೊರಿಸಿದ್ದ ದಲಿತ ಮುಖಂಡನೊಬ್ಬನಿಂದ ಎರಡೇ ದಿನಗಳಲ್ಲಿ ಬೆದರಿಸಿ ತಪ್ಪೊಪ್ಪಿಗೆ ಬರೆಸಿಕೊಂಡಾತ ರಾಯರೆಡ್ಡಿ, ನಿಷ್ಠೆ ತೋರಿಸಲು ಹೆಗಡೆ ಚಪ್ಪಲಿಯನ್ನು ತಲೆ ಮೇಲೆ ಹೊತ್ತು ತಿರುಗಿ, ಕೊನೆಗೆ ಜನತಾ ಪರಿವಾರವನ್ನು ಜಾಡಿಸಿ ಬಂದ ರಾಯರೆಡ್ಡಿಗೆ ಇತ್ತೀಚಿನ ಕಾರ್ಯಕರ್ತರ್‍ಯಾವ ಲೆಕ್ಕ? ಭಾನಾಪೂರ-ಯಲಬುರ್ಗಾ ರಸ್ತೆ ಕಾಮಗಾರಿಯೊಂದರಲ್ಲೇ ಭಯಂಕರ ಪರ್ಸೆಂಟೇಜ್ ಪಡೆದಿರುವ ರಾಯರೆಡ್ಡಿ ಕೈಯಲ್ಲಿ ಕಾಂಗ್ರೆಸ್ಸು ಮತ್ತು ಕ್ಷೇತ್ರ ಎರಡೂ ಎಕ್ಕುಟ್ಟಿ ಹೋಗುತ್ತಿವೆ. ಹಳೇ ಕಾಂಗ್ರೆಸ್ಸಿಗ ಶಿವಶರಣಪ್ಪಗೌಡ ಬಿಜೆಪಿ ಸೇರಿ ರಾಯರೆಡ್ಡಿಯನ್ನು ಮಣ್ಣು ಮುಕ್ಕಿಸಲು ಸಿದ್ಧನಾಗಿಬಿಟ್ಟದ್ದಾನೆ.



ಕಾಂಗ್ರೆಸ್ V/s ಕಾಂಗ್ರೆಸ್!

ಕಾಂಗ್ರೆಸ್ಸಿನವರನ್ನು ಹಣಿಯಲು ಬೇರೆ ಪಾರ್ಟಿಯವರಿರಲಿ, ಕಾಂಗ್ರೆಸ್ಸಿನವರೇ ರೆಡಿಯಾಗಿ ಬಿಟ್ಟದ್ದಾರೆ. ಕೊಪ್ಪಳ ಸಂಸದ ವಿರುಪಾಕ್ಷಪ್ಪ ಮೂರು ತಿಂಗಳ ಹಿಂದೆ ರೈತರ ಭೂಮಿ ನುಂಗುತ್ತಿರುವ ಎಂಎಸ್‌ಪಿಎಲ್ ಕಾರ್ಖಾನೆ ಪರ ಬಾಲ ಬಡಿಯಲು ಸಭೆ ಕರೆದಿದ್ದರು. ಆ ಸಭೆಗೆ ಸುವರ್ಣ ಕರ್ನಾಟಕ ರೈತ ಸಂಘದ ಚಂದ್ರಕಾಂತ ಸಿಂಗಾಟಾಲೂರು ಕೂಡ ಹೋಗಿದ್ದ. ಕಾರ್ಖಾನೆಗೆ ಭೂಮಿ ನೀಡುವ ಕುರಿತು ಪರ-ವಿರೋಧ ಸಂಸದ ವಿರುಪಾಕ್ಷಪ್ಪ-ಚಂದ್ರಕಾಂತ ಮಧ್ಯೆ ವಾಗ್ವಾದ ನಡೆಯಿತು. ಅದಾಗಿ ಕೆಲವೇ ದಿನಕ್ಕೆ ಚಂದ್ರಕಾಂತನಿಂದ ರಾತ್ರಿ ಹೊತ್ತು ಸಂಸದರಿಗೆ ಜೀವ ಬೆದರಿಕೆ ಕರೆ ಬಂದಿದೆ ಎಂದು ದೂರು ದಾಖಲಾಗಿ, ಚಂದ್ರಕಾಂತ ಬೇಲು ಪಡೆದುಕೊಂಡ.

ಎಲ್ಲರೂ ಇದನ್ನು ಮರೆಯುವ ಹೊತ್ತಿನಲ್ಲಿಯೇ ಚಂದ್ರಕಾಂತ ಸಂಸದರ ವಿರುದ್ಧ ಜೀವ ಬೆದರಿಕೆಯ ದೂರನ್ನು ಕೋರ್ಟಿನಲ್ಲಿ ದಾಖಲಿಸಿಬಿಟ್ಟ. ವಿಚಿತ್ರವೆಂದರೆ ಚಂದ್ರಕಾಂತ ಕೇಸ್‌ನ್ನು ನಡೆಸುತ್ತಿರುವವರು ಪುರಾತನ ಕಾಂಗ್ರೆಸ್ಸಿಗ ಮತ್ತು ಡಿಸಿಸಿಯ ಜನರಲ್ ಸೆಕ್ರೆಟರಿ ಆಸೀಫ್ ಅಲಿ! ಇನ್ನು ವಿಚಿತ್ರವೆಂದರೆ ಸಂಸದರಿಗೂ ಹಾಗೂ ಹಳೆಯ ಸಂಸದ ರಾಮುಲುಗೂ ಆಗಿಬರುತ್ತಿಲ್ಲ, ಅಂತಹ ರಾಮುಲು ಬಳಗಕ್ಕೆ ಸೇರಿದವರೇ ಆಸೀಫ್ ಅಲಿ. ಅಷ್ಟರಮಟ್ಟಿಗೆ ಇಲ್ಲಿಯೂ ಕಾಂಗ್ರೆಸ್‌ಗೆ ವೈರಿಯಾಗಿದೆ. ರಾಮುಲು ತೆರವುಗೊಳಿಸಿದ ಹುದ್ದೆಯನ್ನೇರಿದ ವಿರುಪಾಕ್ಷಪ್ಪ ಪಕ್ಷಕ್ಕೆ ಹಿರಿಯರಾಗಬಹುದಿತ್ತು, ಎಲ್ಲ ಬಿಟ್ಟು ವಯಸ್ಸಿನಲ್ಲಿ ರಾಜಕೀಯ ಅನುಭವದಲ್ಲಿ ಎಳಸು ಆಗಿರುವ ಮಂತ್ರಿ ಇಕ್ಬಾಲ್ ಅನ್ಸಾರಿಯೊಂದಿಗೆ ಜಗಳಕ್ಕೆ ಬಿದ್ದು ಇದ್ದ ಅಷ್ಟಿಷ್ಟು ಗೌರವವನ್ನು ಕಳಕೊಂಡರು. ಕಾಂಗ್ರೆಸ್ ಏನಾದರೆ ನನಗೇನು? ಎಂಬಂತೆ ವರ್ತಿಸುವವರಲ್ಲಿ ಇವರು ಕೂಡ ಪ್ರಮುಖರು. ಚಂದ್ರಕಾಂತನ ಪ್ರಕರಣವೇ ಮುಂದೆ ದೊಡ್ಡ ಭೂತವಾಗಿ ಕಾಡಿದರೂ ಆಶ್ಚರ್ಯವಿಲ್ಲ.

ಇನ್ನು ಶಾಸಕರಾಗಿ ನಿಷ್ಕ್ರಿಯತೆಯಿಂದ ಕಾಂಗ್ರೆಸ್ ಸೋಲಿಗೆ ಕಾರಣವಾದ ಕುಷ್ಟಗಿಯ ಮಾಜಿ ಶಾಸಕ ಹಸನ್‌ಸಾಬ ದೋಟಿಹಾಳ ಈಗ ಭಯಂಕರ ಸೋಮಾರಿ. ಬಿಜೆಪಿಯಿಂದ ಶಾಸಕನಾಗಿರುವ ತನ್ನ ಶಿಷ್ಯ ದೊಡ್ಡನಗೌಡ ಪಾಟೀಲ್ ನಾಳೆ ಸಿದ್ದರಾಮಯ್ಯನ ಪಂಚೆ ಚುಂಗು ಹಿಡಿದು ಎಲ್ಲಿ ಕಾಂಗ್ರೆಸ್ಸಿಗೆ ಬಂದು ಬಿಡುತ್ತಾನೋ ಎಂಬ ಚಿಂತೆಯನ್ನು ತಲೆಗೆ ಹಚ್ಚಿಕೊಂಡಿದ್ದಾನೆ ಹಸನ್‌ಸಾಬ. ಹೀಗಾಗಿ ಕುಷ್ಟಗಿಯ ಬೀದಿಬೀದಿಗಳಲ್ಲಿ, ಹಳ್ಳಿಗಳಲ್ಲಿ ಹುಡುಕಿದರೆ ಕಾರ್ಯಕರ್ತರೇ ನಾಪತ್ತೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ನಾಪತ್ತೆಯಾದರೂ ಆಶ್ಚರ್ಯವಿಲ್ಲ.

ಏನೋ ಒಂದು ಪವಾಡ ಜರುಗುತ್ತ, ಕೊಪ್ಪಳ ಜಿಲ್ಲೆಯಲ್ಲಿ ಮತ್ತೆ ಕಾಂಗ್ರೆಸ್ ಹಾರಾಡುತ್ತೆ ಎಂಬ ಭ್ರಮೆ ಕೆಲ ಕಾರ್ಯಕರ್ತರದ್ದು. ಹೇಗೆ ಲೆಕ್ಕ ಹಾಕಿದರೂ ಅವರ ಭ್ರಮೆಯೇ ನಿಜವಾದ್ದು. 2009 ರ ಹೊತ್ತಿಗೆ ಕಾಂಗ್ರೆಸ್ ಇಲ್ಲಿ ವಾರಸುದಾರರಿಲ್ಲದಂತಾಗಿ ಬಡಾ... ಸಾಧ್ಯತೆಯೇ ನಿಚ್ಚಳವಾಗಿ ಕಾಣುತ್ತಿದೆ

- ವರದಿಗಾರ

ಎತ್ತ ಹೋಗುತ್ತೀ
ಮಹಾತಾಯಿ
ಸ್ವಲ್ಪ ಇತ್ತ ಬ



ಪ್ರಿಯ ಓದುಗರೇ, ಈ ನನ್ನ ಪ್ರಯಾಣದ ಸುದೀರ್ಘ ವಿವರಗಳೊಂದಿಗೆ ನನ್ನ ಜೊತೆಗೂಡಿ ಬರುತ್ತಿರುವ ನಿಮ್ಮ ತಾಳ್ಮೆಯನ್ನು ಅಭಿನಂದಿಸುತ್ತಾ.... ಅಂತಿಮವಾಗಿ ನನ್ನ ಮತ್ತು ನರಭಕ್ಷಕಿಯ ಕಟ್ಟಕಡೆಯ ಹಾಗೂ ಮೊಟ್ಟಮೊದಲ ಭೇಟಿಗಳ ಬಗ್ಗೆ ಲೆಕ್ಕಕೊಟ್ಟು ಬಿಡುತ್ತೇನೆ.

ಅವಳೊಂದಿಗೆ ನನ್ನ ಕೊನೆ ಭೇಟಿ ಸಂಭವಿಸಿದ್ದು 11ನೇ ಏಪ್ರಿಲ್ 1930ರಂದು ನಡು ದಿನಕ್ಕಿಂತ ಸ್ವಲ್ಪ ಮುಂಚೆ ನಾನು ಕಾಲಾಘರ್‌ಗೆ ಬಂದ ಹತ್ತೊಂಭತ್ತು ದಿನಗಳ ನಂತರ.

ಈ ದಿನ ನಾನು ಕೋಣಗಳ ಜಾಗ ಬದಲಿಸುವ ಕಾರ್ಯಕ್ರಮದ ಮೇಲೆ ಆಯಕಟ್ಟಿನ ಜಾಗ ಹುಡುಕುತ್ತಾ

> ಅದು ಬಂದೇ ಬರುವ ಗ್ಯಾರಂಟಿ ಇತ್ತು. ಮಾಧೋಸಿಂಗ್ ಎಬ್ಬಿಸಿದ್ದ ಗಲಾಟೆಗೆ ಅದು ಆಕರ್ಷಿತವಾಗಿತ್ತು. ನನ್ನ ನಿರೀಕ್ಷೆ ನಿಜವಾಯಿತು... ಹುಲಿ ಬಂದಿತು. ಇದ್ದಕ್ಕಿದ್ದಂತೆ ಬದಲಾದ ದೃಶ್ಯದಿಂದ ಅದು ವಿಚಲಿತವಾದಂತಿತ್ತು. ನಾನು ಅದು ಹೊಂಚುಹಾಕಿ ಏರುವ ದಿಕ್ಕಿಗೆ ಮುಖ ಮಾಡಿನಿಂತಿದ್ದೆ. ಮಾಧೋಸಿಂಗ್ ಗಲಾಟೆ ನಿಲ್ಲಿಸಿದ್ದ. ಹುಲ್ಲು ಕೊಯ್ಯುವವನು ನನ್ನ ಸಮೀಪಕ್ಕೆ ಬಂದಿದ್ದ. ಈ ಎಲ್ಲಾ ಬದಲಾವಣೆಗಳ ಕಾರಣ ಹುಲಿ ಮುಂದಿನ ನಡಿಗೆಯನ್ನು ಯೋಜಿಸುತ್ತಿದೆ ಎಂದೆನಿಸುತ್ತಿತ್ತು.


ಕಾಡುದಾರಿಯಲ್ಲಿ ಓಡಾಡುತ್ತಿದ್ದೆ. ಅರಣ್ಯ ಬಂಗಲೆಯಿಂದ ಒಂದು ಮೈಲಿ ದೂರದಲ್ಲಿದ್ದ ಒಂದು ಜಾಗದಲ್ಲಿ ಉತ್ತರ-ಪಶ್ಚಿಮವಾಗಿ ಹರಿಯುವ ಕಾಡಿನ ದಾರಿ ಅತ್ಯಂತ ಆಳವಾದ ಕಮರಿಗಳನ್ನು ದಾಟಿ ಕಾಲಾಘರ್ ವಲಯದಿಂದ ಹೊರಹೋಗುತ್ತಿತ್ತು, ಈ ರಸ್ತೆಯ ಕೂಡಿನಲ್ಲಿ ನಾನು ಕೋಣಗಳೊಂದಿಗೆ ವಿಶ್ರಮಿಸಿದ್ದಾಗ ಸೌದೆಗೆ ಬಂದಿದ್ದ ಗಂಡಸರ ದೊಡ್ಡ ಗುಂಪೊಂದು ನನಗೆ ಎದುರಾಯಿತು. ಇವರಿಗೆ ವಿಶ್ರಾಂತಿಯಲ್ಲಿದ್ದ ನಾನು ಮಾತುಕತೆಗೆ ಸೂಕ್ತವಾದ ವ್ಯಕ್ತಿ ಅನಿಸಿರಬೇಕು. ಅವರು ನನ್ನೊಂದಿಗೆ ಮಾತಿಗೆ ಕುಳಿತರು. ಅದೂ ಇದೂ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತಿದ್ದಾಗ, ಮಾತು ನರಭಕ್ಷಕಿಯತ್ತ ಹೊರಳಿತು. ಈ ಗುಂಪಿನಲ್ಲಿದ್ದ ತೀರಾ ವಯಸ್ಸಾದ ವ್ಯಕ್ತಿಯೊಬ್ಬ ನನ್ನ ಮುಂದಿದ್ದ ಇಳಿಜಾರಿನ ಕಡೆಗೆ ಐನೂರು ಗಜ ದೂರದಲ್ಲಿದ್ದ ಓಕ್ ಮರದ ದಟ್ಟಣೆಯ ಕಡೆಗೆ ಕೈತೋರಿಸುತ್ತಾ.... 'ಅಲ್ಲೇ ನನ್ನ ಮಗನನ್ನು ಒಂದು ತಿಂಗಳ ಹಿಂದೆ ಆ ನರಭಕ್ಷಕಿ ಹಿಡಿದು ತಿಂದದ್ದು' ಎಂದು ಹೇಳಿದ. ಆ ಹದಿನೆಂಟು ವರ್ಷದ ಯುವಕನನ್ನು ಹುಲಿ ಹಿಡಿದು ತಿಂದ ವಿಷಯವನ್ನು ನಾನು ಅವರಿವರ ಬಾಯಿಂದ ಕೇಳಿ ತಿಳಿದಿದ್ದೆ. ಆದರೆ ಅದಕ್ಕೆ ಅವನ ತಂದೆಯದ್ದೊಂದು ಆವೃತ್ತಿಯಿದೆ ಎಂದು ನನಗೆ ಗೊತ್ತಿರಲಿಲ್ಲ, ಹಾಗಾಗಿ ನಾವು ರಸ್ತೆಯಂಚಿನಲ್ಲೇ ಸಿಗರೇಟು ಸೇದುತ್ತಾ ಅವನ ಮಾತಿಗೆ ಕಿವಿ ಕೊಟ್ಟೆ.

ಅವನು ಮತ್ತೆ ಆ ಜಾಗದತ್ತ ಕೈ ತೋರಿಸುತ್ತಾ.... 'ಅವತ್ತು ನೋಡಿ, ಅವನೊಂದಿಗೆ ಎಪ್ಪೊಂದು ಜನ ಗಂಡಸರಿದ್ದರು. ಎಲ್ಲಾ ಸೇರಿ ನನ್ನ ಮಗನನ್ನು ಮಾತ್ರ ಹುಲಿಯ ಬಾಯಿಗೆ ಕೊಟ್ಟು ಓಡಿಹೋದರು ಸ್ವಾಮಿ' ಎಂದ. ಈಗಿನ ಗಂಡಸರ ಗುಂಪಿನಲ್ಲಿ ಅಂದು ಹೋಗಿದ್ದ ಇಪ್ಪತ್ತೈದು ಮಂದಿಯ ಪೈಕಿ ಕೆಲವರಿದ್ದರು. ಅವರು ಮುದುಕನ ಈ ಆಪಾದನೆಯನ್ನು ನಿರಾಕರಿಸುತ್ತಾ... 'ಹುಲಿಯ ಘರ್ಜನೆ ಕೇಳುತ್ತಿದ್ದಂತೆ ನಮ್ಮ ಜೀವಗಳೇ ಕೈಗೆ ಬಂದಿರುತ್ತವಲ್ಲಾ ಸ್ವಾಮಿ, ಇನ್ನೊಬ್ಬ ಓಡಿದನೋ ಇಲ್ಲವೋ ಎಂದು ನೋಡುತ್ತಾ ಕೂರಲಾಗುತ್ತದೆಯೇ, ಆದರೂ ನಾವು ಎಲ್ಲರೂ ಓಡಿ ತಪ್ಪಿಸಿಕೊಳ್ಳುವಂತೆ ಕೂಗಿಕೊಳ್ಳುತ್ತಲೇ ಓಡಿದೆವು. ಅದಕ್ಕಿಂತ ಹೆಚ್ಚಿಗೆ ಏನು ಮಾಡಲಾದೀತು ಹೇಳಿ?!' ಎಂದು ನ್ಯಾಯ ಒಪ್ಪಿಸಿದರು. ಈ ಸಮಜಾಯಿಷಿಯಿಂದ ಮುದುಕನಿಗೆ ತೃಪ್ತಿಯಾಗಲಿಲ್ಲ. ತಲೆಯನ್ನು ಒದರುತ್ತಾ... 'ನೀವೆಲ್ಲಾ ದೊಡ್ಡವರು, ಅವನಿನ್ನೂ ಹುಡುಗ, ಅದೇಗೆ ಅಂತವನನ್ನು ಹುಲಿಗೊಪ್ಪಿಸಿ ಬಂದಿರಿ?!' ಎಂದು ತಕರಾರು ಒಡ್ಡಿದ. ಇದು ಮುಂದೆ ನಡೆಯುವ ಬಿಸಿಬಿಸಿ ಮಾತುಕತೆಗಳಿಗೆ ಪೀಠಿಕೆಯಂತಿತ್ತು, ಇದರಿಂದಾಗಿ ಈಗಾಗಲೇ ನೊಂದ ಮುದುಕನ ಮನಸ್ಸಿಗೆ ಮತ್ತಷ್ಟು ಹಿಂಸೆಯಾಗುತ್ತಿತ್ತೇ ವಿನಃ ಯಾರೂ ಏನೂ ಮಾಡಲು ಸಾಧ್ಯವಿರಲಿಲ್ಲ. ನಿಜವಾಗಿ ಆ ಮುದುಕನಿಗೆ ಬೇಕಾಗಿದ್ದು ಸಾಂತ್ವನದ ನಾಲ್ಕು ಮಾತುಗಳು. ಹಾಗಾಗಿ ನಾನು ಮಾತು ಬದಲಿಸಿ 'ಈಗ ಆಗಿದ್ದಾಗಿದೆ, ಯಾರೂ ನಿನ್ನ ಮಗನನ್ನು ಹಿಂತಿರುಗಿ ತರಲು ಸಾಧ್ಯವಿಲ್ಲ, ಈಗೊಂದು ಕೆಲಸ ಮಾಡೋಣ, ಆ ಹುಲಿ ನಿಮ್ಮ ಮಗನನ್ನು ಕೊಂದ ಜಾಗದಲ್ಲಿ ನಾನೊಂದು ಕೋಣವನ್ನು ಕಟ್ಟುತ್ತೇನೆ, ಆ ಜಾಗದಲ್ಲಿ ಹುಲಿಯನ್ನು ಹೊಡೆಯಲು ಸಾಧ್ಯವಾದರೆ ನಿಮ್ಮ ಮಗನ ಆತ್ಮಕ್ಕೂ ಶಾಂತಿ ಸಿಗುತ್ತದೆ' ಎಂದು ಸಮಾಧಾನ ಮಾಡಲು ಯತ್ನಿಸಿದೆ. ಅವನ ಕಣ್ಣೆದುರಿಗೇ ಒಂದು ಕೋಣವನ್ನು ನಮ್ಮವರ ಕೈಲಿ ಬಂಗಲೆಯತ್ತ ಕಳುಹಿಸಿ, ಇನ್ನೊಂದು ಕೋಣವನ್ನು ಹೊಡೆದುಕೊಂಡು ಆ ಯುವಕ ಬಲಿಯಾದ ಜಾಗದತ್ತ ಹೊರಟೆ.

ನಾವು ಹೊರಟ ದಾರಿ ವಕ್ರಾತಿವಕ್ರ ತಿರುವುಗಳೊಂದಿಗೆ ಕಣಿವೆಯ ತಳಕ್ಕಿಳಿದು ಪೈನ್ ಮರಗಳ ಗುಂಪನ್ನು ದಾಟಿ ಇನ್ನೂ ಎರಡು ಮೈಲಿಗಳಷ್ಟು ಮುಂದುವರೆದಿತ್ತು, ಈ ಪೈನ್ ಮರಗಳ ಗುಂಪಿಗಿಂತ ಮುಂಚೆಯೇ ಆ ಯುವಕ ಬಲಿಯಾದ ಓಕ್ ಮರಗಳ ದಟ್ಟಣೆ ಸಿಗುತ್ತಿತ್ತು, ಮೂವತ್ತು ಗಜಗಳಷ್ಟು ವಿಸ್ತಾರವಾಗಿದ್ದ ಈ ಬಯಲಿನಲ್ಲಿ ವಿರಳವಾಗಿ ಓಕ್ ಮರಗಳು ಬೆಳೆದಿದ್ದವು. ನಾನು ಒಂದು ಬಲವಾಗಿದ್ದ ಓಕ್ ಸಸಿಯನ್ನು ಆರಿಸಿ, ಅದನ್ನು ಕುತ್ತಿಗೆಯ ಮಟ್ಟಕ್ಕೆ ಕಡಿದುಹಾಕಿ, ಕಾಂಡಕ್ಕೆ ಭದ್ರವಾಗಿ ಕೋಣವನ್ನು ಬಿಗಿದೆ. ಒಬ್ಬನಿಗೆ ಕೋಣಕ್ಕೆ ಹುಲ್ಲು ಕತ್ತರಿಸಿ ಹಾಕುವಂತೆ ಹೇಳಿ, ಜೊತೆಗಿದ್ದ ಇನ್ನೊಬ್ಬ ಸಹಾಯಕ ಮಾಧೋಸಿಂಗ್‌ನನ್ನು ಮರಹತ್ತಿ ಸೊಪ್ಪು ಕಡಿಯುವವನಂತೆ ನಟಿಸುತ್ತಾ, ಸೊಪ್ಪು ಕತ್ತರಿಸುವಾಗ ಸಾಮಾನ್ಯವಾಗಿ ಹಳ್ಳಿಗರು ಹೇಗೆ ಕೂಗಾಡುತ್ತಾರೋ ಹಾಗೆಯೇ ಮಾಡುವಂತೆ ಹೇಳಿದೆ. ಈ ಮಾಧೋಸಿಂಗ್ ಸಾಮಾನ್ಯನಲ್ಲ, ಈ ಹಿಂದೆ ಘರ್ವಾಲಿ ರೆಜಿಮೆಂಟ್‌ನಲ್ಲಿ ಸಿಪಾಯಿಯಾಗಿದ್ದವನು ಈಗ ಯುನೈಟೆಡ್ ಪ್ರಾವಿನ್ಸ್‌ನ ಮುಂಚೂಣಿ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ. ನಾನು ಬಯಲಿನ ಮೇಲ್ಭಾಗಕ್ಕಿದ್ದ ಬಂಡೆಯ ಮೇಲೆ ಬಂದೂಕು ಹಿಡಿದು ಸಿದ್ಧನಾಗಿ ಕುಳಿತೆ. ಅಕ್ಕಪಕ್ಕದಲ್ಲಿ ದಟ್ಟವಾದ ಪೊದೆಗಳಿದ್ದು, ಹಿಂದಕ್ಕೆ ಕಡಿದಾದ ಬೆಟ್ಟವಿತ್ತು.

ಹುಲ್ಲು ಕೊಯ್ಯುತ್ತಿದ್ದವನು ಸುತ್ತಮುತ್ತ ನಿರಾಳವಾಗಿ ಓಡಾಡಿಕೊಂಡು ಒಳ್ಳೆಯ ಹುಲ್ಲು ಕೊಯ್ಯುತ್ತಿದ್ದ. ಮಾಧೋಸಿಂಗ್ ಥೇಟ್ ಹಳ್ಳಿಗರಂತೆ ಜೋರಾಗಿ ಕೂಗಾಡುತ್ತಾ... ಹಾಡು ಹೇಳುತ್ತಾ... ಹಳ್ಳಿಗರೂ ನಾಚಿಕೊಳ್ಳುವಷ್ಟು ಗಲಭೆ ಮಾಡುತ್ತಿದ್ದ. ಇವನ ಗಲಾಟೆಗೆ ಹುಲಿ ನರಕದಲ್ಲಿದ್ದರೂ ಇಲ್ಲಿಗೆ ಬರುವ ಸಾಧ್ಯತೆಯಿತ್ತು, ನಾನು ಕಣ್ಣುಗಳಲ್ಲಿ ಇವನ್ನೆಲ್ಲಾ ನೋಡುತ್ತಾ... ಉಳಿದ ಇಂದ್ರಿಯಗಳನ್ನು ಹುಲಿಯ ಸೂಚನೆಗಾಗಿ ಮೀಸಲಿಟ್ಟಿದ್ದೆ. ಸದ್ಯಕ್ಕೆ ಸಿಗರೇಟು ಸೇದುತ್ತಾ ನಿಂತಿದ್ದೆ. ಬಂದೂಕು ನನ್ನ ತೋಳುಗಳಲ್ಲಿ ಮಗುವಿನಂತೆ ಮಲಗಿತ್ತು, ಹೀಗೇ.... ಸ್ವಲ್ಪ ಹೊತ್ತು ಕಳೆಯಿತು... ನನಗೇಕೋ ಆತಂಕ ಶುರುವಾಯಿತು. ಕೂಡಲೇ ಹುಲ್ಲು ಕೊಯ್ಯುತ್ತಿದ್ದವನಿಗೆ ನನ್ನತ್ತ ಬರುವಂತೆ ಸೂಚಿಸಿದೆ. ಮರದ ಮೇಲಿದ್ದ ಮಾಧೋಸಿಂಗ್‌ಗೆ ಸಿಳ್ಳೆ ಹೊಡೆದು ಮೌನವಾಗಿರುವಂತೆ ಹೇಳಿದೆ. ನನ್ನ ಎದುರಿನ ಬಯಲು ಮೂರೂ ಕಡೆ ತೆರವಾಗಿತ್ತು. ಮರದ ಮೇಲಿದ್ದ ಮಾಧೋಸಿಂಗ್ ನನ್ನ ಎಡಕ್ಕಿದ್ದ. ಹುಲ್ಲು ಕೊಯ್ಯುತ್ತಿದ್ದವನು ನನ್ನ ಎದುರಿಗಿದ್ದ. ಈಗಾಗಲೇ ಅಸಹನೆಯಿಂದ ಸಿಡಿಮಿಡಿಗೊಳ್ಳುತ್ತಿದ್ದ ಕೋಣ ನನ್ನ ಬಲ ಭಾಗಕ್ಕಿತ್ತು, ಇಲ್ಲಿಗೆ ಹುಲಿ ನನ್ನ ಕಣ್ಣುತಪ್ಪಿಸಿ ಬರುವ ಸಾಧ್ಯತೆಗಳೇ ಇರಲಿಲ್ಲ. ಹಾಗೆ ಮಾಡುವುದಾದರೆ ಅದು ಹಿಂದಿನ ತಗ್ಗಿನ ಕಡೆಯಿಂದಲೇ ಬರಬೇಕಾಗಿತ್ತು. ನಾನು ಅದಕ್ಕೂ ಸಿದ್ಧನಾಗಿದ್ದೆ. ನಾನು ಕುಳಿತಿದ್ದ ಬಂಡೆ ಬಲಕ್ಕೆ ಎಂಟತ್ತು ಅಡಿಗಳಷ್ಟು ತಗ್ಗಾಗಿ ಇಳಿದಿತ್ತು. ಅದರ ಅಂಚಿನಲ್ಲಿ ದಟ್ಟವಾದ ಪೊದೆಗಳಿದ್ದವು. ಇದರೊಂದಿಗೆ ಬಂಡೆಯೂ ತೀರಾ ನಯವಾಗಿದ್ದ ಕಾರಣ ಹುಲಿ ಇತ್ತಲಿಂದ ಹತ್ತಲು ಕಷ್ಟವಾಗುತ್ತಿತ್ತು. ಆದರೆ ಹತ್ತುವ ಸಾಧ್ಯತೆಯೂ ಇತ್ತು. ಅದೊಂದು ಪಕ್ಷ ಹಾಗೆ ಮಾಡಿದರೆ ನಾನು ಇಲ್ಲಿಂದ ಓಡಿದಂತೆ ಮಾಡುವುದು... ಅವಳು ಖಂಡಿತಾ ನನ್ನ ಬೆನ್ನುಹತ್ತುತ್ತಿದ್ದಳು. ನನಗಷ್ಟು ಸಾಕಿತ್ತು.

ಅದು ಬಂದೇ ಬರುವ ಗ್ಯಾರಂಟಿ ಇತ್ತು, ಮಾಧೋಸಿಂಗ್ ಎಬ್ಬಿಸಿದ್ದ ಗಲಾಟೆಗೆ ಅದು ಆಕರ್ಷಿತವಾಗಿತ್ತು. ನನ್ನ ನಿರೀಕ್ಷೆ ನಿಜವಾಯಿತು... ಹುಲಿ ಬಂದಿತು. ಇದ್ದಕ್ಕಿದ್ದಂತೆ ಬದಲಾದ ದೃಶ್ಯದಿಂದ ಅದು ವಿಚಲಿತವಾದಂತಿತ್ತು. ನಾನು ಅದು ಹೊಂಚುಹಾಕಿ ಏರುವ ದಿಕ್ಕಿಗೆ ಮುಖಮಾಡಿ ನಿಂತಿದ್ದೆ. ಮಾಧೋಸಿಂಗ್ ಗಲಾಟೆ ನಿಲ್ಲಿಸಿದ್ದ. ಹುಲ್ಲು ಕೊಯ್ಯುವವನು ನನ್ನ ಸಮೀಪಕ್ಕೆ ಬಂದಿದ್ದ. ಈ ಎಲ್ಲಾ ಬದಲಾವಣೆಗಳ ಕಾರಣ ಹುಲಿ ಮುಂದಿನ ನಡಿಗೆಯನ್ನು ಯೋಜಿಸುತ್ತಿದೆ ಎಂದೆನಿಸುತ್ತಿತ್ತು, ನನ್ನ ಕೆಳಗಿನ ಪೊದೆಗಳಾಚೆಗೆ ಹುಲಿ ಆತಂಕದಿಂದ ಓಡಾಡುತ್ತಿರುವುದನ್ನು ಇಂದ್ರಿಯಗಳು ಗ್ರಹಿಸುತ್ತಿದ್ದವು. ಸ್ವಲ್ಪ ಹೊತ್ತು ಹಾಗೇ ಸರಿದ... ನಿಶ್ಶಬ್ದ. ಅದಾದನಂತರದಲ್ಲಿ ಕಣಿವೆಯ ... ಒಂದು ಕಡ್ಡಿ 'ಛಟ್' ಎಂದು ಮುರಿದ ಸದ್ದು... ಒಂದುಕ್ಷಣ ನಿರಾಳವಾಯಿತು.



ಚಾವಫರ್‌ನ 11 ನರಭಕ್ಷಕಗಳು

ಕನ್ನಡ ರೂಪಾಂತರ: ಡಾ. ಟಿ.ಎಸ್.ವಿವೇಕಾನಂದ

ಸದ್ಯಕ್ಕೆ ಒಂದು ಅವಕಾಶ ಕಳೆದುಹೋ... ಇದು ಇಂದಿನ ಕಡೆಯ ಅವಕಾಶವಲ್ಲವೆ... ಸ್ಪಷ್ಟವಾಗಿ ಅನಿಸುತ್ತಿತ್ತು. ಅದು ಮತ್ತೆ ಬಂದ... ಮನುಷ್ಯರು ತಪ್ಪಿಸಿಕೊಂಡರೆ ಏನಂತೆ? ಕೋ... ಅಂದುಕೊಂಡೇ ಅದು ಹಿಂತಿರುಗಿದಂತಿತು... ಹೆಚ್ಚು ಹೊತ್ತು ಕಾಯುವ ಅಗತ್ಯವಿರಲಿಲ್ಲ, ... ಬರುತ್ತದೆಂದು ಅನಿಸುತ್ತಿತ್ತು. ನನ್ನ ಮುಂದೆ ... ಗಂಟೆಗಳಷ್ಟು ಹಗಲಿತ್ತು. ಈ ಕ್ಷಣವೇ ಹೊರಟ... ಬೆಟ್ಟದ ಮೇಲೆ ಹುಲಿಗೆ ಸುಳಿವೇ ಸಿಗದ... ಕೂರಬಹುದಿತ್ತು. ಅಲ್ಲಿಂದ ಕೋಣಕ್ಕೆ ... ಗಜಗಳಾಗುತ್ತಿತ್ತು. ನನ್ನ .275 ಬಂದೂಕು ... ಹೇಳಿಮಾಡಿಸಿದಂತಿತ್ತು, ಈ ಬಾರಿ ಅದನ್ನು ಬ... ಇರಲಿಲ್ಲ. ಒಂದೇ ಗುಂಡಿಗೆ ಕೊಲ್ಲಲಾಗದಿ... ಗಂಭೀರವಾಗಿ ಗಾಯಗೊಳಿಸಿಬಿಡಬೇಕೆಂದು... ಸಿದ್ದೆ. ಅದು ಈವರೆಗೂ ಕೊಟ್ಟಿರುವ ಕಾಟವ... ಭಯವಾಗುತ್ತಿತ್ತು. ಗಾಯಗೊಳಿಸಿದರೆ ... ಜಾಡನ್ನಿಡಿದಾದರೂ ಅದನ್ನು ಮುಗಿಸು... ಸಿಗುತ್ತಿತ್ತು, ಮತ್ತೆ ಅದು ಪ್ರವಾಸ ಹೊರಟ... ಚದರ ಮೈಲಿಗಳ ಅಗಾಧ ವಿಸ್ತಾರದ... ಹುಡುಕುವುದಕ್ಕಿಂತ ಇದು ಎಷ್ಟೋ ಮೇ...

ಈ ಹೊತ್ತಿನಲ್ಲಿ ನನ್ನೊಂದಿಗಿದ್ದವರನ್ನು ... ವುದು ಕಷ್ಟದ ಕೆಲಸ. ಆದರೆ ಈಗ ... ಬಂಗಲೆಗೆ ಕಳುಹಿಸುವುದು ಕೊಲೆ... ರೂಪವಾಗುತ್ತಿತ್ತಷ್ಟೇ. ಹಾಗಾಗಿ ನನಗೆ ಅಗತ್ಯ... ಅವರನ್ನು ಹಿಂದಿಟ್ಟುಕೊಂಡು ಹೋಗಬೇಕ...

ಈ ಬಾರಿ ಹುಲಿ ಏನು ಮಾಡಿದರೂ ... ಸಾಧ್ಯವಿಲ್ಲದಂತೆ ಕೋಣವನ್ನು ಕಟ್ಟಿದ್ದೆವು. ಹಾ... ವನ್ನು ಕೊಂದರೆ ಅದು ಅಲ್ಲೇ ತಿನ್ನಬೇಕಾಗು... ಕುಳಿತರೆ ಎದುರಿನ ಬೆಟ್ಟದ ಮೇಲಿಂದ ಅದಕ್ಕೆ ... ಗುಂಡುಗಳು ಬಡಿಯುವುದು ಖಚಿತವಾಗಿ...

ನಾನು ಎದುರಿನ ಬೆಟ್ಟದತ್ತ ಹೊರಟೆ. ... ಬರುವಲ್ಲಿಗೆ ನಮಗೆ ಅಗಾಧವಾದ ಬಾಡು... ಎದುರಾಯಿತು. ಇಬ್ಬರನ್ನು ಹಿಂದಿಟ್ಟುಕೊಂಡು... ತೂರುವ ಸಾಹಸ ಮಾಡುವುದು ಆತ್ಮಹ... ಪ್ರಯತ್ನವಾಗುತ್ತಿತ್ತು. ನಾನು ಹೇಗಾದರೂ ... ದಾರಿಯನ್ನು ತಪ್ಪಿಸಿ ನಡೆಯಬೇಕೆಂದು ... ಹೊರಟೆ. ಈ ಜಿಗ್ಗು ಕೆಳಗೆ ನೂರಾರು ಗ... ಕೊನೆಗೆ ಒಂದು ಹಳ್ಳದ ದಂಡೆಗೆ ಬಂದು ಕ... ಈ ಹಳ್ಳದ ದಂಡೆಗೂ ಜಿಗ್ಗಿಗೂ ನಡು... ಕಾಲುದಾರಿ ಹರಿದಿತ್ತು.

ಈ ಹಳ್ಳ ಸುಮಾರು ಹತ್ತು ಅಡಿ ... ಅಡಿ ಆಳ ಇತ್ತು. ನಾವು ಸ್ವಲ್ಪ ದೂರ ಕಾಲ... ಸಾಗಿ ಕಡಿದು ಕಡಿಮೆ ಇರುವ ಜಾಗವನ್ನ... ಹಳ್ಳದೊಳಕ್ಕೆ ಇಳಿದೆವು. ಇಳಿಯುವಾಗ ನಾನು ... ಒಂದು ಕಲ್ಲಿನ ಮೇಲೆ ಕೈಯೂರಿದೆ. ತಕ್ಷ... ಕುರುಡುಗಪ್ಪಟ ಹಕ್ಕಿಯೊಂದು ಅನಿರೀಕ್ಷಿತ... ಹಾರಿತು. ಒಂದುಕ್ಷಣ ಜೀವ ಬಾಯಿಗೆ ಬಂ... ಅದು ಬಚ್ಚಿದ್ದು ಹಾರಿದ ಜಾಗವನ್ನು ... ಅಲ್ಲಿ ಎರಡು ಮುದ್ದಾದ ಮೊಟ್ಟೆಗಳಿದ್ದವು. ... ಬಣ್ಣಕ್ಕಿದ್ದ ಮೊಟ್ಟೆಗಳ ಮೇಲೆ ಕಡು ಕಂ... ಮಚ್ಚೆಗಳಿದ್ದವು. ಎರಡೂ ವಿಚಿತ್ರ ಆಕಾರಕ್ಕಿ... ಉದ್ದಕ್ಕಿದ್ದು ಮೂತಿ ಚೂಪಾಗಿದ್ದರೆ ... ಅಮೃತಶಿಲೆಯ ಗೋಲಿಯಂತಿತ್ತು. ನನ್ನ ... ಸಂಗ್ರಹದಲ್ಲಿ ಈ ಹಕ್ಕಿಯ ಮೊಟ್ಟೆಗಳು ಒಂದ... ನಾನು ಅವನ್ನು ಎಡಗೈಲಿ ಎತ್ತಿಕೊಂಡು, ಜ... ಹಿಡಿದು ಮುಂದಕ್ಕೆ ನಡೆದೆ.

ಬಸವಣ್ಣನ ಕುಲಗೋತ್ರಗಳ ಮೂಲ

ಬಸವಣ್ಣ ತನ್ನ ಒಂದು ವಚನದಲ್ಲಿ

"ಇವನಾರವ ಇವನಾರವ, ಇವನಾರವನೆಂದೆನಿಸದಿರಯ್ಯಾ


ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ

ಕೂಡಲಸಂಗಮದೇವಾ

ನಿಮ್ಮ ಮನೆಯ ಮಗನೆಂದೆನಿಸಯ್ಯಾ."

ಎಂದು ಹಂಬಲಿಸುತ್ತಾನೆ. ಅವನು ಯಾವುದೋ ಒಂದು ಗುಂಪಿಗೆ, ಜಾತಿಗೆ ಸೇರಿದವನಾಗಿರದೆ ಎಲ್ಲರಲ್ಲಿ ಒಬ್ಬನಾಗಿ ಬೆರೆಯಲು ಬಯಸಿದ್ದನೆಂಬುದನ್ನು ಅವನ ಅನೇಕ ವಚನಗಳು ಸ್ಪಷ್ಟಪಡಿಸಿವೆ. ಆದರೆ ಅವನ ಅನುಯಾಯಿಗಳು ಅವನನ್ನೊಂದು ಜಾತಿಗೆ ಗಂಟು ಹಾಕಿದ್ದಾರೆ.

ಈ ಹಿನ್ನೆಲೆಯಲ್ಲಿ ಡಾ. ಬಂಜಗೆರೆ ಜಯಪ್ರಕಾಶ್ ಅವರು ತಮ್ಮ 'ಆನು ದೇವಾ ಹೊರಗಣವನು' ಎಂಬ ಕೃತಿಯಲ್ಲಿ ಬಸವಣ್ಣನು ಮಾದರಸ-ಮಾದಲಾಂಬಿಕೆಯರ ಉದರ ಸಂಜಾತನಾಗಿರದೆ ಕರಸಂಜಾತನಾಗಿರಬಹುದು ಎಂಬ ಅನುಮಾನಿತ ಸತ್ಯವನ್ನು ಪ್ರತಿಪಾದಿಸುತ್ತಾರೆ. ಲಿಂಗಾಯತ ಜಾತಿಯವರು ಬಸವಣ್ಣ ಹುಟ್ಟನಿಂದ ಶೈವ ಬ್ರಾಹ್ಮಣ, ಆದರೆ ಚಿಕ್ಕಂದಿನಲ್ಲೇ ವರ್ಣವ್ಯವಸ್ಥೆಯ ಕಂದಾಚಾರಗಳನ್ನು ಪ್ರತಿಪಾದಿಸುತ್ತಿದ್ದ ಬ್ರಾಹ್ಮಣ ಜಾತಿಯನ್ನು ತೊರೆದು, ಜನಿವಾರವನ್ನು ಕಿತ್ತು ಹಾಕಿ, ಲಿಂಗಾಯತ ಧರ್ಮವನ್ನು ಸ್ಥಾಪನೆ ಮಾಡಿದ. ಅವನು ನಮ್ಮವನು, ಅವನನ್ನು ಮಾದಿಗ ಜಾತಿಗೆ ಪರಿವರ್ತಿಸುವುದು ಅತ್ಯಂತ ಹೇಯಕೃತ್ಯ ಎಂದು ಕೆಂಡಕಾರುತ್ತಿದ್ದಾರೆ.



ಈ ಹಿನ್ನೆಲೆಯಲ್ಲಿ ಡಾ. ಎಂ. ಚಿದಾನಂದಮೂರ್ತಿಯವರು "ಬಸವಣ್ಣನವರ ವಂಶದ ನಿಜ ಚಿತ್ರ" ಎಂಬ ತಮ್ಮ ಇತ್ತೀಚಿನ ಲೇಖನದಲ್ಲಿ (ಬಸವ ಪಥ, ಜುಲೈ 2007) ಈ ರೀತಿ ಉಲ್ಲೇಖಿಸಿದ್ದಾರೆ: "ಬಸವನ ಬಾಗೇವಾಡಿ ಮತ್ತು ಅಲ್ಲಿಗೆ ಸಮೀಪದ ಇಂಗುಳೇಶ್ವರದಲ್ಲಿ ತಾವು ಬಸವಣ್ಣನವರ ವಂಶಸ್ಥರೆಂದು ಹೇಳಿಕೊಳ್ಳುವ ಕುಲಕರ್ಣಿಗಳು ಬ್ರಾಹ್ಮಣರೇ ಆಗಿರುವುದನ್ನು ಆ ಮನೆಗಳಿಗೆ ನಾನೇ ಭೇಟಿ ಕೊಟ್ಟು ಖಚಿತಪಡಿಸಿಕೊಂಡಿದ್ದೇನೆ. ಬಾಗೇವಾಡಿಯ ಅವರ ವಂಶಸ್ಥರು ಕೌಂಡಿನ್ಯ ಗೋತ್ರದವರು. ಇಂಗುಳೇಶ್ವರದ ಅವರ (ಬಸವಣ್ಣನವರ) ತಾಯಿಯ ತೌರು ಮನೆಯಲ್ಲಿ ದೊರಕುವ ವಂಶಾವಳಿಯು ಅದನ್ನೇ ಘೋಷಿಸುತ್ತದೆ." 'ಬಸವಪಥ'ದ ಅದೇ ಸಂಚಿಕೆಯ ಪುಟ 64 ರಲ್ಲಿ ಡಾ. ಎಚ್. ಚಂದ್ರಶೇಖರ ಅವರು ಡಾ. ಸಿದ್ದಯ್ಯ ಪುರಾಣಿಕರ "ಚೆನ್ನಬಸವೇಶ್ವರ ಚರಿತ್ರೆ ಮೇಲೆ ಹೊಸ ಬೆಳಕು" ('ಬಸವ ಪಥ' ಸಂಪುಟ 11, ಸಂಚಿಕೆ 6 ಪುಟ 29-30, 1989) ಎಂಬ ಲೇಖನವನ್ನು ಉಲ್ಲೇಖಿಸುತ್ತಾ ಹೀಗೆ ಹೇಳುತ್ತಾರೆ: "ಮಾದಲಾಂಬಿಕೆಯ ತವರುಮನೆಯ ವಂಶಾವಳಿಯ ಚಿತ್ರವನ್ನು (ಇದು ಇಂಗಳೇಶ್ವರದ ಕುಲಕರ್ಣಿ ಮನೆತನದ ವಂಶಾವಳಿಯ ಚಿತ್ರ) ಡಾ. ಸಿದ್ದಯ್ಯ ಪುರಾಣಿಕ ಅವರು ಪ್ರಕಟಿಸಿದ್ದಾರೆ. ಈ ಮನೆತನದವರು ಇಂದಿಗೂ ಇಂಗಳೇಶ್ವರದಲ್ಲಿ ವಾಸವಾಗಿರುವ ಸ್ಮಾರ್ತ ಸಂಪ್ರದಾಯಕ್ಕೆ ಸೇರಿದ (ಅಂದರೆ ಶೈವ ಬ್ರಾಹ್ಮಣ) ಕಣ್ವ-ಕೌಂಡಿನ್ಯ ಗೋತ್ರದವರು. ಈ ವಂಶಾವಳಿಯಲ್ಲಿ ಮಾದಲಾಂಬಿಕೆಯನ್ನು ಬಾಗೇವಾಡಿಯ ಕಶ್ಯಪ ಗೋತ್ರದ ಮಾದರಸನಿಗೆ ಮದುವೆ ಮಾಡಿಕೊಡಲಾಗಿತ್ತು ಎಂದು ಸ್ಪಷ್ಟವಾಗಿ ಉಲ್ಲೇಖವಾಗಿದೆ."

ಅಂದರೆ ಬಸವಣ್ಣನ ತಾಯಿ ಮಾದಲಾಂಬಿಕೆಯ ತವರು ಮನೆಯವರು ಕಣ್ವ-ಕೌಂಡಿನ್ಯ ಗೋತ್ರಕ್ಕೆ ಸೇರಿದ ಶೈವ ಬ್ರಾಹ್ಮಣರು ಹಾಗೂ ಬಸವಣ್ಣನ ತಂದೆ ಮಾದರಸನ ಮನೆಯವರು ಕಶ್ಯಪ ಗೋತ್ರದವರು ಎಂದು ಹೇಳಿದ ಹಾಗಾಯಿತು. ಬಸವಣ್ಣನ ಮೂಲವನ್ನು ಬೇಧಿಸುವ ದಿಕ್ಕಿನಲ್ಲಿ ನಾವು ಅವನ ತಂದೆ ತಾಯಿಯರಿಗೆ ಮಾತ್ರ ಸೀಮಿತರಾಗದೆ ಇನ್ನೂ ಹಿಂದ-ಹಿಂದಕ್ಕೆ ಅವನ ವಂಶಾವಳಿಯ ಮೂಲಕ್ಕೆ ಹೋಗಬಹುದಲ್ಲವೆ? ಕಣ್ವ-ಕೌಂಡಿನ್ಯ ಗೋತ್ರ, ಕಶ್ಯಪ ಗೋತ್ರಗಳು ಏನನ್ನು ಸೂಚಿಸುತ್ತವೆ?

ಕಣ್ವನು ಕಶ್ಯಪ ಗೋತ್ರದ ಒಬ್ಬ ಮಹರ್ಷಿ, ಶಕುಂತಲೆಗೆ ಆಶ್ರಯ ನೀಡಿದವನು ಎಂದು ಮಹಾಭಾರತದಲ್ಲಿ ಅವನ ಪ್ರಸ್ತಾಪ ಬರುತ್ತದೆ. ಇನ್ನು ಕೌಂಡಿನ್ಯ ಮತ್ತು ಕಶ್ಯಪರಂತಹ ಋಷಿಗಳ ಮೂಲವನ್ನು ಕುರಿತು ಬಸವಣ್ಣನೇ ತನ್ನ ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ:

ಕುಲವನರಸದಿರಿಂ ಬೋ! ಕುಲದಿಂದ ಮುನ್ನೇನಾದಿರಿಂ ಭೋ!

ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ,

ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ ಕಾಣಿ ಭೋ!

ನಮ್ಮ ಕೂಡಲಸಂಗನ ವಚನ ವಿಂತೆಂದುದು:

ಶ್ವಪಚೋಪಿಯಾದ ಡೇನು, ಶಿವ ಭಕ್ತನೆ ಕುಲಜಂ ಭೋ! (ಬ.ವ.ಸಂ. ಪುಟ 147)


ಕೌಂಡಿನ್ಯ ಎಂದರೆ ನಾವಿದ (ಕ್ಷೌರಿಕ) ವೃತ್ತಿಯವನು, ಕಶ್ಯಪ ಎಂದರೆ ಕಮ್ಮಾರ ವೃತ್ತಿಯವನು ಎಂದು ವೇದ್ಯವಾಗುತ್ತದೆ. ಅಷ್ಟೇ ಅಲ್ಲ, ಬ್ರಹ್ಮನ ಮಗ ಮರೀಚಿ, ಮರೀಚಿಯ ಮಗ ಕಶ್ಯಪ ಮಹರ್ಷಿ, ಈತನಿಗೆ ದಕ್ಷ ಪುತ್ರಿಯರಾದ ದಿತಿ, ಅದಿತಿ, ದನು, ಕಲಾ ಇತ್ಯಾದಿ ಹದಿಮೂರು ಮಂದಿ ಮಡದಿಯರಿದ್ದರು, ಅವನು ಪುತ್ರಕಾಮೇಷ್ಟಿ ಯಾಗ ಮಾಡಿ ದೈತ್ಯ ಆದಿತ್ಯ ದಾನವ, ಗರುಡ, ಗಂಧರ್ವ ಇತ್ಯಾದಿ ಬಹುರೂಪಿ ಸಂತಾನ ವನ್ನು ಪಡೆದ ಎಂದು ಮಹಾಭಾರತದ ಆದಿಪರ್ವದಲ್ಲಿ ವರ್ಣಿಸಲಾಗಿದೆ. ಕಶ್ಯಪನು ಗೋತ್ರಪ್ರವರ್ತಕರಾದ ಸಪ್ತ ಮಹರ್ಷಿಗಳಲ್ಲಿ ಮೊದಲನೆಯವನು. ಅತ್ರಿ, ಭರದ್ವಾಜ ವಿಶ್ವಾಮಿತ್ರ, ಗೌತಮ, ಜಮದಗ್ನಿ ಮತ್ತು ವಸಿಷ್ಠರು ಅನಂತರದವರು. ಕಶ್ಯಪನ ಇನ್ನೊಂದು ವಿಶೇಷವೇನೆಂದರೆ, ಸಾಮಾನ್ಯವಾಗಿ ಅಜ್ಞಾತ ಗೋತ್ರದವರು ಕಶ್ಯಪನನ್ನೇ ತಮ್ಮ ಮೂಲ ಪುರುಷನನ್ನಾಗಿಟ್ಟುಕೊಂಡು ತಮ್ಮ ಗೋತ್ರವನ್ನು ಕಾಶ್ಯಪಗೋತ್ರವೆಂದು ಹೇಳಬಹುದು ಎಂದು ಧರ್ಮಶಾಸ್ತ್ರಗಳು ಸಾರುತ್ತವೆ. (ಪುರಾಣ ನಾಮ ಚೂಡಾಮಣಿ, ಪುಟ 89-90).

ಅಂದರೆ ಸೃಷ್ಟಿಯ ವಿವಿಧ ರೂಪಗಳಾದ ದೇವ, ದಾನವ 'ಯಕ್ಷ' ಗಂಧರ್ವರೆಲ್ಲರೂ ಕಶ್ಯಪ ಗೋತ್ರದ ಮಾನವರೇ ಎಂದಾಯಿತಲ್ಲವೆ? ಪಂಪ ಮಹಾಕವಿ ಹೇಳುವಂತೆ 'ಮಾನವ ಜಾತಿ ತಾನೊಂದೆ ವಲಂ' ಎಂದು ದೃಢಪಟ್ಟಿತು. ಹೀಗಿರುವಾಗ ನಾನು ಬ್ರಾಹ್ಮಣ, ಅವನು ಹೊಲೆಯ; ನಾನು ಲಿಂಗಾಯತ, ಅವನು ಮಾದಿಗ ಎಂಬ ಭೇದಭಾವ ಹೇಗೆ ಉದ್ಭವವಾಯಿತು?

ಕಾಲಾನುಕ್ರಮದಲ್ಲಿ ಬುದ್ಧಿವಂತರಾದ ಸ್ವಾರ್ಥಿಗಳು ಧರ್ಮದ ಹೆಸರಿನಲ್ಲಿ ಶ್ರಮಿಕರನ್ನು ಶೋಷಿಸಿ, ತಾವು ಮಾತ್ರ ಸುಖಲೋಲುಪ ಜೀವನ ನಡೆಸಲು ಚಾತುರ್ವರ್ಣಗಳು ಅನಂತರ ಜಾತಿ ಉಪಜಾತಿಗಳು ಉಂಟಾಗಿರಬೇಕು.

ಈ ಹಿನ್ನೆಲೆಯಲ್ಲಿ ಎಲ್ಲಾ ಮಾನವರನ್ನು ಒಟ್ಟುಗೂಡಿಸಿ ಒಂದು ಮುಖ್ಯ ಪ್ರವಾಹದಲ್ಲಿ ತಂದು ಸಮಾನತೆ, ಸೋದರಭಾವಗಳನ್ನು ಬೆಳೆಸುವ ಒಂದು ಹೊಸ ಸಂಪ್ರದಾಯಕ್ಕೆ ಬಸವಣ್ಣ ಚಾಲನೆ ನೀಡಿರುವುದು ವಚನ ಸಾಹಿತ್ಯದಿಂದ ಅಭಿವ್ಯಕ್ತವಾಗುತ್ತದೆ. 12ನೇ ಶತಮಾನದಲ್ಲಿ ನಡೆದ ಶರಣರ ಈ ಸಾಮಾಜಿಕ-ಧಾರ್ಮಿಕ ಕ್ರಾಂತಿ ಪುನಃ ಕಾಲಾನುಕ್ರಮದಲ್ಲಿ ಶಿಥಿಲಗೊಂಡು ಕುಲಹದಿನೆಂಟು ಜಾತಿ, ಉಪಜಾತಿಗಳಾಗಿ ಸಿಡಿದು ಹೋಗಿರುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಇಂದು ನಮಗೆ ಬಸವ ತತ್ವಗಳು ಮುಖ್ಯವಾಗಬೇಕೇ ಹೊರತು ಬಸವಣ್ಣನ ಜಾತಿಯ ಮೂಲವಲ್ಲ.

-ಪ್ರೊ. ಬಿ.ವಿ. ವೀರಭದ್ರಪ್ಪ



ಸುಮ್ಮನಿರುವ ನಿಧಾನ

ಇದ್ದರೂ ಇರದ ಜೀವ
ಸದ್ದಿಲ್ಲದೇ ಒಳಗೇ ದಣಿದ ಭಾವ
ಕಣ್ಣು ಕಿವಿ ಬಾಯಿ.... ನಿಷ್ಕ್ರಿಯ
ಮಿಥ್ಯಕ್ಕೇ ಬೆದರಿ ನಿರ್ವೀರ್ಯ


ಭಯಂಕರ ನಾಶದ ಉತ್ಪಾತ
ಅಮಾನುಷ ದಾಳಿಗೆ ಅಸಹಜ ಸಂತ!
ಕ್ರೌರ್ಯದ ಅನಂತ ಮುಖ
ಅನುಭವಿಸಿಯೂ ನಗುವ ಸುಖ!

ನಿಗೂಢ ಹರಡಿದ ಕತ್ತಲು
ನಾಡೂಕು ಬಚ್ಚಿಟ್ಟ ಬೆತ್ತಲು
ಎಲ್ಲೆಯೊಳಗೇ ತಳಮಳಿಸುವ ಮುಗಿಲು
ಬೆಂಕಿ ಜಲವ ದಹಿಸೀತೆಂಬ ದಿಗಿಲು!

ಸುತ್ತ ಕಾಲಕೊಲ್ಲಲು ನೂರಾಟ
ಕಂಡರೂ ಕಾಣಬಾರದ ನೋಟ
ಜಾಣ ಕಿವುಡಿನ ನೀತಿ
ಉಸಿರೆತ್ತಲಾರದಂತ ಭೀತಿ!

ದಮನಿತ ಚೋದ್ಯದೀ ಕಥೆಗೆ ಸಾವಿಲ್ಲ
ಪ್ರಾಣಕ್ಕೆ ಬೇಕೆಂದರೂ ಹೃದ್ಯ ನೆಲೆಯಿಲ್ಲ!
ಅರಳಿದ ನೋವಿಗೆ ಮೂಕಮೌನ
ಸುಮ್ಮನಿರುವ ನಿಧಾನ!

■ ರೂಪ ಹಾಸನ



ಎಂ.ಬಿ. ಅಬ್ದುಲ್ ರೆಹಮಾನ್‌ರಿಗೆ 'ಲಂಕೇಶ್ ಪ್ರಶಸ್ತಿ'

ಶಿವಮೊಗ್ಗದ ಕರ್ನಾಟಕ ಸಂಘವು ಪ್ರತಿವರ್ಷ ಮುಸ್ಲಿಮ್ ಬರಹಗಾರರ ಅತ್ಯುತ್ತಮ ಕೃತಿಗೆ ಪಿ. ಲಂಕೇಶ್ ಪ್ರಶಸ್ತಿಯನ್ನು ನೀಡುತ್ತಿದ್ದು, 2006ನೇ ಸಾಲಿನಲ್ಲಿ ಪ್ರಕಟವಾದ ಎಂ.ಬಿ. ಅಬ್ದುಲ್ ರೆಹಮಾನ್‌ರವರ 'ಬಿಡುಗಡೆಯ ದಾರಿ' ಕಥಾ ಸಂಕಲನ ಈ ಪ್ರಶಸ್ತಿಗೆ ಆಯ್ಕೆಯಾಗಿದೆ. ಸತ್ಯ ಘಟನೆಗಳನ್ನು ಆಧರಿಸಿರುವ ಈ ಕೃತಿ ಬಿಡುಗಡೆ ಸಮಾರಂಭದ ದಿನ ದಾಖಲೆಯ ಮಾರಾಟವಾಗಿರುವುದು ವಿಶೇಷ.

ಸಮಾಜ ಸೇವೆಗಾಗಿ, ಅದರಲ್ಲೂ ಮುಖ್ಯವಾಗಿ ರಕ್ತದಾನದ ಜನಜಾಗೃತಿ ಹಾಗೂ ದಾಖಲೆಯ ರಕ್ತ ಸಂಗ್ರಹ ಮತ್ತು ವಿತರಣೆಗಾಗಿ 2003ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿರುವ ರೆಹಮಾನ್‌ರವರು ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ತು ಮತ್ತು ಬ್ಲಡ್ ಬ್ರೈನ್ ಬಯೋಮ್ ಬ್ಯಾಂಕಿಂಗ್ ಟ್ರಸ್ಟನ ಅಧ್ಯಕ್ಷರೂ ಆಗಿದ್ದಾರೆ. ನ್ಯಾಯವಾದಿ ಮತ್ತು ನೋಟರಿಯಾಗಿ ಸೇವೆ ಸಲ್ಲಿಸಿರುವ ಇವರು ಭೂಸುಧಾರಣೆ ಕಾನೂನು ಮಾಹಿತಿಯ ಮೊದಲ ಕನ್ನಡ ಪುಸ್ತಕ ಹಾಗೂ "ಪೊಂಚಿರಿ" ಎಂಬ ಬ್ಯಾರಿ ಗಾದೆಗಳ ಸಂಕಲನವನ್ನೂ ರಚಿಸಿದ್ದಾರೆ.

ಕನ್ನಡ ಕೃತಿಯನ್ನು ದುಬೈಯಲ್ಲಿ ಬಿಡುಗಡೆ ಮಾಡಿದ ಮೊದಲ ಕನ್ನಡಿಗ ಎಂಬ ನೆಲೆಯಲ್ಲಿ ಶಾರ್ಜಾದ ಕರ್ನಾಟಕ ಸಂಘವು ಇವರನ್ನು ಸನ್ಮಾನಿಸಿದೆ. ದುಬೈನ ಬ್ಯಾರಿಸ್ ಕಲ್ಚರಲ್ ಫೋರಂ ಇವರನ್ನು 2006ರಲ್ಲಿ 'ವರ್ಷದ ಬ್ಯಾರಿ' ಪುರಸ್ಕಾರವನ್ನು ನೀಡಿ ಗೌರವಿಸಿದೆ.

ಅಬ್ದುಲ್ ರೆಹಮಾನ್‌ರಿಂದ ಇನ್ನಷ್ಟು ಸೃಜನಶೀಲ ಕೃತಿಗಳು ಹೊರಬರಲಿ. ಆ ಮೂಲಕ ಕನ್ನಡ ಸಾಹಿತ್ಯ ಮತ್ತಷ್ಟು ಸಮೃದ್ಧಿಗೊಳ್ಳಲಿ ಎಂದು ಲಂಕೇಶ್ ಬಳಗ ಆಶಿಸುತ್ತದೆ.

- ಸಂಪಾದಕಿ

ಈ ಲಿಂಗಾಯಿತ್ರ ಬತ್ತ ಬತ್ತ ಸಾಬರಂಗಾಯ್ತಾ ಅವುರಲ್ಲಾ!

ವಾಟಿಸ್ಸೆ ಕುಳಿತ ಜಾಗದಿಂದ ಶರಾಪಿನ ವಾಸನೆ ಬದಲಿಗೆ, ಬೇರಾವುದೋ ವಾಸನೆ ಬಂದಿದ್ದರಿಂದ ಮೂಗುಮುಚ್ಚಿಕೊಂಡ ಜುಮ್ಮಿ,

"ಇದೇನು ಕುದುದು ಬಂದಿದ್ದಿಲ ಅಬ್ಬುಳಿಕಾಯ್ತದೆ?" ಎಂದಳು.

"ಇದು ಎಡೂರಪ್ಪನ ಬ್ರಾಂದು ಕಣಕ್ಕ."

"ಎಡೂರಪ್ಪುಂದು ಬ್ರಾಂದಿ ಇದ್ದತೇನ್ಲ?"

"ಇಲ್ಲ ಕಣಕ್ಕ. ಎಡೂರಪ್ಪ ಶರಾಪು ನಿಲ್ಸಿದ ಮ್ಯಾಲೆ ಅಗ್ಗವಾಗಿ ಏನು ಸಿಕ್ತೊ ಅದನ್ನೆಲ್ಲ ಕುಡಿತಾಯಿದ್ದಿವಿ. ಅಂತ ಕಳವೆ ಮಾಲಿಗ್ಯಲ್ಲ ಎಡೂರ್‌ಬ್ರಾಂಡ್ ಅಂತ ಹೆಸರಿಟ್ಟದ್ದಿವಿ ಅಷ್ಟೆ."

"ಅಂಗನ್ನು ಮತ್ತೆ, ಅದೇನಾರ ಆಗ್ಲಿ ಎಡೂರಪ್ಪ ಸರಾಪು ನಿಲ್ಸಿ ವಳ್ಳೆ ಕ್ಯಲಸ ಮಾಡಿದ ಕಂದ್ನ."

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಏನು ವಳ್ಳೆ ಕ್ಯಲ್ಸ ಮಾಡಿದನಕ್ಕ. ಅವುನು ನಿಲ್ಲಿಸಿದ ಅಂತ ನಾವು ಕುಡಿಯದು ಬುಟ್ಟಲ್ಲ. ಮದ್ಲಿಗಿಂತ ಜಾಸ್ತಿ ಕರ್ಚಾಯ್ತಾ ಅದೆ" ಎಂದು ವಾಟಿಸ್ಸೆ ಹೇಳುತ್ತಿದ್ದಾಗ ಬಂದ ಉಗ್ರಿ.

"ವಾಟಿಸ್ಸೆ, ಗೊತ್ತಾಯ್ತೇನೊ ವಿಸಿಯಾ?" ಎಂದ.

"ಯಾವ ಮ್ಯಾಟ್ರೂ?"

"ಆನುದೇವಾ ಪುಸ್ತಕ ಮಟ್ಟಗೋಲಾಕಿದರಂತೆ."

"ಅದು ಹಳೆ ಮ್ಯಾಟ್ರಾಯ್ತಲ್ಲೋ."

"ಅಂತೂ ಲಿಂಗಾಯಿತ್ರ ಸರ್ಕಾರ ಹೆದ್ರಿಸಿಬುಟ್ರು ಕಣೊ."

"ನಾನವತ್ತಲೇ ಹೇಳಲ್ಲವೇನೊ ನಿನಿಗೆ, ಯಾಕೊ ಲಿಂಗಾಯಿತ್ರ ಬತ್ತ ಬತ್ತ ಸಾಬರಂಗಾಯ್ತಾ ಅವುರೆ ಅಂಥವಾ. ಅದು ನಿಜ ಆಯ್ತಪ್ಪ."

"ಲಿಂಗಾಯಿತ್ರಲ್ಲೂ ವಳ್ಳೆ ಜನವುರೆ ಕಂದ್ನ" ಎಂದ ಕಾಳಮಾವ.

"ಯಾರಿದ್ದರೂ ತೋರು ದ್ವಡಪ್ಪ"

"ನಿಜಲಿಂಗಪ್ಪ ವಳ್ಳೆ ಮಸ್ನ ಕಂಡ್ನ."

"ನಿಜಲಿಂಗಪ್ಪನ ಕಾಲಾಯ್ತಲ್ಲ, ಈಗ್ಯಾರಿದ್ದರು ಹೇಳು?"

"ಅವುನ್ಯಾರೊ ಪಾಟೀಲ ಅಂತ ದೇವರಾಜ ಅರಸು ಎದ್ರಿಗೆ ಹೋರಾಡಿದನಲ್ಲ ಅವುನು ವಳ್ಳೆ ಇವುನೆಯ."

"ಓಹೊ ಕೆ.ಎಚ್. ಪಾಟೀಲ, ಅವುನ್ನ ಲಿಂಗಾಯಿತ್ರ ಲಿಂಗಾಯಿತ ಅಂತ್ಲೆ ಒಪ್ಪಗೊಂಡಿರಲಿಲ್ಲ ದ್ವಡಪ್ಪ" ಎಂದ ವಾಟಿಸ್ಸೆ.

"ಅಷ್ಟೆ ಅಲ್ಲ ಕಣೊ, ಅವುನ ಮಗ ಎಚ್.ಕೆ. ಪಾಟೀಲನ್ನ ಕಾಂಗ್ರೆಸ್ ಪಾರ್ಟಿ ಪ್ರೆಸಿಡೆಂಟ್ ಮಾಡ್ತಿವಿ ಅಂದ್ರೆ ನಾವಂತೂ ಒಪ್ಪೊದಿಲ್ಲ ಅವುನು ಲಿಂಗಾಯಿತ್ರೊನಲ್ಲ ಅಂತ ಪಟ್ಟಿಡುದ್ರು. ಕಡಿಗೂ ಅವುನು ಕಾಂಗ್ರೆ ಪಾರ್ಟಿ ಪ್ರೆಸಿಡೆಂಟಾಗಲೇಯಿಲ್ಲ" ಎಂದ ಉಗ್ರಿ.

"ಹೋಗ್ಲಿ ಪುಸ್ತಕ ಯಾಕೆ ಮಟ್ಟಗೋಲಾಕಿದ್ರು ಹೇಳ್ಳ?"

"ಬಸವಣ್ಣನ ಬೋದ್ರೆ ಸುಮ್ಮನೆ ಬುಟ್ಟರೇ. ಅದ್ಕೆ ಅಂಗೆ ಮಾಡ್ಯವುರೆ" ಎಂದ ಸೀರ.

"ಆನುದೇವಾ ಹೊರಗಣವನು ಪುಸ್ತಕ ಓದಿದ್ದಿಯಾ ಚಿಗಪ್ಪ?"

"ನಾನೆಲ್ಲಿ ಓದಿದ್ದೆನ್ಲ?"

"ಆನುದೇವಾ ಹೊರಗಣವನು ಪುಸ್ತಕ ರಿಜೆಕ್ಟ್ ಮಾಡಬೇಕು ಅಂತ ಹೋರಾಡಿದ ಯಾವ ಲೀಡ್ರು ಕೂಡ ಆ ಪುಸ್ತಕ ಓದಿಲವಂತೆ, ಇದಕೇನೇಳ್ತೀ?"

"ಅಂಗರೆ ಓದಿದೋರ ಮಾತ ಕೇಳಿಕಂಡು ಅಂಗಾಡಿದ್ರು ಅನ್ನು."

"ಎಸ್ ಎಜ್ಜಾಟ್ಲಿ ಕರಟ್ ದ್ವಡಪ್ಪ, ಪುಸ್ತಕದಲ್ಲಿ ಬಸವಣ್ಣ ಮಾದಿಗನಿರಬೇಕು ಅಂತ ಒಂದನುಮಾನ ಯಸ್ತವುನೆ ಬಂಜಗರೆ ಜಯಪ್ರಕಾಶ. ಅದಕೆ ಇವುರು ಹಿಂಗಾಡಿ ಬುಡದೆ."

"ಬವುಶ ಬಸವಣ್ಣ ಆಚಾರ‍್ರೊನೊ ಗೌಡರೋನೊ ಅಂದಿದ್ರೆ ಇವುರಿಂಗಾಡ್ತಿರಲಿಲ್ಲ ಕಣೊ" ಎಂದ ಉಗ್ರಿ.

"ಈಗ್ಯಂಗಾಗ್ಯದೆ ನೋಡು, ಬಸವಣ್ಣ ಕುರುಬರೋನು ಅಂತ ಕುಂತವುರೆ. ಇದಕೇನೇಳ್ತೀ?"

"ತಗಳಪ್ಪ ಇದು ಒಂದು ಪಟ್ಟಿಯ, ಯಾರ್ಲ ಅಂಗಂದೋನು?" ಎಂದು ಸೀರ ಮಜವಾಗಿ ನಕ್ಕು ಸರಿಯಾಗಿ ಕೂತ.

"ಯಾರೊ ನಿನ್ನಂಥ ವಿದ್ವಾಂಸ ಅಂಗಂದು ಪುಸ್ತಕನೂ ಬರದಿದ್ದನಂತೆ ಚಿಗಪ್ಪ, ಮಾದಿಗರೋನು ಅಂತ ಬರದಿದ್ದಕ್ಕೆ ಪೈಟ್ ಮಾಡಿದ ಲಿಂಗಾಯಿತ್ರ ಈಗೇನು ಮಾಡ್ತರೆ ನೋಡಬೇಕು".



"ಇದ್ವಳ್ಳೆ ಗಾಳಿಗಂಟ್ಟು ನ್ಯಾಯಾಯತ್ನ" ಎಂದ ಕಾಳ ಮಾವ.

"ಗಾಳಿಗಂಟ್ಟು ನ್ಯಾಯನೆ ಮಾವ, ಕುರುಬರತ್ರ ನ್ಯಾಯ ಮಾಡಿ ಗೆದ್ದು ಬರ್ಲಿ ಈ ಲಿಂಗಾಯಿತ್ರ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಕುರುಬರತ್ರ ನ್ಯಾಯ ಮಾಡಿ ಗೆಲ್ಲ ಕಾಯ್ತದೇನೊ? ಅಂತ ಗುಳ್ಳೆನರಿನೇ ಕುರುಬರ ನ್ಯಾಯಕೆ ಬರಲ್ಲ ಅಂತಂತೆ" ಎಂದ ವಾಟಿಸ್ಸೆ. ನಗಾಡಿದ ಜುಮ್ಮಿ.

"ಅದ್ಯಾಕ್ಲ ಬರದಿಲ್ಲ ಅಂತೂ" ಎಂದಳು.

"ಯಾಕೆ ಅಂದ್ರೆ, ಅವುರನ್ಯಾಯ ಬೆಳಕರದ್ರೂ ಮುಗಿಯದಿಲ್ಲ, ಬೆಳಕರದಾಗ ಊರನಾಯಿ ನರಿ ಬಡತವ ಓಡಿಸಗಂಡೋಯ್ತವೆ. ಅದ್ಕೆ ಕುರುಬರನ್ಯಾಯಕೆ, ಆದಿನ್ಯಾರದೂ ಮದಿವಿಗೆ ನನ್ನ ಶ್ಯಪ್ಪನೂ ಬರದಿಲ್ಲ ಅಂತಂತೆ" ಎಂದು ವಾಟಿಸ್ಸೆ ನಗಾಡಿದ.

"ಅಂಗರೆ ಬಸವಣ್ಣನ ಜಾತಿ ವಿಸಿಯದಲ್ಲಿ ಕುರುಬರಿಗೂ ಲಿಂಗಾಯಿತರಿಗೂ ಜಗಳ ಬಿತ್ರು ಅನ್ನು?"

"ಆದ್ರು ಕುರುಬ್ರು ಬಸವಣ್ಣ ನಮ್ಮೊನು ಅಂತ ಜಗಳಕೋಗದಿಲ್ಲ ಕಣೊ."

"ನಿಜ ಬುಡು. ಅಂತ ಮಾದಿಗರೇ ಬಸವಣ್ಣ ನಮ್ಮೊನು ಅಂತ ಬರದಿರದು ಸರಿ ಅಂತ ಚಳವಳಿನೂ ಮಾಡಲಿಲ್ಲ, ಜಗಳನೂ ಮಾಡಲಿಲ್ಲ, ಇನ್ನು ಕುರುಬ್ರು ಮಾಡ್ಯರೇ?" ಎಂದ ಉಗ್ರಿ.

"ಅದ್ಯಾಕ್ ಮಾಡದಿಲ್ಲಾ?"

"ಬಸವಣ್ಣ ಕುರುಬಾಗಿದ್ರೆ, ಇಡೀ ಕರ್ನಾಟಕದ ಕುರುಬರ‍್ಯಲ್ಲ ಕುರಿ ಮಂದೆಯಂಗೆ ಅವು ನಿಂದೋಗರು, ಅವುನು ಸ್ಥಾಪನೆ ಮಾಡಿದ ಲಿಂಗಾಯಿತ್ರಿಗೆ ಎಲ್ಲಿ ಸವಾಲಾಯ್ತದ್ರೂ?" ಎಂದ ಉಗ್ರಿ.

"ಇದು ತಗಳೊ ಮಾತೆಯ ಬುಡು."

"ತಗಳೊ ಮಾತಲ್ಲ ದ್ವಡಪ್ಪ ಚರ್ಚೆ ಮಾಡೋ ಮಾತು. ಬಸವಣ್ಣ ಲಿಂಗಾಯಿತ್ರೋನಾದ ಅಂದೇಟಿಗೆ ಯಲ್ರೂ ಲಿಂಗಾ ಕಟ್ಟಿಗೊಂಡು ಲಿಂಗಾಯಿತ್ರಾಗಬೇಕು ಅನ್ನದೇನೊ, ಪರೆಗ್ ಜಾಂಪಲ್ ದ್ಯಾವೇಗೌಡ ಜೆಡಿಎಸ್ ಪ್ರೆಸಿಡೆಂಟ್ ಅಂಗಂತ ಇಡೀ ಒಕ್ಕಲೀಗರ‍್ಯಲ್ಲ ಜೆಡಿಎಸ್ಸೆ, ಅದೇತರ ಕುರುಬ್ರು ಬಾಡ ತಿನ್ನಬ್ಯಾಡಿ ಅನ್ನೊ ಬಸವಣ್ಣನ್ನ ಬುಟ್ಟುಕೊಟ್ಟು ಸುಮ್ಮನಿರಬವುದು."

ವಾಟಾಳರಿಗೆ ಬಿದ್ದ 'ಲಾಂಗ್' ಕನಸು ಪುರಾಣವು

"ಕನಸು, ಕನಸು ಕಾಣಿ. ಅವು ಎಂದಾದರು ನನಸಾಗುತ್ತವೆ" ಎಂದು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಎಳೆಯರಿಗೆ, ಯುವಕರಿಗೆ ಸೂಚಿಸುತ್ತಿದ್ದರು. ಈಗ ವಾಟಾಳ್ ನಾಗರಾಜ್ ಕನಸು ಕಂಡರಂತೆ. ಅವರು ಕಂಡದ್ದು ಮಧ್ಯರಾತ್ರಿಯಲ್ಲಂತೆ. ಬೆಳಗಿನ ಜಾವದ ಕನಸಾಗಿದ್ದರೆ ಅದು ಸತ್ಯ ಆಗಿರುತ್ತಿತ್ತು, ಅದಲ್ಲವಾದ್ದರಿಂದ ಅದು ಸತ್ಯವಾಗಲಾರದು ಎಂಬುದು ಅವರ ಆಶಯವಂತೆ!

ವಯಸ್ಸು ಮಾಗಿದ ಮೇಲೆ ಏನು ಬಂದರೂ ಕನಸ್ಸಿನಲ್ಲಿಯೇ ಬರಬೇಕು, ಕನಸಿನಲ್ಲಿಯೇ ಎಲ್ಲ ಮುಗಿದುಹೋಗಬೇಕು. ಅದು ಮಧ್ಯರಾತ್ರಿ ಕನಸಾದರೂ ಅಷ್ಟೆ, ಬೆಳಗಿನ ಜಾವದ ಕನಸಾದರೂ ಅಷ್ಟೆ! ಅದು ಹಾಗಿರಲಿ. ಅವರಿಗೆ ಬಿದ್ದ ಕನಸು ಎಂತಹದ್ದು?


ಚುನಾವಣೆಗಳು ಸಮೀಪಿಸುತ್ತಿವೆ. ಎಲ್ಲ ಕಡೆಯೂ ರೌಡಿಗಳದ್ದೇ ದರ್ಬಾರು (ಈಗಿನಂತೆಯೇ ಇದೆಯಲ್ಲ ಪರಿಸ್ಥಿತಿ ವಾಟಾಳರೆ-ಲೇಖಕ). ಅವರೇ ಒಂದು ಪಕ್ಷ ಕಟ್ಟಿದ್ದಾರೆ. ಅದರ ಹೆಸರು 'ಲಾಂಗ್ ಪಾರ್ಟಿ'. ರೌಡಿರಂಗ ಅದರ ನಾಯಕ (ಇಲ್ಲಿ ಎಡವಿದ್ದೀರಿ ವಾಟಾಳರೆ. ರೌಡಿರಂಗ ಅಂದರೆ ಅದಕ್ಕೆ ಖದರ್ರೇ ಇಲ್ಲ, ಈ ಹೆಸರು ಪುರಾನಾ ಜಮಾನಾಮೆಥಾ. ಕೂಗಾಡೊ ಕಿರುಚಾಡೊ ಉಡಿಪಡಿಗಳೆಲ್ಲ ಇಂತಹ ಹೆಸರು ಇಟ್ಟುಕೊಂಡಿರ್ತವೆ. ಈಗ ಏನಿದ್ದರೂ ಸ್ಪೆಸಿಫಿಕ್ ಆಗಿ ಇರಬೇಕು. ಲೇಟೆಸ್ಟ್ ಹೆಸರುಗಳು ಎಂದರೆ 'ಬಾಂಬ್ ಬೋರ', 'ಆಸಿಡ್ ಅಸ್ಲಂ', 'ಕೋತಿ ಕೊರಂಗು, 'ಲಾಂಗ್ ರಿಕ್ಕ' ಇಂತಹವು. ಇವಕ್ಕೆ ಇರುವ ಖದರೇ ಬೇರೆ ತರಹ. 'ರೌಡಿ ರಂಗ' ಅಂದರೆ 'ಯಾವ ರೌಡೀನ್ಲಾ ನಾನು ಕಾಣದ್ದು' ಅಂತ ಅಂದರೂ ಅನ್ನಬಹುದು. ಇನ್ನಾದರೂ ಇಂತಹ ಹೆಸರಿನ ಲೀಡರ್ ನಿಮ್ಮ ಕನಸಿಗೆ ಬೀಳುವಂತಾಗಲಿ-ಲೇಖಕ). ಚುನಾವಣೆಯ ಚಿಹ್ನೆ-ಜನಜನಿತ ಲಾಂಗ್!

ಮತದಾರ ಪ್ರಭುಗಳು ಇಂತಹ ಪಟಾಲಂಗಳು ಚುನಾವಣೆಗೆ ಸ್ಪರ್ಧಿಸಿದರೆ ಅವರು ತಾನೆ ಏನು ಮಾಡಲು ಸಾಧ್ಯ, ಅವರಿಗೂ ಪ್ರಾಣದ ಮೇಲೆ ಆಸೆ ಇರುತ್ತೆ (ಅಲ್ಲ, ಇಂತಹ ಪಾತಕಿಗಳನ್ನು ಬೆಳೆಸಿದ್ದು ನಮ್ಮಂತಹ ಭವ್ಯ ಕರ್ನಾಟಕದ ಕನಸು ಕಂಡ ರಾಜಕಾರಣಿಗಳೇ ಅಲ್ಲವಾ... ಅವರಿಗೆ ಮರ್ಯಾದೆ ಕೊಟ್ಟರೆ ಪರೋಕ್ಷವಾಗಿ ಅದು ನಿಮ್ಮಂತಹವರಿಗೆ ಸಲ್ಲಿಸಿದಂತೆಯೇ ತಾನೆ-ಲೇಖಕ) ಅವರಿಗೆ ಮತ ನೀಡುತ್ತಾರೆ. ಅವರೇ ಗೆಲ್ಲುತ್ತಾರೆ.

ಹೌದು, ವೃತ್ತಿ ರಾಜಕಾರಣಿಗಳೇನು ಮಾಡಬೇಕು?

ನಂಜನಗೂಡಿಗೆ ಹೋಗಿ ಹಜಾಮರ ಶಾಪು ತೆರೆಯಬೇಕು!

(ಸದ್ಯ ರಾಜಕಾರಣವೇ ವೃತ್ತಿ ಅಂದುಕೊಂಡಿದ್ದ ಈ ಮುಖೇಡಿಗಳಿಗೆ ವೃತ್ತಿ ಅಂತ ಒಂದನ್ನು ಮಾಡಲು ದಾರಿ ತೋರಿದ ಪಾತಕಿಗಳಿಗೆ ನಮೋ ಎನ್ನಲೇಬೇಕು. ಅದಿರಲಿ. 'ಆನುದೇವ ಹೊರಗಣವನು' ಕೃತಿಯಿಂದ ವೀರಶೈವರಿಗೆ ಅವಮಾನ ಆಗಿದೆ ಅಂತ ಕೆಲವು ಮಠಾಧೀಶರು ತಮ್ಮ ಕರ್ತವ್ಯ ಮರೆತು, ಇನ್ನು ಕೆಲವು ವೀರಶೈವರು ಇದರಲ್ಲೂ ಗೆಬರೋಣ ಅಂತ ಬೊಬ್ಬೆ



ಹೊಡೆದು ಕೊನೆಗೂ ಆ ಕೃತಿಯ ಮುಟ್ಟಗೋಲು ಹಾಕಿಕೊಂಡರಲ್ಲಾ... ಹಾಗೇನೆ ಈಗ ನಾಯಿಂದರು ನಮ್ಮ ಜಾತಿಗೆ ಅವಮಾನ ಮಾಡಿದರು ಅಂತ ನಿಮ್ಮ ಮೇಲೆ ಎಗರಿಬಿದ್ದರೆ ಏನು ಮಾಡುತ್ತೀರಿ. ಜಾತಿಯೇ ಇಲ್ಲದ ಕಸುಬನ್ನು ಮುಂದಿನ ಕನಸಿನಲ್ಲಿ ಕಾಣುವ ಪ್ರಯತ್ನ ಮಾಡಿ-ಲೇಖಕ)

ಆಮೇಲೆ ರೌಡಿರಂಗ ಮುಖ್ಯಮಂತ್ರಿ ಆದ!

(ಅಲ್ಲಿಂದ ವಾಟಾಳರ ಕನಸು ಸ್ವಲ್ಪ ಎಗರಿದಂತಿದೆ. ಮುಖ್ಯಮಂತ್ರಿ ಅಂತ ಆದಮೇಲೆ ಮಂತ್ರಿಮಂಡಲ ಅಂತ ಆಯ್ಕೆ ಆಗಬೇಕಲ್ಲ. ಅದರ ಸದಸ್ಯರು ಹೇಗಿದ್ದಿರಬಹುದು ಅಂದರೆ ಥೇಟ್ ಇದೇ ಮಂತ್ರಿ ಮಂಡಳದ ತರಹಾನೆ. ಇವರು ಪರೋಕ್ಷವಾಗಿ ಮಾಡುತ್ತಿರುವುದನ್ನು ಅವರು ಪ್ರತ್ಯಕ್ಷವಾಗಿ ಮಾಡುತ್ತಾರೆ ಅಷ್ಟೆ! ಹೇಗೂ ಈಗ ಮಂತ್ರಿ ಮಹೋದಯರ ಮನೆಯಲ್ಲಿ ವಿಜೃಂಭಿಸೋರು ವಾಟಾಳರ ಕನಸಿನ ಭಾವೀ ಮುಖ್ಯಮಂತ್ರಿಗಳ ತರಹದವರು ತಾನೆ-ಲೇಖಕ).

ಮುಖ್ಯಮಂತ್ರಿ ಆದಮೇಲೆ ಆಪ್ತ ಸಹಾಯಕ, ಆಪ್ತ ಕಾರ್ಯದರ್ಶಿ ಇಂತಹವರೆಲ್ಲ ಯಾರು ಅಂತೀರಿ. ಈಗಿನ ಮುಖ್ಯಮಂತ್ರಿಗಳ ಹತ್ತಿರ ಇರುವವರೇ. ದಡಗುಟ್ಟುಕೊಂಡು ಹೊಸ ಮಂತ್ರಿಗಳ ಪಾದಸೇವೆಗೆ ಕಾಲು ಕೆರೆದು ನಿಂತಿದ್ದು ಆಯಕಟ್ಟಿನ ಸ್ಥಾನ ಹೊಡೆದುಕೊಂಡರಂತೆ.

(ಈಗಿನ ಮಂತ್ರಿಮಂಡಲದ ಪರೋಕ್ಷ ಪಾತಕಿಗಳ ಸೇವೆಯಲ್ಲಿ ಅನುಭವ ಇರುವುದರಿಂದ ಅವರಿಗೇನೂ ವ್ಯತ್ಯಾಸ ಕಂಡಿರಲಾರದು. ಯಾಕೋ ಏನೋ ವಾಟಾಳರ ಕನಸಿನಲ್ಲಿ ಅಧಿಕಾರಿಗಳು ಕಾಣಿಸಿಕೊಂಡಿಲ್ಲ. ರಾಜ್ಯ ಯಾರದ್ದಿದ್ದರೂ ಆಡಳಿತ ಇರೋದು ಅವರ ಕೈನಲ್ಲಿ ತಾನೆ. ಬಹಳ ಹಿಂದೆ ಬ್ರಿಟನ್‌ನಲ್ಲಿ ಒಂದು ವಿಶಿಷ್ಟ ಸಂಪ್ರದಾಯ ಇತ್ತಂತೆ. ಅದು ಏನಪ್ಪಾ ಅಂದರೆ ಅಧಿಕಾರದ ಪಕ್ಷದ ಬದಲಾವಣೆ ಆದಂತೆಲ್ಲ, ಅಧಿಕಾರಿಗಳನ್ನೂ ಬದಲಾಯಿಸುತ್ತಿದ್ದರಂತೆ, ಹಿಂದಿನ ಅವಧಿಯಲ್ಲಿದ್ದವರು ತಮಗೆ ಕ್ಯಾರೇ ಅನ್ನದೇ ಹೋದಾರು, ತಮ್ಮ ಪಕ್ಷ ಕಾರ್ಯಕ್ರಮ ಜಾರಿಗೆ ತರದೇ ಹೋದಾರು ಅಂತ. ಆಮೇಲೆ ಇದರಲ್ಲಿ ಮಾರ್ಪಾಡು ಆಯಿತಂತೆ. ಪ್ರಭುತ್ವ ಅನ್ನೋದು ಶಾಶ್ವತ, ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅದು ತನ್ನ ಕರ್ತವ್ಯ ನಿರ್ವಹಿಸಿಕೊಂಡು ಹೋಗಬೇಕು ಅಂತ. ನಮ್ಮಲ್ಲಿಯೂ ಬ್ರಿಟನ್ನಿನ ಮೊದಲನೇ ರೀತೀನೇ ಒಂದು ರೀತೀಲಿ ಚಾಲ್ತಿಯಲ್ಲಿದೆ. ಯಾವ ಮುಖ್ಯಮಂತ್ರಿ ಬಂದರೂ ಅವನು ಆಯ್ಕೆ ಮಾಡಿಕೊಳ್ಳೋದು ಅವನಿಗೆ ಆಪ್ತರಾದ ಅಧಿಕಾರಿಗಳನ್ನೇ ಅಲ್ಲವೆ! ಅದು ಒತ್ತಟ್ಟಿಗಿರಲಿ. 'ಏನು ಸ್ವಾಮಿ ಇಂತಹ ಲೋಪ ಆಗಿದೆ ನಿಮ್ಮ ಕನಸಿನಲ್ಲಿ' ಅಂತ ವಾಟಾಳರನ್ನು ಕೇಳಿದರೆ 'ಬುದ್ಧಿ ಇದೆಯೇನ್ರಿ ನಿಮಗೆ. ನಮ್ಮ ಅಧಿಕಾರಿಗಳು ಯಾವ ಪಾತಕಿಗಳಿಗೆ ಕಡಿಮೇರಿ. ನಂ ಪೊಲೀಸ್ ಇಲಾಖೆನೆ ತಗಳಿ. ಒಬ್ಬೊಬ್ಬ ಅಧಿಕಾರೀನೂ ಎಂಟು ಹತ್ತು ಪಾತಕಿಗಳಿಗೆ ಸಮ. ಎನ್‌ಕೌಂಟರ್, ಪನ್‌ಕೌಂಟರ್ ಅಂತ ಅವರು ಮಾಡಿರೋ ಅಷ್ಟು ಕೊಲೇನ, ಮಾಡಿಸಿರೋವಷ್ಟು

ಅಣಕ

ಎಚ್.ಎಲ್. ಕೇಶವಮೂರ್ತಿ

ದರೋಡೆನ ಚಂಬಲ್ ವ್ಯಾಲಿಯೋರು ತಾನೆ ಮಾಡೋಕೆ ಆಗುತ್ತೇನ್ರಿ ಅಂತ ರೇಗಬಹುದು-ಲೇಖಕ)

ನಂತರ ಅವರ ಆಡಳಿತದ ವೈಖರಿಯನ್ನೂ ಕಂಡರಂತೆ ವಾಟಾಳರು.

ಉಡುಪಿ ಸಾಹಿತ್ಯ ಸಮ್ಮೇಳನ ನಡೆಯಬೇಕಲ್ಲ. ಅದಕ್ಕೆ ಹಣ ಬೇಕಲ್ಲ. ಅದನ್ನ ಕೇಳೋಕೆ ಅಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ ಪಾಟೀಲ ಮುಖ್ಯಮಂತ್ರಿಗಳ ಬಳಿಗೆ ಹೋದರಂತೆ. ಗರ್ಭಗುಡಿಗೆ ಹೋಗಬೇಕಾದರೆ ಪೂಜಾರಿ ಒಲಿಸಿಕೊಳ್ಳಬೇಕಲ್ಲ. ಅದೂ ಆಯಿತಂತೆ. ಆಪ್ತ ಕಾರ್ಯದರ್ಶಿ ಮುಖ್ಯಮಂತ್ರಿಗಳ ಬಳಿಗೆ ಹೋಗಿ 'ಚಂಪಾ ಹೊರಗಡೆ ಕಾಯ್ತಿದ್ದಾರೆ ಸಾರ್' ಎಂದರಂತೆ.

ಇಲ್ಲಿ ಒಂದು ವಿಷಯ ಪ್ರಸ್ತಾಪಿಸಲೇಬೇಕು. ಈಗಿನ ಮುಖ್ಯಮಂತ್ರಿ ಆಗಿದ್ದರೆ 'ಯಾರ್‍ರೀ ಚಂಪಾ' ಅಂತ ರೇಗಿಬಿಡುತ್ತಿದ್ದರೋ ಏನೋ. ಅದರ ಬದಲು 'ರಾಧಿಕಾ' ಅಂದರೆ ಕಿವಿನೆಟ್ಟಗಾಗುತ್ತಿತ್ತು. ಇತ್ತೀಚೆಗೆ ಆಕೆ ಚಾಮುಂಡೇಶ್ವರಿ ಬೆಟ್ಟಕ್ಕೆ ಹೋಗಿದ್ದಳಂತೆ. ಎಂಭತ್ತು ಸಾವಿರ ರೂಪಾಯಿ ಹಾರಾನೂ ಅಮ್ಮನವರಿಗೆ ತೊಡಿಸಿದಳಂತೆ. ಆದರೇನು ಮಾಡುತ್ತೀರಿ. ಹಾಳಾದ್ದು ಹೀಗೆ ಅರ್ಪಿಸಬೇಕಾದರೆ ರಸೀದಿ ಪಡೆಯಬೇಕಂತೆ. ಈಕೆ ಮುಖ್ಯಮಂತ್ರಿಯವರಿಗೆ ಆಪ್ತರಾದವರು, ಹೀಗೆಲ್ಲ ಕಾಯಿಸಬಾರದು ಅಂತ ಅಲ್ಲಿನ ಅಧಿಕಾರಿಯ ಮಂದಬುದ್ಧಿಗೆ ಹೊಳೆಯಲೇ

"ನಿನ್ನ ಮಾತೂ ತಗಳೊ ಅಂತೆದೆಯ ಬುಡು."

"ಯಲ್ಲಾತ್ನು ಒಂದೇ ಧ್ವಗ್ಗೆ ಬೀಸಬೇಡ ದ್ವಡಪ್ಪ ಆದ್ರೆ ಒಂದಂತೂ ವಂಡ್ರುಫುಲ್ ಮ್ಯಾಟ್ರು."

"ಅದ್ಯಾವುದಪ್ಪ?" ಎಂದ ಉಗ್ರಿ.

"ಬಸವಣ್ಣ ಹನ್ನೆರಡನೇ ಶತಮಾನದಲ್ಲಿ ಕಲಕಿರೊ ಜಾತಿರಾದಿ ಇನ್ನು ಮಂಥ್ಯ ವದಿತಾ ಆದಲ್ಲಾ, ಇವುನವುನ್ ಜಾತಿಗಿನ್ನಂಥ ಪವರ್ ಇರಬವುದು ಅಂತ."

"ನಿಜ ಕಣೊ, ಈ ಲಿಂಗಾಯಿತ್ರ ಮನುಲ್ಲಿ ಮಾದಿಗರು ಇನ್ನಂಥ ಕೀಳುಜಾತಿಯಾಗಿರಬವುದು. ಬಸವಣ್ಣ ಮಾದಿಗ ಆಂದೇಟಗೆ ಮಠಮಾನ್ಯಗಳು, ರಾಜಕಾರಣಿಗಳು, ಸ್ವಾಮಿತಿಗಳ್ನೆಲ್ಲ ಒಟ್ಟಾಗಿ ದೊಂಬಿ ಎಬ್ಬಿಸಿದರಲ್ಲ, ಇದನ್ನೆಲ್ಲ ನೋಡಿ ಬಸವಣ್ಣ ನಗದಿಲವೆ ಅಂತ."

"ನಗದೆ ಏನು, ಗಾಂಧಿಮಾತ್ಮ ಕಾಂಗ್ರೆಸ್‌ನೋರ ನೋಡಿ ನಗದಿಲವೆ. ಆಂಗೆ ಬಸವಣ್ಣನೂ ಲಿಂಗಾಯಿತ್ರಾಟ ನೋಡಿ ನಗ್ತಾಯಿರತನೆ."

"ಯಾಕೆ ನಗಾದ್ತನ್ನ?" ಎಂದಳು ಜುಮ್ಮಿ.

"ಅವುನು ಬಲಿಯಾದದ್ದೆ ಮೇಲ್ಜಾತಿ ಕೀಳುಜಾತಿ ಹೆಣ್ಣು ಗಂಡ ಮದುವೆ ಮಾಡಿಸಿದ್ದಕಲವೇನಕ್ಕ, ಆಗ ಅವುನ್ನ ಕೊಂದ ಜನಾಂಗದ ಸಂತತಿ ಇನ್ನು ಹೆಚ್ಚಿಗೊಂಡು ಬಸವಣ್ಣ ಮಾದಿಗ ಆಂದೇಟಗೆ ಗಲಾಟಮಾಡ್ತದೆ. ಅದರ ಮಂಚೂಣಿ ನಾಯಕ ಎಡೂರಪ್ಪ ಅನ್ನದು ಸಾಬೀತಾಗ್ತದೆ."

"ಆದ್ಯಂಗೇಳ್ತಿಯೋ?" ಎಂದ ಉಗ್ರಿ.

"ಎಡೂರಪ್ಪ ಮಂತ್ರಿಯಾದೇಟಗೆ ಅಂಬೇಡ್ಕರ್ ಫೋಟಾ ತಗಿಸಿದ್ದ ಕಣೊ. ಅದೇ ಜಾಡಿಡಕಂಡು ಹನ್ನೆರಡನೇ ಶತಮಾನ ಗಂಟ ಹೋದ್ರೆ ಈ ಎಡೂರ್ ಸಂತತಿನೇ ಬಸವಣ್ಣನ್ನ ಬಲಿ ತಗಂಡಿರದು ಅನ್ನದು ಸಿಗಬವುದು."

"ಅಂಗಂತಿಯಾ?"

"ಬೇಕಾದ್ರೆ ಯಾರಿಗಾದ್ರು ಸಂಶೋಧನೆ ಮಾಡಕ್ಕೇಳು. ನಿಜವಾದ ಲಿಂಗಾಯಿತ ಎಂದೂ ಪುರೋಹಿತಶಾಹಿ ಕಾರ್ಯಕ್ರಮದಡಿ ಕ್ಯಲಸ ಮಾಡಲ್ಲ, ಮಾಡಕೂಡದು. ಬಸವಣ್ಣ ವಿರೋಧಿಸಿದ ಪುರೋಹಿತರ ಕೈಗೆ ಸಿಗಾಯ್ಕಂಡು ಲಿಂಗಾಯಿತ್ರ ಅಂತ ಹೇಳೋರ್ಯಲ್ಲ ಬಸವದ್ರೋಹಿಗಳು. ಒಂದು ಚಿಕ್ಕ ಬ್ರೇಕ್ ನಂತರ ಮತ್ತೆ ಬರ್ತೀನಿ" ಎಂದು ವಾಟಿಸ್ಸೆ ನಗುತ್ತ ಹೊರಟುಹೋದ.

" !?" ■

ಇಲ್ಲವಂತೆ. ಆ ಚಾಮುಂಡಿ ಅಮ್ಮನವರಿಗೆ ತಳಿಗೆ ತಡ ಮಾಡಬಹುದು. ಈ ಅಮ್ಮನವರನ್ನ ಕಾಯಿಸುವುದು ಎಂದರೇನು ಅರ್ಥ. ಅನರ್ಥವೇ ನಡೆದುಹೋಯಿತಂತೆ. ಧುಮುಗುಡುತ್ತಿದ್ದ ಅಮ್ಮನವರು ತಕ್ಷಣವೇ ಮುಖ್ಯಮಂತ್ರಿ ಕಚೇರಿಯಿಂದ ಎತ್ತಂಗಡಿ ಆಜ್ಞೆ ಹೊರಡಿಸಿದರಂತೆ! ಪಾಪ, ಯುವ ಮುಖ್ಯಮಂತ್ರಿಗೆ ಆ ಹೆಸರಿನ ಮೇಲೆ ಏನೋ ವ್ಯಾಮೋಹ. ಇರಲಿ, ಇವನು ರೌಡಿ ರಂಗ ಅಲ್ಲವಾ ಹೆಣ್ಣುಮಕ್ಕಳು ಅಂದರೆ ಕಟ್ಟುನಿಟ್ಟು. ಕಚ್ಚೆಹರುಕ ಅಲ್ಲದಿದ್ದರೂ ಅವರಿಗೆ ಸಹಾಯ ಮಾಡಬೇಕು ಅನ್ನುವ ಹೆಂಗರುಳು–ಲೇಖಕ) 'ಚಂಪಾನ ಒಳಕೆ ಕಳಿಸು' ಅಂದರಂತೆ ಮುಖ್ಯಮಂತ್ರಿಗಳು.

ಚಂದ್ರಶೇಖರ ಪಾಟೀಲರು ಸಾಹೇಬರ ಛೇಂಬರ್ಸ್‌ಗೆ ಹೋದರಂತೆ. ತಮ್ಮನ್ನು ಪರಿಚಯಿಸಿಕೊಂಡರಂತೆ. ಚಂಪಾ ಅನ್ನುವ ಹೆಣ್ಣುಮಗಳನ್ನು ಕಳುಹಿಸು ಅಂದರೆ ಈ ಪ್ರೊಫೆಸರ್‌ನ ಯಾಕೆ ಕಳುಹಿಸಿದ ಇವ ಅನ್ನೊ ಅನುಮಾನ ಮುಖ್ಯಮಂತ್ರಿಗಳಿಗೆ ಬಂದಿತಂತೆ.

(ಇಲ್ಲಿ ಒಂದು ಸಂಗತಿ. ಈಗಿನ ಯುವ ಮುಖ್ಯ ಮಂತ್ರಿಗಳು ಶಿವಮೊಗ್ಗ ಸಮ್ಮೇಳನದ ಸಂದರ್ಭದಲ್ಲಿ ಕುರ್ಚಿಯನ್ನು ನೀಡದೆ ಅವಮಾನ ಮಾಡಿದ್ದರು. ಇವರು ಹಾಗೆ ಮಾಡಿಲ್ಲ ಅಂತ ಭಾವಿಸುವೆ. ಯಾಕೆ ಅಂದರೆ ಈ ಪಾತಕಿಗಳಿಗೆ ಸಾಹಿತಿಗಳು ಅಂದರೆ ಏನೋ ಒಂದು ರೀತಿಯ ಗೌರವ, ಅಭಿಮಾನ. ಅವರ ಜೊತೆ ಮಾತನಾಡಿದೆ ಅನ್ನೋದೆ ಹೆಮ್ಮೆ ವಿಷಯ. ಹಿಂಗಾಗಿ ನಮ್ಮ ಹಲವು ಸಾಹಿತಿಗಳಿಗೆ ಸಾಂಸ್ಕೃತಿಕ ಕ್ಷೇತ್ರದ ದಿಗ್ಗಜರಿಗಿಂತ ಪಾತಕಿ ಲೋಕದ ಮಹಿಮರೇ ಅಚ್ಚುಮೆಚ್ಚು!–ಲೇಖಕ)


ಮುಖ್ಯಮಂತ್ರಿ ರೌಡಿರಂಗ ಕೂಡಲೆ ತನ್ನ ಆಪ್ತ ಕಾರ್ಯದರ್ಶಿ ಕರೆದು 'ಅಲ್ಲಪಾ ನಾನು ಚಂಪಾ ಅನ್ನುವ ಹೆಣ್ಣುಮಗಳನ್ನು ಒಳಕ್ಕೆ ಕಳುಹಿಸು ಅಂದರೆ ಪ್ರೊಫೆಸರ್ ಸಾಹೇಬರ ಕಳುಹಿಸಿದ್ದೀಯಲ್ಲಾ' ಅಂತ ಕೇಳಿದರಂತೆ. ಆ ಚಂಪಾನೆ ಈ ಚಂದ್ರಶೇಖರ ಪಾಟೀಲ ಅನ್ನುವ ವಿವರಣೆ ಕೇಳಿ ಪುಳಕಿತರಾದ ಮುಖ್ಯಮಂತ್ರಿಗಳು ಏನು ಮಾಡಿದ ರಪ್ಪಾ ಅಂದರೆ...

ತಮ್ಮ ಹೆಸರನ್ನು 'ರೌರ' ಮಾಡಿಕೊಂಡರಂತೆ!

ಇದು ಪಾತಾಳರ ಕನಸಿನ ಮಾತಾಯಿತು.

ನನ್ನ ಅನುಮಾನ ಏನು ಅಂದರೆ ಈಗ ನಡೆಯುತ್ತಿರುವ ದರೋಡೆಕೋರ್ರು ಪಾತಾಳರ ಕನಸಿನ ಸಾಮ್ರಾಜ್ಯಕ್ಕೂ ಏನಾದರೂ ಸಂಬಂಧ ಇದೆಯಾ ಅಂತಾ... ಅಥವಾ... ಸತ್ಯ ಹೇಳಲು ಹೊರಟ ಕನಸಿನ ಮರಿ ಹೋದರಾ ಪಾತಾಳರು..... ■

ಸಾವಿನ ಛಾಯೆ



ಮರೆಯುವ ಮುನ್ನ



ಪಿ. ಲಂಕೇಶ್ — ಫೆಬ್ರವರಿ 12, 1989

ಕಲಾಮೇಳದಲ್ಲಿ ಹೇಳಿ ಇಲ್ಲಿ ಬರೆಯುವುದನ್ನು ಮರೆತ ಒಂದು ಅಂಶವಿದೆ. ಕುಂಚ, ಪೆನ್ನು, ಪೆನ್ಸಿಲ್‌ನಿಂದ ಚಿತ್ರ ಬಿಡಿಸುವ ಕಲಾವಿದರು ಸಾಹಿತಿಗಳ ತರಹ ಅಲ್ಲ; ಸಾಹಿತಿಗಳಿಗೆ ವಿವರಿಸುವ, ಸಾಂಕೇತಿಕವಾಗಿ ಮಂಡಿಸುವ, ಚರ್ಚಿಸುವ ಸವಲತ್ತುಗಳಿರುತ್ತದೆ. ಚಿತ್ರ ಬಿಡಿಸುವ ಕಲಾವಿದರು ಮೌನದಿಂದ ಸದ್ದು ಹೊರಡಿಸಬೇಕಾಗುತ್ತದೆ. ಬಣ್ಣದಿಂದ ಹೇಳಬೇಕಾಗುತ್ತದೆ. ನನಗೆ ಕುತೂಹಲವಾಗುತ್ತದೆ. ಕರ್ನಾಟಕದಲ್ಲಿ ಈಗ ಇರುವ ಐದು ಲಕ್ಷಕ್ಕಿಂತ ಹೆಚ್ಚು ಜನ ನಿರುದ್ಯೋಗಿಗಳಾದ ತರುಣ ತರುಣಿಯರ ಕಣ್ಣುಗಳ ಅಸಹಾಯಕತೆ, ಸಾವಿನ ಛಾಯೆಯನ್ನು ಚಿತ್ರಕಾರರು ಹೇಗೆ ಬಿಡಿಸಬಹುದು ಎಂಬ ಬಗ್ಗೆ ಕುತೂಹಲವಿದೆ. ಅಂದರೆ ಇದೊಂದು ಸವಾಲು. ಇಂತಹ ಸವಾಲುಗಳನ್ನು ಎತ್ತಿಕೊಂಡು ವರ್ಣಿಸಲಾರದ ಕಲಾವಿದರು ಕೇವಲ ತಂತ್ರಜ್ಞರೂ, ಹವ್ಯಾಸಿಗಳು ಆಗುತ್ತಾರೆ. "ಕಲೆಗಾಗಿ ಕಲೆ" ಎಂಬುದು ಯಾವನೇ ಒಬ್ಬ ರಾಜಕಾರಣಿಯ ಕೈಗೊಂಬೆಯಲ್ಲ, ಜಾಹೀರಾತಿನ ಸಾಧನವಲ್ಲ ಎಂಬಷ್ಟು ಮಟ್ಟಿಗೆ ಮಾತ್ರ ನಿಜ; ಕಲೆ ಜೀವನದ ದುರಂತವನ್ನು ಒಳಗೊಳ್ಳದಿದ್ದರೆ ಕೇವಲ ಅಲಂಕಾರದ ವಸ್ತುವಾಗುತ್ತದೆ.


ಮರೆಯುವ ಮುನ್ನ ಹೇಳಿದ್ದೇನೆ.

ಪ್ರಕೃತಿಯ ಗರ್ಭದಲ್ಲಿ



ಈ ಊರಿನ ಹೆಸರು ಕಮ್ಮರಡಿ. ಶೃಂಗೇರಿ ಮತ್ತು ಕೊಪ್ಪದ ನಡುವಿನ ಊರು; ಮುಖ್ಯ ರಸ್ತೆಯ ಎರಡೂ ಮಗ್ಗುಲಲ್ಲಿ ಇರುವ ಸಣ್ಣ ಗ್ರಾಮ. ಮಲೆನಾಡಿನ ಅನೇಕ ಹಳ್ಳಿಗಳ ಕೇಂದ್ರದ ಹಳ್ಳಿ ಇದು.

ಎಷ್ಟು ಸುಂದರ ಊರುಗಳು, ಈ ಮಲೆನಾಡಿನ ಮನೆಗಳ ಗುಂಪುಗಳು. ನನಗೆ ಆಯ್ಕೆಯ ಸ್ವಾತಂತ್ರ್ಯ ಇಷ್ಟಬಂದಲ್ಲಿ ವಾಸಿಸುವ ಸ್ವಾತಂತ್ರ್ಯ ಇದ್ದಿದ್ದರೆ ಇಲ್ಲಿಗೆ ಬಂದವನು ಬೆಂಗಳೂರಿಗೆ ಹಿಂದಿರುಗುತ್ತಲೇ ಇರಲಿಲ್ಲ. ಆದರೆ.... ಇದೆಲ್ಲ ಭ್ರಮೆ ಮಾತ್ರ. ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿರುವಂತೆಯೇ ಈ ಮಲೆನಾಡಿನ ಗರ್ಭದಲ್ಲಿ ಕೂಡ ದುರಂತ ಮನೆ ಮಾಡಿದೆ. ನಿರುದ್ಯೋಗ, ಹತಾಶೆ, ಮೋಸಗಳೆಲ್ಲ ಇವೆ. ಅರಣ್ಯದ ಕಳ್ಳರ ತಂಡ, ವಂಚಕ ರಾಜಕಾರಣಿಗಳ, ಪೊಲೀಸರ ತಂಡವೇ ಇಲ್ಲಿದೆ.




"ಆರ್ ಐ!"

ವಿದೇಶದಲ್ಲಿರುವ ಭಾರತೀಯರು ಈ ದೇಶಕ್ಕೆ ಬಂದು ಲಂಚಕೋರ ಸರ್ಕಾರಗಳ ಮೂಲಕ ಕಬಳಿಸುತ್ತಿರುವುದು ಈಗ ದೊಡ್ಡ ಸುದ್ದಿ. ಅನಿವಾಸಿ ಭಾರತೀಯರು, ನಾನ್ ರೆಸಿಡೆಂಟ್ ಇಂಡಿಯನ್ಸ್ (ಎನ್‌ಆರ್‌ಐ) ಎಂದೆಲ್ಲ ಇವರನ್ನು ಕರೆಯಲಾಗುತ್ತಿದೆ. ವಿದೇಶದ ಹಣ ಈ ದೇಶದ ಆಸ್ತಿ ಇವರಿಗೆ ರುಚಿಕಟ್ಟಾದದ್ದು. ಗ್ರಾಮಗಳ ಮೇಲೆ ಭೂಕಾಯಿದೆ ಹೇರಿರುವ ಸರ್ಕಾರಗಳು ನಗರದ ಶ್ರೀಮಂತರು, ವಿದೇಶಿ ಶ್ರೀಮಂತರು ಎಷ್ಟಾದರೂ ನೆಲ ತೆಗೆದುಕೊಳ್ಳಲು ಬಿಡುತ್ತಿದೆ. ಇವರೆದುರು ಮಧ್ಯಮ ವರ್ಗದ, ಕೆಳವರ್ಗದ ಜನ ಸಣ್ಣವರಾಗಿ ಕಾಣುತ್ತಾರೆ; ಇಲ್ಲಿಯ ಸಂಪತ್ತು ಈ ಬಡವರನ್ನು ಅಣಕಿಸುತ್ತಿದೆ.

ಆದ್ದರಿಂದ ಎನ್‌ಆರ್‌ಐ ಎದುರು ಭಾರತೀಯರಿಗೆ ಬರೀ 'ಆರ್‌ಐ' ಎಂದು ಕೆಲವರು ಅಣಕಿಸತೊಡಗುತ್ತಾರೆ. 'ಆರ್‌ಐ' ಅಂದರೆ ಗೊತ್ತಲ್ಲ–ರಿಗರಸ್ ಇಂಪ್ರಿಸನ್‌ಮೆಂಟ್, ಕಠಿಣ ಶಿಕ್ಷೆ. ಭಾರತೀಯರಿಗೆ ಇಲ್ಲಿಯ ವಾಸವೇ ಕಠಿಣ ಶಿಕ್ಷೆಯಾಗುತ್ತಿದೆ.

ಇದು ಸ್ವಲ್ಪ ಗಂಭೀರ ವಿಷಯವಾಯಿತು. ಈ ಎನ್‌ಆರ್‌ಐಗಳ ವಿರುದ್ಧ ಕೃಷ್ಣಭಟ್ಟ ಪ್ರತಿಭಟಿಸುತ್ತಿರುವುದನ್ನು ನೀವು ಗಮನಿಸಿರಬಹುದು. ನಾವು ತಿಂಗಳುಗಳ ಹಿಂದೆ ಬರೆದದ್ದನ್ನು ಸುಬ್ರಮಣ್ಯಸ್ವಾಮಿ ಹೇಳುತ್ತಿದ್ದಾರೆ. ದೊಡ್ಡ ನೆಲಗಳ್ಳರ ವಿರುದ್ಧ ನೀಚ ನೆಲಗಳ್ಳರ ತಕರಾರು. ಇವರೆಲ್ಲರಿಗೆ ಪರೋಕ್ಷವಾಗಿ ಬೆಂಬಲ ಕೊಡುವ ವೃತ್ತ ಪತ್ರಿಕೆಗಳು.



ಚೌಕಾಶಿ ಎಂಬ ಕ್ರೀಡೆ

ಇದೆಲ್ಲ ಇರಲಿ, ಮೊನ್ನೆ ಮೈಸೂರಿಗೆ ಒಬ್ಬನೇ ಹೊರಟಾಗ ದಾರಿಯಲ್ಲಿ ಕಲ್ಲಂಗಡಿ ಹಣ್ಣು ಕಂಡು ಒಂದೆರಡನ್ನು ಮೈಸೂರಿನ ರಾಮದಾಸ್ ಮನೆಗೆ ಒಯ್ಯಲು ಆಸೆಯಾಯಿತು ಮತ್ತು ಚೌಕಾಶಿ ಮಾಡಲು ಹತ್ತು ನಿಮಿಷ ಇತ್ತು. ಕಾರು ಕಂಡೊಡನೆ ಬೇಕೆಂತಲೇ ಜಾಸ್ತಿ ಬೆಲೆ ಹೇಳುವ ಹೆಣ್ಣುಮಗಳು. "ಬಲೆ ಚೆಂದಾಗೈತೆ ತಗಳ್ಳಿ ಸ್ವಾಮಿ" ಅಂದಳಾಕೆ.

"ಬೆಲೆ ಹೇಳಮ್ಮ" ಅಂದೆ. ಆಕೆ ಬೆಲೆ ಹೇಳದೆ ಕಾರಿನಲ್ಲಿ ಕಲ್ಲಂಗಡಿ ಇಟ್ಟೇಬಿಟ್ಟಳು. "ತಿಳಿದದ್ದು ಕೊಡಿ" ಅಂದಳು.

"ಐದು ರೂಪಾಯಿ ಕೊಡ್ತೇನೆ" ಅಂದೆ.

"ಹದಿನೈದು ರೂಪ್ಯಾ ಸಾರ್" ಅಂದಳು.

ನಾನು ನಕ್ಕು ಕಾರಿನಿಂದ ಇಳಿದೆ. ಸ್ವಲ್ಪ ಚೌಕಾಶಿ ಮಾಡುವ ಆಶೆಯಾಯಿತು. ಇಂಥ ಚೌಕಾಶಿಯನ್ನು ನಾನು ಶಿವಮೊಗ್ಗೆಯಲ್ಲಿ ನಮ್ಮೂರವರು ಮಾಡುತ್ತಿದ್ದಾಗ ನೋಡಿದ್ದೆ. ವೇಳೆ ಅಪಾರವಾಗಿರುವಲ್ಲಿ, ಬೆಲೆ ಅಸ್ಪಷ್ಟವಾಗಿರುವಲ್ಲಿ ಚೌಕಾಶಿಯೊಂದು ವರ್ಣರಂಜಿತ ಕ್ರೀಡೆ. ಶಿವಮೊಗ್ಗೆಯ ಪಾಂಡುರಂಗಪ್ಪನ ಜವಳಿ ಅಂಗಡಿ ಮದುವೆ ಸೀಸನ್‌ನಲ್ಲಿ ಚೌಕಾಶಿಯ ರಂಗಭೂಮಿ. ಅಪ್ಪನೆದುರು ಸೀರೆಗಳನ್ನು ಚಕಚಕ ರಾಶಿ ಹಾಕುವ ಪಾಂಡುರಂಗಪ್ಪ, ಪುಂಡಲೀಕಪ್ಪ, ಆತ ಹೇಳುವುದು ನಲವತ್ತು ರೂಪಾಯಿ; ಅಪ್ಪ ಕೇಳುವುದು ಒಂಭತ್ತಕ್ಕೆ. ಅಪ್ಪನಿಂದ ಸೀರೆಯ ಜರಿಯುವಿಕೆ; ಆತ ಸೆರಗನ್ನೆಲ್ಲ ಬಿಚ್ಚಿ ತೋರಿಸುತ್ತ ಹೊಗಳುವುದು. ನಡುವೆ ಮಳೆ, ಬೆಳೆ ಹಳ್ಳಿಗರ ಕಷ್ಟದ ವರ್ಣನೆ; ಆತನಿಂದ ವ್ಯಾಪಾರದ ಕಷ್ಟಗಳ ವಿವರಣೆ. ಒಂಭತ್ತು ಮತ್ತು ನಲವತ್ತು ಕೊನೆಗೆ ಹತ್ತೊಂಭತ್ತಕ್ಕೆ ತೀರ್ಮಾನವಾಗುವಲ್ಲಿ ಕನಿಷ್ಠ ಮೂರು ಗಂಟೆ.

"ನೋಡಮ್ಮ, ನನಗೆ ಕಲ್ಲಂಗಡಿ ಬೆಲೆ ಗೊತ್ತು, ಸುಮ್ಮೆ ತಲೆ ತಿನ್ನಬೇಡ. ಒಂಭತ್ತು ರೂಪಾಯಿ ತಗೋ" ಅಂದೆ.

"ಇಲ್ಲ ಸ್ವಾಮಿ, ಹದಿಮೂರು ಕೊಡಿ" ಅಂದಳು.

"ಈಗತಾನೆ ನೀನು ಹತ್ತು ರೂಪಾಯಿಗೆ ಕೊಟ್ಟದ್ದು ನೋಡಿದ್ದೇನೆ" ಅಂದು ಬಾಣ ಬಿಟ್ಟೆ. ಆಕೆ ಎಂಟಕ್ಕೆ ಕೊಟ್ಟಿರಬಹುದು.

"ಹನ್ನೊಂದು ಸ್ವಾಮಿ" ಅಂದಳು.

ಹತ್ತು ರೂಪಾಯಿ ಕೊಟ್ಟು ಹೊರಟೆ. ಮೈಸೂರಲ್ಲಿ ರಾಮದಾಸ್ ಮುಂತಾದವರು ನನ್ನ ಪೆದ್ದುತನಕ್ಕೆ ನಗಬಹುದೆಂದು "ಏಳು ರೂಪಾಯಿ ಕೊಟ್ಟೆ" ಅಂದೆ. "ಪರವಾಗಿಲ್ಲ ಚೀಪ್" ಅಂದು ಕೊಯ್ದರೆ ಬೆಳ್ಳಗೆ ಕುಂಬಳಕಾಯಿ ತರಹ ಇತ್ತು. ಮೈಸೂರಿನಿಂದ ಹಿಂದಿರುಗುವಾಗ ಈ ಬಗ್ಗೆ ಆಕೆಗೆ ಹೇಳಿ ಮತ್ತೆ ಚೌಕಾಶಿ ಮಾಡಬೇಕೆನ್ನಿಸಿತು. ಈ ಸಲ ಹೇಗಾದರೂ ಮಾಡಿ ಎಂಟಕ್ಕೆ ಕೊಂಡುಬಿಡಬೇಕು....

ರೇವಣ್ಣ ರಾಹು, ಶೋಭಕ್ಕ ಕೇತು, ಶನಿ?

ಡಿ.ಎಲ್. ಶ್ವೇತಾ, ಹರಪನಹಳ್ಳಿ
ಜೆಡಿಎಸ್‌ನಲ್ಲಿ ಎಂ.ಪಿ.ಪಿಯವರ ಸ್ಥಾನ, ಮಾನ ಏನು?
◆ ಸ್ಥಾನವೇನೋ 'ಗೃಹಮಂತ್ರಿ'ಯದ್ದು ಮಾನ ಮಾತ್ರ ದ್ವಾರಪಾಲಕನದ್ದು!

ಅಕ್ಕಿ ಕೊಟ್ರೇಶ್, ಉಪನಾಯಕನಹಳ್ಳಿ
ಮುದುಕರು ಕೂಡ ಕಬ್ಬನ್‌ಪಾರ್ಕ್‌ಗೆ ಹೋಗುತ್ತಾರಲ್ಲಾ?
◆ ಪಾರ್ಕ್‌ನಲ್ಲಿ ತಮಗೂ 'ಪಾರ್ಕಿಂಗ್' ಜಾಗ ಸಿಗಬಹುದಾ ಎಂಬ ಆಶೆ!

ಇಂದಿರಾ ಶ್ರೀಧರ್, ದಾವಣಗೆರೆ
ಚೆನ್ನಿ-ಜಿ.ಕೆ.ಜಿ. ತಮ್ಮ ವ್ರತ ಕೆಡಿಸಿಕೊಂಡಿದ್ದೇಕೆ?
◆ 'ಹಸಿವು' ತಾಳಲು ಅಸಾಧ್ಯವಾಗಿದ್ದಕ್ಕೆ?!

ಎಸ್. ಶಶಿಧರ, ದಾವಣಗೆರೆ
ನಕ್ಸಲ್ ಪರರ ಪಟ್ಟಿಯಲ್ಲಿ ಗೌರಿ ಲಂಕೇಶ್ ಹೆಸರನ್ನೂ ಸೇರಿಸುವ ಹುನ್ನಾರ ನಡೆದಿತ್ತೆ?
◆ ಖಾಕಿ ಪ್ಯಾಂಟುಗಳಿಗೆ ಖಾಕಿ ಚೆಡ್ಡಿಗಳೊಳಗಿನ ಹುನ್ನಾರ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ಪಾಪ!

ಕೆ.ವಿ.ಶಿವಕುಮಾರ್, ಕಾಳಿಹುಂಡಿ
ರಾಜಕಾರಣಿಗಳು ಮಾತೆತ್ತಿದರೆ ಕೋಟಿಯ ಬಗ್ಗೆಯೇ ವಿಷಯ ಮಂಡಿಸುತ್ತಾರೇಕೆ?
◆ ಅವರ ರೇಟು ಕೋಟಿಗಳಿಗೆ ಫಿಕ್ಸ್ ಆಗಿರುವುದರಿಂದಿರಬಹುದೇ?

ಅಳ್ಳಿಮಾರನಹಳ್ಳಿ ಹರೀಶ್, ಗಾಣಾಳು
'ಅನುಮಾನಿತ ಸತ್ಯ' ಪ್ರತಿಪಾದಕ ಗಡಿಪಾರು. 'ಅಂತಿಮ ಸತ್ಯ' ಪ್ರತಿಪಾದಕ?
◆ ಪೆದ್ದ ಚೆಡ್ಡಿಗಳ ಅಜ್ಞಾನಿ ನಾಯಕ!

ಓದು ಸಿದ್ದೇಗೌಡ, ಕೆಬ್ಬೇಹಳ್ಳಿ
ಅನುದೇವಾ.... 'ಚೆಡ್ಡಿಯೊಳಗಣವನು' ಆದಾನಲ್ರೀ?
◆ 'ಸೀಡ್‌ಲೆಸ್' ಸರಕಾರದ ಪೌರುಷ.

ಕಣ್ಣಾ ಮುಚ್ಚಾಲೆ

ಕೆ.ಸಿ. ರತೀಶ್, ಬೆಂಗಳೂರು
ಅಸೂಯೆ, ಕೋಪ, ದ್ವೇಷ, ದುರಾಸೆ ತುಂಬಿರುವ ದೇವೇಗೌಡರನ್ನು ನೋಡಿದರೆ ಏನನಿಸುತ್ತದೆ?
◆ 'ಗುಳ್ಳೆನರಿ' ಹೆಗಡೆ ಬದುಕಿರಬಾರದಿತ್ತೆ ಅನ್ನಿಸುತ್ತೆ!

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಹಟ ಮಾಡುವ ಹುಡುಗಿಗೂ, ಹಟ ಮಾಡದಿರುವ ಹೆಣ್ಣಿಗೂ ಏನು ವ್ಯತ್ಯಾಸ?
◆ ಕಾಯಿಗೂ, ಹಣ್ಣಿಗೂ ಇರುವಷ್ಟೇ ವ್ಯತ್ಯಾಸ.



ಎಂ. ಮಂಜುಳಾ ಸಿದ್ದರಾಜು, ಭದ್ರಾವತಿ
ಸೌಂದರ್ಯವೆಲ್ಲಾ ಬರೀ ಹೆಣ್ಣಿಗೆ ಮೀಸಲು ಯಾಕೆ?
◆ ಆಕೆ ಎಲ್ಲ ಸೌಂದರ್ಯದ ಜನ್ಮಭೂಮಿ ಆಗಿರುವುದರಿಂದ.

ಎಂ. ನಿಸರ್ಗ, ದಾವಣಗೆರೆ
ನರ್ಸ್ ಜಯಲಕ್ಷ್ಮಿ ಯಾಕೆ ಪದೆ ಪದೇ ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದಾಳೆ?
◆ ಪದೇ ಪದೇ ಆಕೆಯ ಚಾರಿತ್ರವಧೆ ಆಗುತ್ತಿರುವುದರಿಂದಿರಬಹುದೆ?

ಮಂಚಾಲಿ ಉಮಾ ಗುರುರಾಜಚಾರು, ಬಳ್ಳಾರಿ
ಕಾಲ್‌ಸೆಂಟರ್‌ನಲ್ಲಿ ಪ್ರೀತಿ, ಇಂಟರ್‌ನೆಟ್‌ನಲ್ಲಿ ಮದುವೆ, ವೆಬ್‌ಸೈಟ್‌ನಲ್ಲಿ?
◆ 'ಫಸ್ಟ್' ನೈಟ್!

ಅಂಬುಜಾ, ಸುರಪೂರ
ಗಂಡಂದಿರನ್ನು ನಂಬಬಾರದೆಂದು ಸಚಿವೆ ರೇಣುಕಾಚೌಧುರಿ ಹೇಳಿದ್ದಾರಲ್ಲಾ?
◆ ಪಾಪ, ಆಕೆಗೆ ಗಂಡನಿಗೂ ಪುರುಷನಿಗೂ ವ್ಯತ್ಯಾಸ ಗೊತ್ತಿಲ್ಲವಂತೆ.

ಬಹುಮಾನಿತ ಪ್ರಶ್ನೆ

ಹಸೀನಾಬಾನು, ಗೋಕಾಕ
ರೇವಣ್ಣ ರಾಹು, ಶೋಭಕ್ಕ ಕೇತು, ಶನಿ?
◆ ಇನ್ಯಾರು? ಪದ್ಮನಾಭನಗರದಲ್ಲಿರುವವ.....

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
ಹೆಂಗಸರೇಕೆ ವೃದ್ಧಾಪ್ಯಕ್ಕೆ ತುಂಬಾ ಭಯಪಡ್ತಾರೆ?
◆ ನಿಮ್ಮ ಅವ್ವನ್ನ ನೋಡಿದರೆ ಗೊತ್ತಾಗಲ್ಲೇನು?

ಬಿ.ಚಂದ್ರೇಗೌಡ, ಬೆಂಗಳೂರು
ತಂದೆಗೆ ತಕ್ಕಂಥ ಮಕ್ಕಳು ಹೇಗಿರುತ್ತಾರೆ?
◆ ಗೌರಿ, ಕವಿತಾ ತರಹ ಇರುತ್ತಾರೆ ಅಂತಾ ಇಂದ್ರಮ್ಮ ಹೇಳ್ತಾರೆ!

ಅಬ್ದುಲ್ ರಜಾಕ್, ದೇವದುರ್ಗ
ಲೈಂಗಿಕ ಶಿಕ್ಷಣದಲ್ಲಿ ಪ್ರಾಕ್ಟಿಕಲ್ ಇರುತ್ತಾ?
◆ ಬರೀ ಥಿಯರಿ ಇರುತ್ತೆ ಅಂತ ಗೊತ್ತಾಗಿದ್ದರಿಂದಲೇ 'ಸ್ವಯಂ' ಸೇವಕರು ಪ್ರತಿಭಟಿಸಿದ್ದು ಗೊತ್ತಾ.

ಕೆ.ಎಸ್. ವೀರಭದ್ರಪ್ಪ, ತೆಲಗಿ
ಎಡಪಂಥೀಯರಿಗಿಂತ ಬಲಪಂಥೀಯರು ಅಪಾಯಕಾರಿಯೆ?
◆ ನಂದೀಗ್ರಾಮ ಪ್ರಕರಣದ ನಂತರ ನಾವು ನಿರುತ್ತರರಾಗಿದ್ದೇವೆ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 21
ಹನೀಫ್ ಮತ್ತು ಮಾಧ್ಯಮಗಳ ಮಧ್ಯೆ ನಿಜವಾದ ಭಯೋತ್ಪಾದಕರು ಯಾರು?

ಪ್ರಶ್ನೆ ನಂ. 19ರ ನಮ್ಮ ಪ್ರಶ್ನೆ: ದೇವೇಗೌಡರಿಗೆ ತಾವು ಗಂಡಸೆಂಬುದರ ಅರಿವು ಈಗೇಕಾಯಿತು?

ನಿಮ್ಮ ಉತ್ತರ: "ಕೈ"ಲಾಗದೆ ಇದ್ದಾಗ ಪುರುಷತ್ವದ ಹಂಬಲ ಜಾಸ್ತಿ ಆಗುತ್ತಂತೆ!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ನಿರಂಜನ್, ಹುನಸನಹಳ್ಳಿ

ಶಿಕಾರಿಪುರದಲ್ಲಿ ಕಾಂಗ್ರೆಗೆ ಗಂಡು ಸಂತಾನವಿಲ್ಲ

ಜುಲೈ 25ರ ಸಂಚಿಕೆಯಲ್ಲಿ 'ನಕ್ಸಲ್ ಎಂಬ ಸೋಗಿನಡಿ ಅಮಾಯಕ ಗಿರಿಜನರ ಮಾರಣಹೋಮ' ವರದಿ ಕಂಡು ನಿಜಕ್ಕೂ ಮೂಕವಿಸ್ಮಿತನಾದೆ. ಆಳುವ ವರ್ಗಗಳ ಅಟ್ಟಹಾಸಕ್ಕೆ ಅಂತ್ಯವೇ ಇಲ್ಲವೇ? ಇವರೇನಾ ನಮ್ಮಿಂದ ಆರಿಸಿಹೋದ ಜನಪ್ರತಿನಿಧಿಗಳು ಎಂಬ ಶಂಕೆ ಮೂಡುತ್ತದೆ. ತಮ್ಮದೇ ನಾಡಿನಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಾ ಹೀಗೆ ಅವಸಾನವಾಗುವ ಪರಿ ನಿಜಕ್ಕೂ ಪ್ರಜ್ಞಾವಂತರ, ಕಣ್ಣನ್ನು ತೆರೆಸಬೇಕಿದೆ. ತಮ್ಮದೇ ಮತದಾನದ ಮೂಲಕ ಅಧಿಕಾರಶಾಹಿಗಳ ಕೈಗೆ ಆಡಳಿತ ಕೊಟ್ಟು ಅವರಿಂದಲೇ ಹತ್ಯೆಯಾಗುವ ಈ ಮುಠ್ಠಾಳತನಕ್ಕೆ ಕೊನೆ ಎಂದು! ಹೀಗೆ ಅಸಮಾನತೆ, ಶೋಷಣೆ ವಿರುದ್ಧ ಪ್ರತಿಭಟಿಸುವ, ದಂಗೆ ಎದ್ದ ಮಕ್ಕಳನ್ನೆಲ್ಲಾ ದಮನ ಮಾಡುವ ಖೂಳ ಸರ್ಕಾರದ ಕೃತ್ಯ ನಿಜಕ್ಕೂ ಅಕ್ಷಮ್ಯ. ಮಲೆನಾಡ ಮಡಿಲಲ್ಲಿ ಈಗ ರಕ್ತ ಬೀಜಾಸುರರ ಅಟ್ಟಹಾಸ ಹಾಸುಹೊಕ್ಕಾಗಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯೇ ಸರಿ. ಇನ್ನಾದರೂ ಸರ್ಕಾರ, ಪ್ರಜ್ಞಾವಂತರು ಮತ್ತು ನಕ್ಸಲ್‌ವಾದಿಗಳು ಪರಸ್ಪರ ಮಾತುಕತೆಗೆ ಮುಂದಾಗಲಿ. ಇಲ್ಲವಾದರೆ ಇನ್ನೆಷ್ಟು ಅಮಾಯಕ 'ದೇವರ ಹೆಣ'ಗಳ ತರ್ಪಣವಾಗುವುದೋ ಬಲ್ಲವರಾರು.

-ಗಾನಾಸುಮಾ, ಪಟ್ಟಸೋಮನಹಳ್ಳಿ



ಶಿಕಾರಿಪುರದಲ್ಲಿ ಯಡ್ಡಿಯ ಮಗ ಮತ್ತು ಆತನ ಪುಂಡ ಪಟಾಲಂನ ದೌರ್ಜನ್ಯ ಹಾಗೂ ವಿಜಯಲಕ್ಷ್ಮಿ ಎಂಬ ಹೋರಾಟಗಾರ್ತಿಯ ಬಗ್ಗೆ ಬಂದ ವರದಿಯಲ್ಲಿ 'ರಾಮಭಕ್ತರ' ಸ್ತ್ರೀ ಗೌರವವನ್ನು ಬಯಲಿಗೆಳೆದಿದ್ದೀರಿ.

ನಿಜ, ಯಡ್ಡಿ ಉಪಮುಖ್ಯಮಂತ್ರಿಯಾದ ಮೇಲೆ ಶಿಕಾರಿಪುರಕ್ಕೆ ದಂಡಿ ದಂಡಿ ಯೋಜನೆಗಳನ್ನು ಪ್ರಕಟಿಸಿ ಸಖತ್ ಹೆಸರಾದರು. ಜನರು ಬಿಡುಗಡೆಯಾದ ಕೋಟಿಗಳನ್ನು ಲೆಕ್ಕ ಹಾಕಿದರೆ ಹೊರತು ಯೋಜನೆಗಳಲ್ಲಿನ ಕಾಮಗಾರಿಯ ಗುಣಮಟ್ಟ, 'ಪರ್ಸಂಟೇಜು'ಗಳ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳಲಿಲ್ಲ. ಶಿಕಾರಿಪುರದ ಮಟ್ಟಿಗೆ ವಿರೋಧ ಪಕ್ಷ ನೆಲ ಹಿಡಿದು ಬಹಳ ಸಮಯವಾಗಿದೆ. ಯಡ್ಡಿ ಬಿಸಾಕುವ ಬ್ರೆಡ್ ಚೂರು ತಿಂದು ನಗರದ ಮಹಾದೇವಪ್ಪನಂಥವರ ಬಾಯಿ ಬಂದಾಗಿರುವುದೂ ಎಲ್ಲರಿಗೆ ತಿಳಿದ ವಿಷಯ.

ಆಡಿದ್ದೇ ಆಟ ಎಂಬ ಇಂಥ ಸಮಯದಲ್ಲಿ ವಿಜಯಲಕ್ಷ್ಮಿ ಎಂಬ ಮಹಿಳೆಯಿಂದ ಅಡಚಣೆ ಬಂದರೆ ಸಹಜವಾಗಿಯೇ ಹಿಂದೂ ದೇಶ ಭಕ್ತರಿಗೆ ಅವರನ್ನು ಸುಡುವಷ್ಟು ಸಿಟ್ಟು ಬರುತ್ತದೆ. ಪರಿಣಾಮ, ಹೆಣ್ಣಿನ ಮೇಲೆ ಕೈಮಾಡಿದ್ದೇ ಅಲ್ಲದೆ, ತಮ್ಮ ಪ್ರಭಾವ ಬಳಸಿ ಪೊಲೀಸರನ್ನು ತಮ್ಮ ಸಾಕು ನಾಯಿಗಳಂತೆ ಬಳಸಿಕೊಂಡಿದ್ದಾರೆ. ಇದನ್ನು ಯಾವ ಪತ್ರಿಕೆಗಳೂ, ಟೀವಿ ಚಾನೆಲ್‌ಗಳೂ ವರದಿ ಮಾಡಲಿಲ್ಲ. ಆದರೆ 'ಲಂಕೇಶ್' ಬಿಡಬೇಕಲ್ಲ, ಪತ್ರಿಕೆಗೆ ಧನ್ಯವಾದಗಳು. ಹಾಗೆಯೇ ಈ ಘಟನೆಯಿಂದ ಶಿಕಾರಿಪುರದಲ್ಲಿ ಕಾಂಗ್ರೆಸ್‌ಗೆ ಗಂಡು ಸಂತಾನವಿಲ್ಲ ಎಂಬುದೂ ಸಾಬೀತಾಗಿದೆ. ತಮ್ಮದೇ ಪಕ್ಷದ ಒಬ್ಬ ಮಹಿಳೆ ಮೇಲೆ ದೌರ್ಜನ್ಯವಾದಾಗಲೂ ಯಾವ ಮುಖಂಡನೂ ಸೊಲ್ಲೆತ್ತಿಲ್ಲ. ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಡುವ ವಿಜಯಲಕ್ಷ್ಮಿಯವರಿಗೆ ನಮ್ಮಂಥ ಪಕ್ಷಾತೀತರ ಬೆಂಬಲ ಸದಾ ಇರುತ್ತದೆ. ಅವರು ಹೋರಾಡುತ್ತಿರಲಿ. ಲಂಕೇಶ್ ಬರೆಯುತ್ತಿರಲಿ.

-ಕೆ. ಬೀನಾ, ಶಿಕಾರಿಪುರ

ತೆಹೊಗಳಿಕೆ

ಗಿರಿಜನರ ನೋವಿಗೆ ಸ್ಪಂದಿಸುತ್ತಿರುವ ಕಲ್ಕುಳಿ ವಿಠಲ ಹೆಗಡೆಯವರ ದನಿಯನ್ನು ಅಡಗಿಸಿ, ಅವರನ್ನು ಹೋರಾಟದಿಂದ ವಿಮುಖರನ್ನಾಗಿಸಲು ಕರ್ನಾಟಕದ ಪೊಲೀಸರು ಮತ್ತು ಕೋಮುವಾದಿಗಳು ಜಂಟಿಯಾಗಿ ಸಂಚನ್ನು ರೂಪಿಸಿದ್ದಾರೆ. ಈ ಸಂಚಿನ ಒಂದು ಭಾಗವೇ 'ವಿಠಲ ಹೆಗಡೆಗೆ ಹಣ ನೀಡಿ' ಎಂದು 'ನಕ್ಸಲರು', ಚಂದ್ರಶೇಖರ ಗೋರೆ ಅವರ ಮನೆ ಗೋಡೆಯ ಮೇಲೆ ಬರೆದು ಹೋಗಿದ್ದಾರೆ ಎಂಬ ಸುದ್ದಿ. ಈ ರೀತಿ ಬರೆದು ಹೋಗಿರುವ ನಕ್ಸಲರು ನಿಜವಾದ ನಕ್ಸಲರಾಗಿರದೆ, ಪೊಲೀಸರೇ ಸೃಷ್ಟಿಸಿರುವ ನಕಲಿ ನಕ್ಸಲೈಟರಾಗಿರುವ ಸಾಧ್ಯತೆಗಳೇ ಹೆಚ್ಚಾಗಿವೆ.

ಇತ್ತೀಚೆಗೆ ಅಮ್ಮಡ್ಡುವಿನಲ್ಲಿ ನಡೆದ ನಕಲಿ ಎನ್‌ಕೌಂಟರ್ ನಂತರ ಗಿರಿಜನರ ಹೋರಾಟಕ್ಕೆ ಮತ್ತು ವಿಠಲ ಹೆಗಡೆಯವರಿಗೆ ಸ್ಥಳೀಯರ ಬೆಂಬಲ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ವ್ಯಾಪಕವಾದ ಸಹಾನುಭೂತಿ ಮತ್ತು ಬೆಂಬಲ ವ್ಯಕ್ತ ವಾಗಿರುವುದರಿಂದ ಪೊಲೀಸರು ಮತ್ತು ಕೋಮುವಾದಿಗಳು ವಿಚಲಿತರಾಗಿದ್ದಾರೆ.

ಏನಾದರೂ ಮಾಡಿ ವಿಠಲ ಹೆಗಡೆಯವರ ಹೆಸರಿಗೆ ಮಸಿ ಬಳಿದು, ಅವರಿಗೆ ಜನ ಬೆಂಬಲ ಇಲ್ಲದಂತೆ ಮಾಡಿ, ಹಲವು ಸುಳ್ಳು ಮೊಕದ್ದಮೆಗಳನ್ನು ಅವರ ಮೇ[ಲೆ] ಹೂಡಿದ್ದಾರೆ. ಅಷ್ಟಕ್ಕೂ ಬಗ್ಗದಿದ್ದಾಗ ಯಾವುದಾ[ದ]ರೊಂದು ನಕಲಿ ಎನ್‌ಕೌಂಟರ್‌ನಲ್ಲಿ ಅವರನ[್ನು] ಮುಗಿಸಿದರೂ ಆಚ್ಚರಿಯಿಲ್ಲ.

ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋ[ಧಿ] ಒಕ್ಕೂಟದ ಕಾರ್ಯದರ್ಶಿ ಪರಮೇಶ್ವರ್‌ರನ[್ನು] ಪೊಲೀಸರು ಕೊಲೆ ಮಾಡಿದ್ದು ಇದೇ ರೀತಿಯ[ಲ್ಲಿ] ಪೊಲೀಸರು ಮತ್ತು ಕೋಮುವಾದಿಗಳ ಈ ಪಿತೂ[ರಿ]ಯನ್ನು 'ಲಂಕೇಶ್' ಬಯಲುಗೊಳಿಸಬೇಕಾಗಿ ವಿನಂ[ತಿ].

-ಎಸ್.ಎಸ್. ವೆಂಕಟೇಶ್, ಅಧ್ಯಕ್ಷ, ಜನ ಜಾಗೃತಿ ವೇದಿ[ಕೆ]

ಕಲಾಂ: ಮತ್ತೊಂದು ಮುಖ

ಕಲಾಂ ಬಗ್ಗೆ ನನಗೆ ಹಿಂದಿನಿಂದಲೂ ತದ್ವಿರುದ್ಧದ ಅಭಿಪ್ರಾಯಗಳಿವೆ. ಅವರು ಪ್ರಾಮಾಣಿಕರು ಮತ್ತು ನೈತಿಕತೆ ಹೊಂದಿರುವವರು ಎಂಬುದರ ಬಗ್ಗೆ ಎರಡು ಮಾತಿಲ್ಲ, ಹಾಗೆಯೇ ಅವರಿಗೆ ಅಧಿಕಾರ ದಾಹ ತುಂಬಾ ಇದೆಯೆಂಬುದರ ಬಗ್ಗೆ ಕೂಡ ಅನುಮಾನಗಳಿಲ್ಲ, ಇಲ್ಲವಾದರೆ ಓರ್ವ ಸಾಮಾನ್ಯ ವಿಜ್ಞಾನಿಯಾದ ಅವರು ಅದು ಹೇಗೆ 'ಮಿಸ್ಸೈಲ್ ಮ್ಯಾನ್' ಆಗಿ ರೂಪಾಂತರಗೊಳ್ಳುತ್ತಿದ್ದರು? ಮತ್ತು ಆ ಮೂಲಕ ಸಂಘ ಪರಿವಾರದ ಅಚ್ಚುಮೆಚ್ಚಿನ ವ್ಯಕ್ತಿಯಾಗುತ್ತಿದ್ದರು? ಯಾಕೆಂದರೆ ಅವರಿಗೆ ಯಾರಿಂದ ತನಗೆ ಲಾಭ ಎಂಬುದು ಚೆನ್ನಾಗಿ ಗೊತ್ತಿತ್ತು. ಇಲ್ಲಿ ಅವರೊಂದಿಗಿನ ನನ್ನ ಒಂದು ಅನುಭವದ ಬಗ್ಗೆ ಹೇಳಬಯಸುತ್ತೇನೆ.

ಅದು ಡಿಸೆಂಬರ್ 2002; ನರೇಂದ್ರ ಮೋದಿ ಆಗತಾನೆ ಬಹುಮತ ಪಡೆದಿದ್ದರು. ಬರೋಡಾದಲ್ಲಿದ್ದ ಒಂದು ಸ್ಥಳೀಯ ಮುಸ್ಲಿಮ್ ಶಾಲೆ- ಅದರ ಟ್ರಸ್ಟ್ ಸದಸ್ಯರಲ್ಲಿ ನಾನೂ ಒಬ್ಬ- ಶಾಲಾಮಕ್ಕಳಿಗೆಂದು ವಿಜ್ಞಾನ ಜಾತ್ರೆಯನ್ನು ಏರ್ಪಡಿಸಿತ್ತು. ಈ ಶಾಲೆಯ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳಲ್ಲಿ ಅರ್ಧ ಜನ ಹಿಂದೂಗಳು, ಉಳಿದ ಅರ್ಧ ಜನ ಮುಸಲ್ಮಾನರು. ಇಲ್ಲಿನ ತರಬೇತಿ ಉತ್ತಮವಾಗಿದ್ದರೂ ಶುಲ್ಕವು ಕಡಿಮೆಯೇ ಇದೆ. ಅಷ್ಟೇ ಅಲ್ಲದೆ, ಈ ವಿಜ್ಞಾನ ಜಾತ್ರೆಯನ್ನು ವಿಕ್ರಮ್ ಸಾರಾಭಾಯಿಯವರ ನೆನಪಿನಾರ್ಥ ಏರ್ಪಡಿಸಲಾಗಿತ್ತಲ್ಲದೆ, ಅವರ ವಿಧವೆಯೂ ಭಾಗವಹಿಸಲು ಒಪ್ಪಿಕೊಂಡಿದ್ದರು. ಆಗ ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಯವರೊಂದಿಗೆ ಹಲವಾರು ಬಾರಿ ಮಾತನಾಡಿದ ನಾನು ಕಲಾಂರವರು ಈ ಜಾತ್ರೆಯನ್ನು ಉದ್ಘಾಟಿಸಬೇಕೆಂದು ವಿನಂತಿಸಿಕೊಂಡೆ. ಅದಕ್ಕೆ, ಈ ಕಾರಣಗಳನ್ನೂ ನೀಡಿದೆ:

1: ಅವರ ಗುರು ಸಾರಾಭಾಯಿಯವರ ನೆನ[ಪಿ]ನಾರ್ಥ ನಡೆಯುತ್ತಿದ್ದ ವಿಜ್ಞಾನ ಜಾತ್ರೆ

2: ಮಕ್ಕಳಿಗೆಂದು ನಡೆಯುತ್ತಿದ್ದ ಜಾತ್ರೆ

3: ವಿಜ್ಞಾನ ಕುರಿತಾದ ಜಾತ್ರೆ

4: ಶಾಲೆಯು ಜಾತ್ಯತೀತ ಸಂಸ್ಕೃತಿಗೆ ಒಂ[ದು] ಉತ್ತಮ ಉದಾಹರಣೆಯಾಗಿದ್ದೆ 2002ರ ವಿಷಮ[ಯ] ವಾತಾವರಣವನ್ನೂ ಮೆಟ್ಟಿ ನಿಂತಿತ್ತು.

ಆದರೆ ನನ್ನ ಅಹವಾಲನ್ನು ತಿರಸ್ಕರಿಸಿದ ಕಲಾಂರವರು ತಮ್ಮ ಕಾರ್ಯದರ್ಶಿಗಳ ಮೂಲಕ ನೀಡಿ[ದ] ಕಾರಣ: ತಾವು ಇತ್ತೀಚೆಗೆ ಗುಜರಾತಿಗೆ ಭೇಟಿ ನೀಡಿ[ದ್ದೆ]ವೆಂದೂ, ಪದೇ ಪದೇ ಅದೇ ಜಾಗಕ್ಕೆ ಹೋಗುವು[ದ]ಕ್ಕಾಗುವುದಿಲ್ಲವೆಂದೂ ಹೇಳಿದರು.

ಆದರೆ ಇದಾದ ಕೇವಲ ಎರಡು ವಾರಗಳ ನಂ[ತರ] ಕಲಾಂರವರು ಗುಜರಾತಿಗೆ ಭೇಟಿ ಇಟ್ಟಾಗ ನನಗಾ[ದ] ಅಚ್ಚರಿ ಕಡಿಮೆಯದ್ದೇನಲ್ಲ. ಇಷ್ಟು ಬೇಗನೆ ಗುಜರಾ[ತಿಗೆ] ಬರಲಾಗುವುದಿಲ್ಲ ಎಂದು ನಮ್ಮ ಆಹ್ವಾನವ[ನ್ನು] ತಿರಸ್ಕರಿಸಿದ್ದ ಕಲಾಂರವರು ಅದಾದ ಹದಿನೈದು ದಿನ[ಗಳ] ನಂತರ ಸ್ವಾಮಿನಾರಾಯಣನ ಪಂಗಡದವ[ರು] ರಾಜಕೋಟ್‌ನಲ್ಲಿ ನಡೆಸುವ ಶಾಲೆಯ ಕಾರ್ಯಕ್ರಮ[ಕ್ಕೆ] ಹಾಜರಾದರು.

ಇದರರ್ಥ ಇಷ್ಟೇ: ಗುಜರಾತಿನ ಮುಸಲ್ಮಾ[ನ]ರೊಂದಿಗೆ ಯಾವ ನಂಟೂ ಕಲಾಂರವರಿಗೆ ಬೇ[ಕಿ]ಲ್ಲ.

ಇಂ

ಜೆ.ಎಸ್. ಬಂದೂಕುವಾ



ಕನ್ನಡಿಗರಿಗೆ ಮುನಿರತ್ನರವರ ರೀಮೇಕ್ ಭಿಕ್ಷೆ!

ಬೇರೆ ಭಾಷೆಯ ಹಳಸಲ ಅನ್ನವನ್ನು ಕನ್ನಡಿಗರಿಗೆ ಉಣಿಸುವಲ್ಲಿ ನಿರ್ಮಾಪಕ ಮುನಿರತ್ನ ಎತ್ತಿದ ಕೈ. ವತ್ತು ವರ್ಷಗಳ ಹಳೆಯದ್ದಾದ 'ರಕ್ತ ಕಣ್ಣೀರು' ಬಡಿಸಿ ಗೆದ್ದ ನಂತರವಂತೂ ಅವರ ಈ ಚಟ ಹೆಚ್ಚಾಗಿರುವಂತಿದೆ. ಚಟಕ್ಕೆ ಬಿದ್ದೇ ಅವರು ಉಪ್ಪಿ ನಟಿಸಬೇಕಿದ್ದ 'ದೇವದಾಸ್' ಚಿತ್ರವನ್ನು ಮಾಡಲು ಹೊರಟಿದ್ದರು. ಆದರೆ ದ್ಯಾಕೋ ಅವರ ದೇವದಾಸ್ ಹೆಂಡದ ಬಾಟಲಿಯಿಂದ ಮೇಲೆದ್ದು ಬರಲೇ ಇಲ್ಲ. ಆದಾದನಂತರ ಅವರು ಇಟ್ಟಿದ್ದೇ 'ಪಿತಾಮಗನ್' ಚಿತ್ರದ ರೀಮೇಕ್ ಆದ 'ಅನಾಥರು' ತ್ರಕ್ಕೆ. ಹಲವು ಫ್ಲಾಪ್ ಚಿತ್ರಗಳಿಂದ ತಬ್ಬಲಿಗಳಂತಾಗಿರುವ ಉಪ್ಪಿ ಮತ್ತು ದರ್ಶನ್ ಇದರಲ್ಲಿ ಮೊದಲ ಬಾರಿಗೆ ಜೊತೆಯಾಗಿ ಟಿಸುತ್ತಿದ್ದಾರೆ.



ಇನ್ನೇನು ಬಿಡುಗಡೆಯಾಗಲಿರುವ 'ಅನಾಥರು' ಉಪ್ಪಿ ಮತ್ತು ದರ್ಶನ್‌ಗೆ ಪುನರ್ಜನ್ಮ ನೀಡುತ್ತದೋ ಅಥವಾ ಜನರು ಅದನ್ನು ತಬ್ಬಲಿ ಮಾಡುತ್ತಾರೋ ಎನ್ನುವುದು ಇನ್ನೂ ನಿರ್ಧಾರವಾಗಬೇಕಿರುವ ಸಂದರ್ಭದಲ್ಲೇ ಮುನಿರತ್ನ ಮತ್ತೊಂದು ರೀಮೇಕ್ ಚಿತ್ರಕ್ಕೆ ಕೈ ಹಾಕಿದ್ದಾರೆ. ಂದಾನೊಂದು ಕಾಲಕ್ಕೆ ಜಯಪ್ರದಾ ಮತ್ತು ಶ್ರೀದೇವಿ ಟಿಸಿದ್ದ ಚಿತ್ರವನ್ನು ಈಗ 'ಪ್ರೇಮಭಿಕ್ಷೆ'ಯ ರೂಪದಲ್ಲಿ ನ್ನಡಿಗರಿಗೆ ನೀಡಲು ಮುನಿರತ್ನ ಸಿದ್ಧರಾಗುತ್ತಿದ್ದಾರೆ.

ಇದು ಮುನಿರತ್ನರವರ ಕನ್ನಡ ಪ್ರೇಮವೋ, ಇಲ್ಲಿನ ್ರೇಕ್ಷಕರಿಗೆ ನೀಡುವ ಭಿಕ್ಷೆಯೋ ಒಂದೂ ಅರ್ಥವಾಗುತ್ತಿಲ್ಲ.....

ಆಶಾಡದ ನಂತರ ಸುರಿಮಳೆ

ಈಗಾಗಲೇ ಹಲವಾರು ಕನ್ನಡ ಚಿತ್ರಗಳು ಸೆಟ್ಟೇರಿದ್ದು ತಂತ್ರಜ್ಞರಿಂದ ಹಿಡಿದು ಲೈಟ್ ಬಾಯ್ಸ್ ತನಕ ಎಲ್ಲರಿಗೂ ಬೇಡಿಕೆ ಹೆಚ್ಚಾಗಿದೆ ಮಾತ್ರವಲ್ಲ ಇಂತಹವರ ಅಭಾವದಿಂದ ಅದೆಷ್ಟೋ ಚಿತ್ರಗಳನ್ನು ಮುಂದೂಡಲಾಗುತ್ತಿದೆ. ಆದರೂ ಪ್ರಸ್ತುತ ಆಶಾಡ ಮಾಸ ಮುಗಿದ ಕೂಡಲೇ ಇನ್ನೂ ಹಲವಾರ ಚಿತ್ರಗಳು ಸೆಟ್ಟೇರುವುದಕ್ಕೆ ಸಜ್ಜಾಗಿನಿಂತಿವೆ. ಅದರಲ್ಲೂ ವರ ಮಹಾಲಕ್ಷ್ಮಿ ಹಬ್ಬದ ದಿನ ಮುಹೂರ್ತ ಆರಂಭಿಸಲು ದೊಡ್ಡ ಪೈಪೋಟಿಯೇ ನಡೆಯುತ್ತಿದೆ.

ಈಗಾಗಲೇ ನೂರಕ್ಕೂ ಹೆಚ್ಚು ಚಿತ್ರಗಳು ನಿರ್ಮಾಣಗೊಳ್ಳುತ್ತಿದ್ದು ಇವುಗಳ ಸಂಖ್ಯೆ ನೂರೆಪ್ಪತ್ತರ ಹತ್ತಿರತ್ತಿರ ತಲುಪುವ ಸಾಧ್ಯತೆಯಿದೆ. ಇಷ್ಟು ದಾಖಲೆ ಸಂಖ್ಯೆಯ ಚಿತ್ರಗಳ ನಿರ್ಮಾಣಕ್ಕೆ ಕಾರಣವಾಗಿದ್ದು ಏನು ಗೊತ್ತೇ? ಒಂದು ಹೊಸಬರ ಚಿತ್ರಗಳು ಕಂಡಿರುವ ಯಶಸ್ಸು, ಎರಡು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಗಗನಕ್ಕೇರಿರುವುದು!



ಮಂದಿರಾಳ ಕಾಂಡೋಮ್ ವಿತರಣೆ!

ಕ್ರಿಕೆಟ್ ಜಗತ್ತಿನ ಏಕೈಕ ಸೆಕ್ಸ್‌ಬಾಂಬ್ ಮಂದಿರಾ ಬೇಡಿ ಈಗ ಹೊಸ ಅವತಾರ ಹೊತ್ತಿದ್ದಾಳೆ. ಇದೇ ವಾರ ಆಕೆ ಮುಂಬೈ ನಗರದ ಕಾಮಾಟಿಪುರದಲ್ಲಿನ ಮಹಿಳೆಯರಿಗೆ ಎಲೆ ಅಡಿಕೆ ಸ್ವಾದವಿರುವ ಆರು ಸಾವಿರ ಕಾಂಡೋಮ್‌ಗಳನ್ನು ವಿತರಿಸಲಿದ್ದಾಳೆ. ಏಡ್ಸ್ ವಿರುದ್ಧ ಎನ್.ಜಿ.ಓ.ದೊಂದಿಗೆ ಪ್ರಚಾರಾಂದೋಲನದಲ್ಲಿ ಭಾಗಿಯಾಗಿರುವ ಮಂದಿರಾ ಬೇಡಿಯ ಈ ಕಾರ್ಯವನ್ನು ಅಲ್ಲಿನ ಮಹಿಳೆಯರು ಒಮ್ಮನಸ್ಸಿನಿಂದ ಸ್ವಾಗತಿಸಿದ್ದಾರಂತೆ.



ಡಾ|| ಜಯಮಾಲಾ

ಕನ್ನಡ ಚಿತ್ರರಂಗದ ಹಲವು ಗಣ್ಯರಿಗೆ- ಉದಾಹರಣೆ ರಾಜ್‌ಕುಮಾರ್, ವಿಷ್ಣುವರ್ಧನ್- ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿವೆ. ಆದರೆ ಇದೇ ಮೊದಲ ಬಾರಿಗೆ ನಟಿಯೊಬ್ಬರು ತಮ್ಮ ವೈಯಕ್ತಿಕ ಶ್ರಮ ಮತ್ತು ಪ್ರಯತ್ನದಿಂದ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಆಕೆ ಬೇರಾರೂ ಅಲ್ಲ, ಜಯಮಾಲಾ.

ಈಕೆ ಪ್ರತಿಬಾರಿ ಅಚ್ಚರಿಮೂಡಿಸುವ ಮಹಿಳೆ. ಒಂದೆಡೆ ಅಪ್ಪಟ ಕಮರ್ಶಿಯಲ್ ಚಿತ್ರಗಳಲ್ಲಿ ನಟಿಸಿ, ನಿರ್ಮಿಸಿ ಖ್ಯಾತಿಗಳಿಸಿದ್ದರೂ 'ತಾಯಿ ಸಾಹೇಬಾ' ದಂತಹ ಕಲಾತ್ಮಕ ಚಿತ್ರವನ್ನೂ ಮಾಡಿ ಸೈ ಎನ್ನಿಸಿಕೊಂಡಾಕೆ. ಇನ್ನೊಂದೆಡೆ ಪುರುಷ ಪ್ರಧಾನವಾದ ಫಿಲ್ಮ್ ಛೇಂಬರ್‌ನಲ್ಲೂ ಉಪಾಧ್ಯಕ್ಷೆ, ಕೋಶಾಧಿಕಾರಿಯಾಗಿ ಸೇವೆಸಲ್ಲಿಸಿ ದಕ್ಷತೆಯನ್ನು ಮೆರೆದರೂ ಶಬರಿಮಲೈನಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಗರ್ಭಗುಡಿಯನ್ನು ಪ್ರವೇಶಿಸಿ ಪುರುಷ ಭಕ್ತರ ಕೋಪಕ್ಕೆ ಗುರಿಯಾದವರು. ಮತ್ತೊಂದೆಡೆ ರಾಹುಕಾಲ, ವಾಸ್ತು ಶಾಸ್ತ್ರ ಎಂಬೆಲ್ಲ ಮೂಢನಂಬಿಕೆಗಳಲ್ಲಿ ದಿನನಿತ್ಯ ಮುಳುಗೇಳುತ್ತಿದ್ದರೂ ತನ್ನ ವೈಯಕ್ತಿಕ ಬದುಕಿನಲ್ಲಿ ಎದುರಾದ ಎಲ್ಲ ಸವಾಲುಗಳನ್ನು ಮೆಟ್ಟನಿಂತವರು.

ಈಗ ಜಯಮಾಲಾ ನಿರಾಶ್ರಿತ ಮಹಿಳೆಯರ ಪುನರ್ವಸತಿ ಎಂಬ ವಿಚಾರವನ್ನು ಕುರಿತು ಪ್ರಬಂಧವನ್ನು ಮಂಡಿಸಿ ಹಂಪಿ ಕನ್ನಡ ವಿವಿಯಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಇಟ್ಟು ಬಣ್ಣದ ಲೋಕಕ್ಕೆ ಬಂದ ಜಯಮಾಲಾರವರು ಮಾಡಿರುವ ಸಾಧನೆ ಇದು. ಅವರಿಗೆ ನಮ್ಮ ಅಭಿನಂದನೆಗಳು.



ಶಿಲ್ಪಾ ಶೆಟ್ಟಿಯ ಹೊಸ ವಿವಾದ

ಬಿಗ್ ಬ್ರದರ್ ಖ್ಯಾತಿಯ, ಬಾಲಿವುಡ್‌ನ ನಟಿ ಶಿಲ್ಪಾ ಶೆಟ್ಟಿ ಈಗ ಹೊಸ ವಿವಾದದಲ್ಲಿ ಮಿಂಚುತ್ತಿದ್ದಾಳೆ. ತನ್ನ ಹೆಸರಿನಲ್ಲಿ 'ಎಸ್2' ಎಂಬ ಸುಗಂಧವನ್ನು ಇತ್ತೀಚೆಗೆ ಬಿಡುಗಡೆ ಮಾಡಿರುವ ಶಿಲ್ಪಾ ಶೆಟ್ಟಿ ಅದಕ್ಕೆಂದು ಇಂಗ್ಲೆಂಡಿನ ಕೋಟ್ಯಾಧಿಪತಿ ರಾಜ್ ಕುಂದ್ರಾನ ಸಹಾಯ ಪಡೆದಿದ್ದಳು. ಆದರೆ ಅದೇ ಈಗ ಅವಳನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದೆ.

ಯಾಕೆಂದರೆ ರಾಜ್ ಕುಂದ್ರಾನ ಪತ್ನಿ "ನನ್ನ ದಾಂಪತ್ಯ ಜೀವನದಲ್ಲಿ ಬಿರುಕು ಮೂಡಲು, ನನ್ನ ಗಂಡ ನನ್ನನ್ನು ತ್ಯಜಿಸಲು ಶಿಲ್ಪಾಶೆಟ್ಟಿಯೇ ಕಾರಣ" ಎಂದು ಈಗ ಎಲ್ಲೆಡೆ ಬೊಬ್ಬೆ ಹೊಡೆಯುತ್ತಿದ್ದಾಳೆ. ಇದರಿಂದ ಕೆರಳಿರುವ ಶಿಲ್ಪಾ "ಅವರಿಬ್ಬರ ನಡುವೆ ಒಂದು ವರ್ಷದ ಹಿಂದೆಯೇ ಮನಸ್ತಾಪಗಳು ಕಾಣಿಸಿಕೊಂಡು, ಅವರು ಬೇರೆಬೇರೆ ಆಗಿದ್ದರು. ಈಗ ತನ್ನ ವೈಯಕ್ತಿಕ ಬದುಕಿನ ದುರಂತಕ್ಕೆ ನನ್ನನ್ನು ದೂರುವುದು ಸರಿಯಲ್ಲ. ನನ್ನ ಸಂಪ್ರದಾಯ ದಾಂಪತ್ಯ ಬದುಕನ್ನು ಹಾಳು ಮಾಡುವಂತಹದ್ದಲ್ಲ. ಆಕೆ ನನ್ನ ಬಗ್ಗೆ ಹೀಗೆ ಮಾತನಾಡುವುದನ್ನು ಮುಂದುವರೆಸಿದರೆ ಅವಳ ವಿರುದ್ಧ ನ್ಯಾಯಾಲಯದ ಮೊರೆ ಹೋಗುತ್ತೇನೆ" ಎಂದು ಹೇಳಿದ್ದಾಳೆ.

R.B.P. LANKESH, Kannada Weekly Price Rs. 10/- 8-8-2007 RNI No. KARKAN2005/14648 Regd.No.KA/BG(S)/2036/2005-



ಉಪ್ಪಿ ಮತ್ತೆ ನಿರ್ದೇಶನಕ್ಕೆ?

ಕಳೆದ ಕೆಲ ವರ್ಷಗಳಿಂದ ನಿರ್ದೇಶನವನ್ನೇ ಸಂಪೂರ್ಣವಾಗಿ ಕೈಬಿಟ್ಟು ಬರೀ ನಟನೆಯಲ್ಲಿ ತೊಡಗಿದ್ದ ಉಪೇಂದ್ರರಿಗೆ ಈಗ ಮಾಡು ಇಲ್ಲವೆ ಮಡಿ ಎಂಬಂತಹ ಪರಿಸ್ಥಿತಿ ಎದುರಾಗಿದೆ. ಆದ್ದರಿಂದಲೇ ಮೊನ್ನೆ "ನಾನು ಈ ವರ್ಷ ನಿರ್ದೇಶನ ಮಾಡಲೇಬೇಕು. ಇಲ್ಲದಿದ್ದರೆ ಹೊಸಬರ ಪ್ರವಾಹದಲ್ಲಿ ನಾನು ಕೊಚ್ಚಿಹೋಗುವ ಸಾಧ್ಯತೆ ಇದೆ" ಎಂದು ಉಪೇಂದ್ರ ಪ್ರಾಮಾಣಿಕವಾಗಿ ಹೇಳಿದ್ದು.

`H₂0' ಚಿತ್ರದ ನಂತರ ನಿರ್ದೇಶನಕ್ಕೆ ಟಾಟಾ ಹೇಳಿದ್ದ ಉಪೇಂದ್ರ ಫುಲ್ ಟೈಂ ನಾಯಕನಟನಾಗಿ ಎಸ್ಟಾಬ್ಲಿಷ್ ಆಗುವತ್ತ ತಮ್ಮ ಎಲ್ಲ ಗಮನವನ್ನು ಕೇಂದ್ರೀಕರಿಸಿದ್ದರು. ಅದರಲ್ಲಿ ಕೆಲವು ಚಿತ್ರಗಳು ಗೆದ್ದರೆ ಮಿಕ್ಕೆಲ್ಲವೂ ಫ್ಲಾಪ್ ಆಗಿದ್ದವು. ಈಗ ನೋಡಿದರೆ ಹೊಸ ನಾಯಕರು ಭರ್ಜರಿ ಎಂಟ್ರಿ ಪಡೆದಿದ್ದಾರಲ್ಲದೆ, ಹಳೆ ನಿರ್ಮಾಪಕರು ಉಪ್ಪಿ ತಲೆಮಾರಿನ ನಟರತ್ತ ತಿರುಗಿಯೂ ನೋಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತನ್ನ ಉಳಿವಿಗಾಗಿ ಉಪ್ಪಿ ಏನನ್ನು ಮಾಡಬೇಕು?

ತಾನೇ ನಾಯಕ ನಟನಾಗಿ, ತನಗೆ ಸೂಟ್ ಆಗುವಂತಹ ಪಾತ್ರವನ್ನು ಸೃಷ್ಟಿಸಿ, ತನ್ನನ್ನು ತಾವೇ ನಿರ್ದೇಶಿಸಿಕೊಳ್ಳಬೇಕಿರುವ ಅನಿವಾರ್ಯತೆ ಅವರಿಗೆ ಎದುರಾಗಿದೆ.

ಈ ಮಧ್ಯೆ ಉಪೇಂದ್ರ ನೆರೆಯ ತೆಲುಗು ಸಿನಿಮಾಗಳಲ್ಲಿ ಖಳನಾಯಕನಾಗಿ ಕೂಡಾ ನಟಿಸುತ್ತಿದ್ದಾರೆ. ಕನ್ನಡದಲ್ಲಿ ಹೀರೋ ಆಗಿರುವ ಅವರು ತೆಲುಗಿನ ನಾಯಕರ ಕೈಯಲ್ಲಿ ಹೊಡೆಸಿಕೊಳ್ಳುವ ವಿಲ್ಲನ್ ಆಗುವ ಅಗತ್ಯವಾದರೂ ಏನಿತ್ತು?

ಅದೇನೇ ಇರಲಿ, ಬರೀ ಗಿಮಿಕ್‌ಗಳಿಂದ ಸದಾ ಸುದ್ದಿಯಲ್ಲಿರುತ್ತಿದ್ದ ಉಪ್ಪಿ ಈಗ ಸಪ್ಪೆಯಾಗಿದ್ದಾರೆ. ನಿರ್ದೇಶನವೊಂದೇ ಈಗ ಅವರ ಪಾಲಿಗೆ ಉಳಿದಿರುವ ಹಳೆ ಗಿಮಿಕ್ ಅಂದರೆ ತಪ್ಪಾಗಲಾರದು.

ಟೇಕ್ ಒನ್, ಗೆಟ್ ಒನ್ ಫ್ರೀ?



ಒಂದೆರಡು ವರ್ಷಗಳ ಹಿಂದೆ ವಿಜಯ ರಾಘವೇಂದ್ರ ಮತ್ತು ಮುರಳಿ ಎಂಬ ಸಹೋದರದ್ವಯರನ್ನು ಒಟ್ಟಿಗೆ ಹಾಕಿ ಚಿತ್ರ ಮಾಡಲು ಹಲವರು ಪ್ರಯತ್ನಿಸಿದ್ದರು. ಆದರೆ ಆಗ ಅವರಿಬ್ಬರ ತಂದೆ ಚಿನ್ನೇಗೌಡರು ತಮ್ಮ ಮಕ್ಕಳ ಜಂಟಿ ಕಾಲ್‌ಶೀಟನ್ನು ಬೇರೆಯವರಿಗೆ ಯಾಕೆ ಕೊಡಬೇಕು, ತಾನೇ ಚಿತ್ರ ನಿರ್ಮಿಸಬಾರದೇಕೆ ಎಂದೆಲ್ಲ ಯೋಚಿಸಿದ್ದರು ಮಾತ್ರವಲ್ಲ ಅವರ ಕಾಲ್‌ಶೀಟ್ ಕೇಳಿದವರಿಗೆ ದೊಡ್ಡ ರೇಟ್ ಹೇಳಿ ಓಡಿಸಿದ್ದರು.

ಆದರೆ ಈಗ ಕಾಲ ಬದಲಾಗಿದೆ. ಇವತ್ತು ಅವರಿಬ್ಬರನ್ನು ಹಾಕಿಕೊಂಡು ಚಿತ್ರವೊಂದನ್ನು ನಿರ್ಮಿಸುವುದಿರಲಿ, ಅವರಲ್ಲಿ ಒಬ್ಬರನ್ನಾದರೂ ಹಾಕಿಕೊಂಡು ಚಿತ್ರಮಾಡುವುದಕ್ಕೇ ಯಾರೂ ಮುಂದೆ ಬರುತ್ತಿಲ್ಲ. ಯಾಕೆಂದರೆ ಅವರಿಬ್ಬರಿಗೂ ಇವತ್ತು ಮಾರುಕಟ್ಟೆ ಇಲ್ಲ.

ಇದೆಲ್ಲದರಿಂದ, ಹಿಂದೆಲ್ಲ ಒಬ್ಬ ಮಗನಿಗೇ ಡಬ್ಬಲ್ ರೇಟ್ ಕೇಳುತ್ತಿದ್ದ ಚಿನ್ನೇಗೌಡರು ಈಗ 'ಟೇಕ್ ಒನ್ ಗೆಟ್ ಒನ್ ಫ್ರೀ' ಎನ್ನುವ ಸ್ಥಿತಿಗೆ ತಲುಪಿದ್ದಾರೆಯೇ ಎಂಬ ಪ್ರಶ್ನೆ ಗಾಂಧಿನಗರದಲ್ಲಿ ಸುತ್ತಾಡುತ್ತಿದೆ. ಯಾಕೆಂದರೆ ಅವರ ಇಬ್ಬರು ಪುತ್ರರು ಮೊದಲ ಬಾರಿಗೆ ಜೊತೆಜೊತೆಯಾಗಿ 'ಮಿಂಚಿನ ಓಟ' ಎಂಬ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಆದರೆ ಇದರ ನಿರ್ಮಾಪಕ ಸಾರಾ ಗೋವಿಂದು ಸಹೋದರರ ಕಾಲ್‌ಶೀಟಿಗೆ ಎಷ್ಟು ಹಣ ಕೊಟ್ಟಿದ್ದಾರೆ ಎಂಬುದು ಸ್ಪಷ್ಟವಾಗಿಲ್ಲ.

ಅಂದಹಾಗೆ ಇದನ್ನು 'ಸೈನೈಡ್' ಖ್ಯಾತಿಯ ರಮೇಶ್ ನಿರ್ದೇಶಿಸಲಿದ್ದು, ರಮ್ಯಾ ನಾಯಕಿಯಾಗಿ ನಟಿಸುತ್ತಿದ್ದಾಳೆ.

ಶಿವಣ್ಣ ನಿರ್ದೇಶನದಲ್ಲಿ ಅನಂತ್ ನಾಗ್



ಚಿತ್ರರಂಗದಲ್ಲಿ ಎರಡು ದಶಕಗಳ ಕಾಲವನ್ನು ನಟನಾಗಿ ಕಳೆದಿರುವ ಶಿವರಾಜ್‌ಕುಮಾರ್‌ರವರ ಅಂತರಾಳದಲ್ಲಿ ತಾನೊಂದು ಚಿತ್ರ ನಿರ್ದೇಶಿಸಬೇಕೆಂಬ ಕಾತರ ದಿನೇದಿನೇ ಹೆಚ್ಚಾಗುತ್ತಿದೆ. ಈಗ ಆ ನಿಟ್ಟಿನಲ್ಲಿ ಅವರೊಂದು ನಿರ್ಧಾರಕ್ಕೆ ಬಂದಿದ್ದಾರೆ. ಮುಂದಿನ ವರ್ಷ ಚಿತ್ರವೊಂದನ್ನು ನಿರ್ದೇಶಿಸುವ ಉದ್ದೇಶವನ್ನು ಹೊಂದಿರುವ ಶಿವಣ್ಣ ತಾನು ಅದರಲ್ಲಿ ನಟಿಸುವುದಿಲ್ಲ ಎಂದೂ ಶಪಥಗೈದಿದ್ದಾರೆ. "ಹಾಗಾದರೆ ಅದರ ಹೀರೋ ಯಾರೂ?" ಎಂದು ಮೊನ್ನೆ ಅವರನ್ನು ಪ್ರಶ್ನಿಸಿದಾಗ ಅವರು "ನನ್ನ ಚೊಚ್ಚಲ ನಿರ್ದೇಶನದ ಚಿತ್ರಕ್ಕೆ ಪುನೀತ್ ರಾಜ್‌ಕುಮಾರ್ ಅಥವಾ ಅನಂತ್‌ನಾಗ್ ನಾಯಕ ನಟ" ಎಂದು ಉತ್ತರಿಸಿದರು.



ಅಷ್ಟಕ್ಕೇ ಶಿವಣ್ಣ ಸುಮ್ಮನಾಗದೆ, ಅನಂತ್‌ನಾಗ್ ಅವರನ್ನು ಬಾಯಿತುಂಬ ಹೊಗಳುತ್ತಾ "ಅಂತಹ ಒಬ್ಬ ನಟನನ್ನು ನಾನು ನೋಡಿಯೇ ಇಲ್ಲ" ಎಂದು ಭಾವಾವೇಶದಿಂದ ನುಡಿದರು. ಇವತ್ತು ಕಮರ್ಷಿಯಲ್ ಸಿನಿಮಾಗಳ ನಿರ್ಮಾಪಕ, ನಿರ್ದೇಶಕರೆಲ್ಲಾ ಅನಂತ್‌ನಾಗ್ ಅವರನ್ನು ಮರೆತಿರುವಾಗ ಶಿವರಾಜ್ ಕುಮಾರ್ ಅವರನ್ನೇ ಹಾಕಿಕೊಂಡು ಚಿತ್ರ ನಿರ್ದೇಶಿಸುತ್ತೇನೆ ಎಂದು ಹೇಳಿರುವುದು ಅವರ ಸದಭಿರುಚಿಯನ್ನು ಮತ್ತು ಅನಂತ್‌ನಾಗ್‌ರವರ ಅಪಾರ ಪ್ರತಿಭೆಯನ್ನು ತೋರಿಸುತ್ತದೆ. 2008ರಲ್ಲಿ ನಿರ್ದೇಶಕರಾಗುವ ಶಿವರಾಜ್ ಕುಮಾರ್ ಕನಸು ನನಸಾಗಲಿ.....

ಬೆಳ್ಳುಳ್ಳಿಗೂ, ಐಟಂ ಸಾಂಗಿಗೂ ಯಾವ ಸಂಬಂಧ

ಮೊನ್ನೆ ಬಿಡುಗಡೆಯಾಗಿರುವ 'ಮೀರಾ ಮಾಧವ ರಾಘವ' ಚಿತ್ರದಲ್ಲಿ ಒಂದು ಸಾ... ಐಟಂ ಸಾಂಗ್ ಇದೆ. ಸಂಗೀತಗಾರ್ತಿಯಾಗಿರುವ ಚಿತ್ರದ ನಾಯಕಿ ಹಣಕಾಸಿನ ಬಿಕ್ಕಟ್ಟಿನ... ಸಿಲುಕಿಕೊಂಡಾಗ ವೇಷ ಮರೆಸಿಕೊಂಡು ಕ್ಲಬ್‌ವೊಂದರಲ್ಲಿ ಆಕೆ ಹಾಡುವ ದೃಶ್ಯವದು. ಆದ... ಆ ಸಂದರ್ಭದಲ್ಲಿ ಆಕೆ ಹಾಡುವ 'ಐಟಂ' ಸಾಂಗ್ ಎಂತಹದ್ದೆಂದರೆ ಅದರ ಪದಗಳು 'ಬೆಳ್ಳುಳ್ಳಿ, ಬೆಳ್ಳುಳ್ಳಿ' ಎಂದು ಸಾಗುತ್ತದೆ.



ಅಲ್ಲ ಐಟಂ ಸಾಂಗಿಗೂ, ಬೆಳ್ಳುಳ್ಳಿಗೂ ಯಾವ ಸಂಬಂಧ? ಎಂಬ ಪ್ರಶ್ನೆಯನ್ನು ಇಟ್ಟುಕೊಂಡು ಉತ್ತರಕ್ಕಾಗಿ ಎಷ್ಟೇ ಹುಡುಕಾಡಿದರೂ ಅದೊಂದು ಒಗಟಾಗಿಯೇ ಉಳಿದಿತ್ತು. ಇದರ ಬಗ್ಗೆ ನಾವೆಲ್ಲ ತಲೆಕೆಡಿಸಿಕೊಂಡು ಕೂತಿದ್ದಾಗ ನಮ್ಮ ಕಿಡಿಗೇಡಿ ಮಿತ್ರರೊಬ್ಬರು "ಯುರೇಕಾ, ಉತ್ತರ ಸಿಕ್ಕಿತು" ಎಂದರು. "ಏನು?" ಎಂದು ನಾವು ಕೇಳಿದಾಗ ಅವರು "ಆ ಚಿತ್ರದ ನಿರ್ದೇಶಕ, ನಿರ್ಮಾಪಕ ಸೇರಿದಂತೆ ಅವರ ತಂಡದಲ್ಲಿ ಬಹಳಷ್ಟು ಜನ ಬ್ರಾಹ್ಮಣರೇ ಆಗಿದ್ದಾರೆ ಅನ್ನಿಸುತ್ತೆ, ಅದಕ್ಕೆ ಅವರಿಗೆ ಬೆಳ್ಳುಳ್ಳಿಯೇ ಹಾಟ್ ಐಟಂ ಆಗಿ ಕಂಡಿದೆ" ಅಂದರು!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44